ಕಾಯಕವೇ ಕೈಲಾಸ



# ಸಿದ್ಧಗಂಗಾ



ಪರಿಸರ ರಕ್ಷಣೆ ನಮ್ಮೆಲ್ಲರ ಹೊಣೆ

ಸಂಪುಟ : ೬೨ ಜೂನ್ ೨೦೨೬ ಸಂಚಿಕೆ : ೦೬



೨೦೨೬ ಮೇ ೧೦ ರಂದು, ಅಮೇರಿಕಾದ ಕ್ಯಾಲಿಫೋರ್ನಿಯಾದ ಡಬ್ಲಿನ್‌ನಲ್ಲಿ (SMAUSA) ಶ್ರೀಮಠದ ಹಳೆವಿದ್ಯಾರ್ಥಿಗಳು ಹಾಗೂ ಹಿತೈಷಿಗಳ ಸಂಘ ಬಸವ ಜಯಂತಿ, ಪರಮಪೂಜ್ಯ ಡಾ. ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರ ೧೧೯ನೇ ಜಯಂತಿ ಹಾಗೂ ಮಾತೆಯರ ದಿನಾಚರಣೆಯ ಅಂಗವಾಗಿ ಆಯೋಜಿಸಿದ್ದ ಕಾರ್ಯಕ್ರಮವನ್ನು ಪರಮಪೂಜ್ಯ ಶ್ರೀ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳವರು ಜ್ಯೋತಿ ಬೆಳಗಿಸಿ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಶ್ರೀ ರೇಣುಕಾನಂದಸ್ವಾಮಿ ಹಾಗೂ ಡಾ. ನಾಗಣ್ಣ ಅವರು ಉಪಸ್ಥಿತರಿದ್ದರು.



ಅಮೇರಿಕಾದ ಕ್ಯಾಲಿಫೋರ್ನಿಯಾದಲ್ಲಿ ಏರ್ಪಡಿಸಿದ್ದ ಸಮಾರಂಭದಲ್ಲಿ ಶ್ರೀಮಠದ ಹಳೆಯ ವಿದ್ಯಾರ್ಥಿಗಳು, ಭಕ್ತರು ಹಾಗೂ ಅಭಿಮಾನಿಗಳು




ಸಿದ್ಧಗಂಗಾ ಕ್ಷೇತ್ರಾಧ್ಯಕ್ಷರಾದ ಪರಮಪೂಜ್ಯ ಶ್ರೀ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳವರಿಂದ ಶಿವನುಡಿ

ತುಮಕೂರು ನಗರದಲ್ಲಿ ನೂತನವಾಗಿ ನಿರ್ಮಿಸಿರುವ
ಅತ್ಯಾಧುನಿಕ ಸೌಕರ್ಯಗಳನ್ನೊಳಗೊಂಡ ವಸತಿಗೃಹ

# ಹೋಟೆಲ್ ಶ್ರೀ ವಿಶ್ವೇಶ್ವರ ಕಂಫರ್ಟ್

ಸರ್ಕಾರಿ ಕಾಲೇಜು ಮುಂಭಾಗ, ಬಿ.ಹೆಚ್. ರಸ್ತೆ, ತುಮಕೂರು–1
ದೂರವಾಣಿ : 2255883, 2257770, 2257774, 2257772 ಫ್ಯಾಕ್ಸ್ : 2255873



- ಮೂರು ವಿವಿಧ ದರ್ಜೆಯ 50 ಸುಸಜ್ಜಿತ ಕೊಠಡಿಗಳು
- ವಿಶೇಷ ವ್ಯವಸ್ಥೆಯ ಹವಾನಿಯಂತ್ರಿತ ಕೊಠಡಿಗಳು
- ಹವಾನಿಯಂತ್ರಿತ ಮಿನಿ ಕಾನ್ಫರೆನ್ಸ್ ಹಾಲ್
- ವಿಶಾಲವಾದ ಪಾರ್ಕಿಂಗ್ ವ್ಯವಸ್ಥೆ
- ಪ್ರತಿ ಕೊಠಡಿಗೆ ಟಿ.ವಿ., ಟೆಲಿಫೋನ್ ಸಂಪರ್ಕ
- ಹವಾನಿಯಂತ್ರಿತ ವಿ.ಐ.ಪಿ. ರೂಂ.
- ಶಾಶ್ವತ ವಿದ್ಯುತ್ ವ್ಯವಸ್ಥೆ
- ಪರಿಣತ ಸಿಬ್ಬಂದಿಯ ವಿನೀತ ಸೇವೆ

**ಲಿಫ್ಟ್ ಸೌಲಭ್ಯವಿದೆ**

**ಹವಾನಿಯಂತ್ರಿತ ಉಪಹಾರ ಗೃಹ**

ಮಾಲೀಕರು : ಎಸ್.ಜಿ. ಚಂದ್ರಮೌಳಿ, ಗ್ರಾನೈಟ್ ಉದ್ಯಮಿ










## ಅಂತರಂಗ



॥ ಓಂ ಶ್ರೀ ಗುರುಬಸವಲಿಂಗಾಯ ನಮಃ ॥
ಆವಾವ ಕಾಯಕವ ಮಾಡಿದರು ಬಸವೇಶ
ಆವಗಂ ಶರಣರನು ಸೇವಿಪೆನು ಬಸವೇಶ



# ಸಿದ್ಧಗಂಗಾ

ಸಂಪುಟ : ೬೨ ಜೂನ್ ೨೦೨೬ ಸಂಚಿಕೆ : ೦೬

ಡಾ. ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳು
ಸಂಸ್ಥಾಪಕ ಅಧ್ಯಕ್ಷರು

ಶ್ರೀ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು
ಅಧ್ಯಕ್ಷರು

ಪ್ರಧಾನ ಸಂಪಾದಕರು :
ಹೆಚ್.ವಿ. ವೀರಭದ್ರಯ್ಯ
ಸಂಪಾದಕರು :
ಎಚ್.ಎಸ್. ಸಿದ್ಧಗಂಗಪ್ಪ

ಪ್ರಕಾಶಕರು :
ಕೆ.ಬಿ. ಶಿವಶಂಕರಯ್ಯ
ಮೊ : 91410 36345

ಪತ್ರಿಕಾ ನಿರ್ವಹಣಾ ಸಮಿತಿ :
ಎಂ. ರೇಣುಕಾರಾಧ್ಯ
ಎನ್.ವಿ. ಸತೀಶ್‌ಕುಮಾರ್
ಹೆಚ್.ಎನ್.ಉಮಾಶಂಕರ್

ಪ್ರಕಾಶನ :
ಹಳೆಯ ವಿದ್ಯಾರ್ಥಿಗಳ ಸಂಘ
ಶ್ರೀ ಸಿದ್ಧಗಂಗಾ ಮಠ,
ತುಮಕೂರು ಜಿಲ್ಲೆ–೫೭೨ ೧೦೪.

ಮುದ್ರಕರು :
ಗೀತಾಂಜಲಿ ಗ್ರಾಫಿಕ್ಸ್
ಬಿ–೭೧, ಕೆ.ಎಸ್.ಎಸ್.ಐ.ಡಿ.ಸಿ. ಕೈಗಾರಿಕನಗರ
ರಾಜಾಜಿನಗರ, ಬೆಂಗಳೂರು–೫೬೦ ೦೧೦

ವಿಳಾಸ :
“ಸಂಪಾದಕರು”
‘ಸಿದ್ಧಗಂಗಾ’ ಮಾಸಪತ್ರಿಕೆ, ಶ್ರೀ ಸಿದ್ಧಗಂಗಾ ಮಠ,
ತುಮಕೂರು ಜಿಲ್ಲೆ–572 104 ದೂ: 0816–2282322.

## ಒಳಪುಟಗಳಲ್ಲಿ ....................

೨ ಸಂಪಾದಕೀಯ

೩ ಶ್ರೀವಾಣಿ

೪ ಸಿದ್ಧಲಿಂಗೇಶ್ವರ ವಚನ – ಶ್ರೀ ಸಿದ್ಧಗಂಗಾ ಗುರುಕರುಣ ತ್ರಿವಿಧಿ

೫ ಜ್ಞಾನದಾಸೋಹ – **ಶ್ರೀ ಸಿದ್ಧೇಶ್ವರ ಸ್ವಾಮಿಗಳು**

೮ ಶಿವಯೋಗಿಗಳ ಗದ್ದುಗೆಗಳು ಜಾಗೃತಸ್ಥಾನಗಳು
– **ಕೋ.ರಂ. ಬಸವರಾಜು**

೯ ಅಮೇರಿಕಾದ ಕ್ಯಾಲಿಫೋರ್ನಿಯಾದಲ್ಲಿ ಬಸವ ಜಯಂತಿ ಹಾಗೂ ಪರಮಪೂಜ್ಯ ಡಾ. ಶ್ರೀ ಶ್ರೀ ಶಿವಕುಮಾರ ಶಿವಯೋಗಿಗಳವರ ೧೧೯ನೇ ಜನ್ಮದಿನೋತ್ಸವ ಸಮಾರಂಭ – **ಒಂದು ವರದಿ**

೧೬ **ಕ್ಷೇತ್ರವಾರ್ತೆ :** ಶ್ರೀಮಠದಲ್ಲಿ ೨೦೨೬–೨೭ನೇ ಸಾಲಿನ ಮಕ್ಕಳ ದಾಖಲಾತಿ – ಒಂದು ವಿಹಂಗಮ ನೋಟ

೧೯ ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವವರು – **ಎಚ್.ಎಸ್.ಸಿದ್ಧಗಂಗಪ್ಪ**

೨೪ **ಆರೋಗ್ಯ :** ಡಯಾಬಿಟೀಸ್ ಬಗ್ಗೆ ಎಚ್ಚರವಿರಲಿ
– **ಡಾ. ಎಂ.ಎಸ್. ರಾಜಣ್ಣ**

೨೭ ಪ್ರಕೃತಿಪೂಜೆ – ವೃಕ್ಷಾರಾಧನೆ – **ತದ್ದಲಸೆ ವಿಘ್ನೇಶ್ವರ ಶರ್ಮಾ**

೩೦ **ವರದಿ :** ಹನ್ನೆರಡನೆ ಶತಮಾನ ಬೆಳಕಿನ ಯುಗವಾಗಿದೆ
– ಪೂಜ್ಯ ಶ್ರೀ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು

೩೧ ವಿದ್ಯಾರ್ಥಿಗಳ ಬಾಳನ್ನು ಬೆಳಗಿಸಿದವರು
ಪರಮಪೂಜ್ಯ ಡಾ. ಶ್ರೀ ಶ್ರೀ ಶಿವಕುಮಾರ ಮಹಾಶಿವಯೋಗಿಗಳು

೩೨ ಶಿವತತ್ತ್ವ ಚಿಂತನಾಗೋಷ್ಠಿ–೩೩ **ವರದಿ: ಎಸ್.ಪಿ.ಸಿದ್ಧಲಿಂಗಸ್ವಾಮಿ**

| ಚಂದಾ ವಿವರ | ದಶವಾರ್ಷಿಕ ಸದಸ್ಯತ್ವ ರೂ. 2500/–<br>ವಾರ್ಷಿಕ ಚಂದಾ ರೂ. 250.00 ಬಿಡಿ ಪ್ರತಿ ರೂ. 20.00 |
|---|---|

email: siddaganganews@gmail.com

ಲೇಖಕರ ಅಭಿಪ್ರಾಯಗಳು ಪತ್ರಿಕೆಯ ಅಭಿಪ್ರಾಯಗಳಲ್ಲ







# ಸಂಪಾದಕೀಯ........

ಪ್ರತಿವರ್ಷ ಜೂನ್ ೫ ರಂದು, ವಿಶ್ವ ಪರಿಸರ ದಿನಾಚರಣೆಯನ್ನು ಆಚರಿಸುವುದರ ಮೂಲಕ ಜನರಲ್ಲಿ ಪರಿಸರದ ಮಹತ್ವದ ಬಗ್ಗೆ ಜಾಗೃತಿ ಮೂಡಿಸಲಾಗುತ್ತಿದೆ. ಪರಿಸರವನ್ನು ನಾವು ರಕ್ಷಣೆ ಮಾಡಿದರೆ, ಪರಿಸರ ನಮ್ಮ ಜೀವಿತಾವಧಿಯನ್ನು ಹೆಚ್ಚಿಸುತ್ತದೆ. ಪರಿಸರ ದಿನಾಚರಣೆ ಒಂದು ದಿನಕ್ಕೆ ಸೀಮಿತವಾಗಬಾರದು. ದಿನ ನಿತ್ಯವೂ ಪರಿಸರದ ಬಗ್ಗೆ ಕಾಳಜಿಯನ್ನು ವಹಿಸಿದಾಗ ಮಾತ್ರ ಪರಿಸರ ದಿನಾಚರಣೆಯ ಧ್ಯೇಯ ಸ್ವಲ್ಪ ಮಟ್ಟಿಗಾದರೂ ಸಾಕಾರವಾಗುತ್ತದೆ. ಇದು ಕೇವಲ ಒಂದು ದಿನದ ಸರ್ಕಾರದ ಕಾರ್ಯಕ್ರಮಕ್ಕೆ ಸೀಮಿತವಾಗದೆ ಸರ್ಕಾರದ ಜೊತೆಗೆ ಪ್ರಜ್ಞಾವಂತ ಪರಿಸರವಾದಿಗಳು ಹಾಗೂ ಸಂಘ ಸಂಸ್ಥೆಗಳೂ ಕೂಡ ಕೈಜೋಡಿಸಬೇಕಾಗಿದೆ.

ಸರ್ಕಾರಗಳು ಅಭಿವೃದ್ಧಿಯ ಹೆಸರಿನಲ್ಲಿ ಕಾಡುಗಳನ್ನು ಕಡಿದು ನಾಡನನ್ನಾಗಿ ಮಾಡುವಲ್ಲಿ ಆಸಕ್ತಿ ವಹಿಸುತ್ತಿದೆ. ವರ್ಷದಿಂದ ವರ್ಷಕ್ಕೆ ಕಾಡುಗಳು ಕಿರಿದಾಗುತ್ತಾ ಬರುತ್ತಿದ್ದು, ಕಾಡಿನಲ್ಲಿ ಸ್ವಚ್ಛಂದವಾಗಿ ನೆಮ್ಮದಿಯಿಂದ ಜೀವನ ನಡೆಸುತ್ತಿದ್ದ ವನ್ಯಪ್ರಾಣಿಗಳು ಹಳ್ಳಿಗಳತ್ತ ಮುಖ ಮಾಡುತ್ತಿದ್ದು ಇದರಿಂದ ವರ್ಷವೆಲ್ಲ ಬೆವರು ಸುರಿಸಿ ಬೆಳೆದ ಬೆಳೆ ಪ್ರಾಣಿಗಳಿಂದ ನಾಶವಾಗಿ ರೈತರು ಸಂಕಷ್ಟಕ್ಕೀಡಾಗುತ್ತಿದ್ದಾರೆ.

ಪರಿಸರ ರಕ್ಷಣೆ ಪ್ರತಿಯೊಬ್ಬ ನಾಗರಿಕರ ಕರ್ತವ್ಯವಾಗಬೇಕು. ಪ್ರತಿಯೊಬ್ಬರು ಕನಿಷ್ಠ ಒಂದೊಂದು ಸಸಿಯನ್ನು ನೆಡುವುದರ ಮೂಲಕ ಪರಿಸರ ರಕ್ಷಣೆ ಮಾಡಬೇಕಾಗಿದೆ. ಅರಣ್ಯ ಸಂಪತ್ತನ್ನು ಉಳಿಸಿ ಬೆಳಸಬೇಕಾಗಿದೆ. ಆದರೆ ಇಂದು ನಾವು ಮಾಡುತ್ತಿರುವುದೇನು! ಮಾನವ ಕಲ್ಯಾಣ ಕೇಂದ್ರಕೃತ ಚಟುವಟಿಕೆಗಳು ಜೀವ ಪರಿಸರದ ಮೇಲೆ ಸಾಕಷ್ಟು ಪ್ರತಿಕೂಲ ಪರಿಣಾಮ ಬೀರುವ ಕಾರಣ ಮನುಷ್ಯ ಸಮಾಜದ ಅಸ್ತಿತ್ವಕ್ಕೆ ಒಂದು ಸವಾಲಾಗಿ ಪರಿಣಮಿಸಿದೆ. ನಗರಿಕರಣ, ಆಧುನಿಕ ಕೃಷಿ, ಬೇಕಾಬಿಟ್ಟಿಯಾಗಿ ಕೈಗಾರಿಕೆಗಳ ವಿಸ್ತರಣೆ, ಜಲಾಶಯ ನಿರ್ಮಾಣ, ನೈಸರ್ಗಿಕ ಸಂಪನ್ಮೂಲಗಳ ಶೋಷಣೆ ಮುಂತಾದ ಚಟುವಟಿಕೆಗಳಿಂದ ನೈಸರ್ಗಿಕ ವಲಯಗಳು ಚಿಕ್ಕ ಚಿಕ್ಕ ಭಾಗಗಳಾಗಿವೆ. ಸೂಕ್ತ ಯೋಜನೆಗಳನ್ನು ಅನುಸರಿಸದೆ ಬೇಕಾಬಿಟ್ಟಿಯಾಗಿ ಬೆಳೆಯುತ್ತಿರುವ ನಗರಗಳು ಮಾಲಿನ್ಯದ ಕೂಪಗಳಾಗಿವೆ. ನಗರಳಲ್ಲಿ ಪ್ರತಿನಿತ್ಯ ಉತ್ಪತ್ತಿಯಾಗುತ್ತಿರುವ ಘನತ್ಯಾಜ್ಯ ವಿಲೇವಾರಿ ಸಮಸ್ಯೆ ರಾಕ್ಷಸ ರೂಪತಾಳಿವೆ. ನಗರಗಳ ಒಳಭಾಗದಲ್ಲಿ ಮತ್ತು ಸುತ್ತಮುತ್ತಲ ಇದ್ದ ಜಲ ತಾಣಗಳಾದ ಕೆರೆ ಕುಂಟೆಗಳು ಮಲಿನಗೊಂಡು ರೋಗರುಜಿನಗಳ ಕೂಪಗಳಾಗಿವೆ. ಅಲ್ಲದೆ ಮಿತಿಮೀರಿದ ಗಣಿಗಾರಿಕೆ, ಅರಣ್ಯ ನಾಶ ಮುಂತಾದವು ಪರಿಸರದ ಮೇಲೆ ಒತ್ತಡ ಬೀರಿವೆ. ಕೈಗಾರಿಕೆಗಳಿಂದ ಹೊರಬರುವ ತ್ಯಾಜ್ಯಗಳು ನೀರಿನ ತಾಣಗಳಿಗೆ ಸೇರಿ ನೀರು ಮಲಿನಗೊಂಡು ಅನೇಕ ಸಮಸ್ಯೆಗಳಿಗೆ ಕಾರಣವಾಗಿವೆ.

ಮನುಷ್ಯನ ಪ್ರತಿಯೊಂದು ಚಟುವಟಿಕೆಗಳ ಸಮತೋಲನ ತಪ್ಪಿದರೆ ಪರಿಸರಕ್ಕೆ ಮಾರಕವಾಗುವ ಪರಿಣಾಮಗಳಿಗೆ ದಾರಿ ಮಾಡಿಕೊಡುತ್ತಿದೆ. ಕೃಷಿ ಭೂಮಿಯಲ್ಲಿ ಇಳುವರಿಯನ್ನು ಹೆಚ್ಚಿಸಲು ಬಳಸುವ ರಾಸಾಯನಿಕ ಗೊಬ್ಬರ, ಕೀಟನಾಶಕಗಳು ಸಹ ಪರಿಸರ ಸಮಸ್ಯೆಗೆ ಕಾರಣವಾಗಿದೆ. ಮನುಷ್ಯ ಮಾಡುವ ಪ್ರತಿಯೊಂದು ಕಾರ್ಯ ಚಟುವಟಿಕೆಗಳು ಸಮತೋಲನ ತಪ್ಪಿದಾಗ ಪರಿಸರಕ್ಕೆ ಮಾರಕವಾಗುವ ಪರಿಣಾಮಗಳಿಗೆ ದಾರಿಯಾಗುತ್ತಿದೆ. ಈ ಅನಾಹುತಗಳನ್ನು ಗಮನಿಸಿ ಜಗತ್ತಿನ ಜನರಿಗೆ ಪರಿಸರದ ಸಂರಕ್ಷಣೆ, ಸಂಪನ್ಮೂಲಗಳ ಮಿತವಾದ ಬಳಕೆ ಮತ್ತು ಮುಂದಿನ ಜನಾಂಗಕ್ಕೆ ಆರೋಗ್ಯ ಪರಿಸರವನ್ನು ಬಿಟ್ಟು ಹೋಗಲು ಮನುಷ್ಯರು ಪಾಲಿಸಬೇಕಾದ ಕರ್ತವ್ಯಗಳ ಬಗ್ಗೆ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ವಿಶ್ವ ಸಂಸ್ಥೆಯು ಪ್ರತಿವರ್ಷ ಜೂನ್ ೫ ರಂದು, ಪರಿಸರ ದಿನವನ್ನಾಗಿ ಆಚರಿಸಲು ಜಗತ್ತಿಗೆ ಕರೆ ನೀಡಿದೆ. ಈ ಪರಿಕಲ್ಪನೆಯನ್ನು ೧೯೭೨ ರಲ್ಲಿ ಸ್ಟಾಕ್‌ಹೋಮ್‌ನಲ್ಲಿ ನಡೆದ ಮಾನವ ಪರಿಸರ ಸಮ್ಮೇಳನದಲ್ಲಿ ಚರ್ಚಿಸಿ ನಿರ್ಣಯಿಸಲಾಯಿತು. ಅದರಂತೆ ೧೯೭೪ ರಿಂದ ಪ್ರತಿವರ್ಷ ಜೂನ್ ೫ ರಂದು, ಮನುಕುಲದ ಉದ್ಧಾರ ಮತ್ತು ಪರಿಸರ ಸಂರಕ್ಷಣೆಗೆ ಸಂಬಂಧಿಸಿದ ಒಂದೊಂದು ನಿರ್ದಿಷ್ಟ ವಿಷಯವನ್ನು ಕೇಂದ್ರೀಕರಿಸಿ ತಿಳುವಳಿಕೆ ಮೂಡಿಸುವ ನಿಟ್ಟಿನಲ್ಲಿ ಪರಿಸರ ದಿನಾಚರಣೆಯನ್ನು ಆಚರಿಸಿಕೊಂಡು ಬರಲಾಗುತ್ತಿದೆ.

ನಮಗೆಲ್ಲ ತಿಳಿದಿರುವಂತೆ ಈ ಪರಿಸರ ಮಾಲಿನ್ಯಕ್ಕೆ ಕಾರಣ ಭಾರೀ ಪ್ರಮಾಣದಲ್ಲಿ ಬೆಳೆಯುತ್ತಿರುವ ಜನಸಂಖ್ಯೆ ಮತ್ತು ದುರಾಸೆ ಹಾಗೂ ದುರಾಭ್ಯಾಸಗಳು. ವಿಶ್ವದ ಜನಸಂಖ್ಯೆ ಪ್ರತಿವರ್ಷ ಸುಮಾರು ೮ ಕೋಟಿಯಷ್ಟು ಹೆಚ್ಚುತ್ತಿದ್ದು, ಅದು ೨೧೦೦ರ ವೇಳೆಗೆ ೧೧೨೦ ಕೋಟಿಯಾಗಲಿದೆ ಎಂದು ಅಂದಾಜು ಮಾಡಲಾಗಿದೆ. ಒಂದು ಸಮೀಕ್ಷೆ ಪ್ರಕಾರ ೧೯೪೭ ರಲ್ಲಿ ಶೇ. ೩೩ ರಷ್ಟಿದ್ದ ಅರಣ್ಯ ಪ್ರದೇಶ ಈಗ ಶೇ. ೨೦ಕ್ಕೆ ಇಳಿದಿದೆ. **"ಕಾಡು ಬೆಳೆದರೆ ನಾಡು ಉಳಿದೀತು"** ಎನ್ನುವಂತೆ ನೆಲ ಉಳಿದರೆ ನಾವು ಉಳಿದೇವು. ಆದುದರಿಂದಲೇ ಜಗತ್ತಿನ ಎಲ್ಲ ಪರಿಸರ ತಜ್ಞರೂ **'ಭೂಮಿ ತಾಯಿಯನ್ನು ಉಳಿಸಿ, ನೀವು ಉಳಿಯಿರಿ'** ಎಂದು ಕರೆಕೊಟ್ಟಿರುವುದು.

**ಎಚ್.ಎಸ್.ಸಿದ್ಧಗಂಗಪ್ಪ**
**ಸಂಪಾದಕರು**





# ಶ್ರೀವಾಣಿ



## ವಿರತಿಯಸಿರಿ ಅಕ್ಕ

ಈ ವಿರತಿಯಸಿರಿಗೊಂದು ಜ್ವಲಂತ ಉದಾಹರಣೆ ಅಕ್ಕಮಹಾದೇವಿ. ಶೂನ್ಯಸಂಪಾದನೆಯಲ್ಲಿ ಪರಮ ವೈರಾಗ್ಯ ತತ್ತ್ವವನ್ನು ಪ್ರತಿಪಾದಿಸಿದಂತಹ ಸನ್ನಿವೇಶ ಜಗತ್ತಿನ ಸಾಹಿತ್ಯದಲ್ಲಿ ನ ಭೂತೋ ನ ಭವಿಷ್ಯತಿ. ಏಕೆಂದರೆ ಗಂಡಸರ ಬತ್ತಲೆಯ ವೈರಾಗ್ಯಕ್ಕೆ ಅತ್ಯಂತ ಪುರಾತನವಾದ ವೈದಿಕ, ಬೌದ್ಧ, ಜೈನಧರ್ಮಗಳ ಪರಂಪರೆಯಿದೆ. ಅರ್ಥಾತ್ ಅನೇಕ ಮಂದಿ ಪುರುಷಯತಿಗಳು ಮುನಿಗಳು ಬತ್ತಲೆಯಾಗಿ ಪರ್ಯಟಣೆ ಮಾಡುವ ಸಂಗತಿಯನ್ನು ನಾವು ಬಲ್ಲೆವು. ಅದರಂತೆ ಹೆಣ್ಣು ಮದುವೆಯಾಗದೆ ಸಂನ್ಯಾಸಿನಿಯರಾಗಿದ್ದ ಕಂತಿಯಂತಹ ಉದಾಹರಣೆಗಳೂ ಇತಿಹಾಸದಲ್ಲಿ ದೊರೆಯಬಹುದು. ಹೆಣ್ಣು ಸಂನ್ಯಾಸಿನಿಯಾಗಿ ದಿಗಂಬರೆಯಾಗಿ ಪರ್ಯಟನೆ ಮಾಡಿದ ಉದಾಹರಣೆ ಜಗತ್ತಿನ ಯಾವ ಇತಿಹಾಸದಲ್ಲಿಯೂ ಸಿಗುವುದಿಲ್ಲ. ಮನಸಿಜನ ತಲೆಯ ಬರಹವನ್ನೇ ಅಳಿಸಿ ಹಾಕಿದ ಅಕ್ಕ ಇತಿಹಾಸದ ಒಂದು ಅಪರೂಪ. ಕಾಮನ ಸುಟ್ಟುರುಹಿಸಿದ ಭಸ್ಮವ ಕಿನ್ನರಿ ಬೊಮ್ಮಯ್ಯನ ಮುಖಾಂತರ ಜಗತ್ತಿಗೆ ತೋರಿಸಿ ಅಲ್ಲಮರ ಕಠಿಣ ಪರೀಕ್ಷೆಯಲ್ಲಿ ಗೆದ್ದ ವೈರಾಗ್ಯದ ಮಹಾಮೇರು. ಅನುಭವ ಮಂಟಪದ ಬಸವಾದಿ ಶರಣರೆಲ್ಲರಿಂದಲೂ 'ಅಕ್ಕ'ನೆಂಬುದಾಗಿ ಸಂಪ್ರೀತಿಯಿಂದ ಪ್ರಶಂಸೆಗೊಂಡ ವೈರಾಗ್ಯರತ್ನ. ಶರಣರೊಡನೆ ಅನುಭವವ ಮಾಡಿ ಹಿರಿತನವ ಪಡೆದ ಜ್ಞಾನಜ್ಯೋತಿ. ವಿರತಿಯ ಭಾವಗೀತೆಗಳ ವಚನಕಾರ್ತಿ. ತನ್ನಿಂದ ತಾನಾದ ವೀರವಿರಾಗಿಣಿ.

**'ಅಂತರಂಗದ ಪ್ರಭೆ ಬಹಿರಂಗವೆಲ್ಲಾ ತಾನೆಯಾಗಿ**
**ಗುಹೇಶ್ವರ ಲಿಂಗದಲ್ಲಿ ಸಂದಿಲ್ಲದಿಪ್ಪ**
**ಮಹಾದೇವಿಯಕ್ಕ ನಿನ್ನ ಶ್ರೀಪಾದಕ್ಕೆ**
**ನಮೋ ನಮೋ ಎಂಬೆನು'**

ಎಂಬುದಾಗಿ ಪ್ರಶಂಸೆಗೊಂಡ ಅಕ್ಕನೇ ವಿರತಿಯ ಸಿರಿ.

* * *

ಭರತವರ್ಷ ಜಗತ್ತಿಗೆ ನೀಡಿದ ಮಹಾಸಂದೇಶ ಆಧ್ಯಾತ್ಮಿಕ ಪವಿತ್ರ ಜೀವನದ ಸಹಬಾಳುವೆಯ ಶಾಂತಿಮಂತ್ರವನ್ನು. ಈ ಪುಣ್ಯಭೂಮಿಯಲ್ಲಿ ಅವತರಿಸಿದ ಮಹಾಪುರುಷರೆಲ್ಲ, ವಿಭೂತಿ ಚೇತನಗಳೆಲ್ಲ ವಿಶ್ವಕಲ್ಯಾಣದ ಮಹತ್ವವನ್ನು ತಮ್ಮ ದಿವ್ಯ ಜೀವನದ ಮೂಲಕ ಬಿತ್ತರಿಸಿದರು. ತಮಸೋಮ ಜ್ಯೋತಿರ್ಗಮಯ ಎಂಬ ಮಹಾವಾಣಿಯನ್ನು ಮೊಳಗಿಸಿದರು. ಹಿಂಸೆ ರಭಸಮತಿಯ ಬದುಕಿನಿಂದ ಅಹಿಂಸಾ ಶಾಂತಿಮಯ ಮಂಗಲದ ಬಾಳಿನಂಗಳಕ್ಕೆ ನಡೆದು ತೋರಿಸಿದರು. ಮನುಷ್ಯನ ಅಂತರಂಗದಲ್ಲಿ ಮಡುಗಟ್ಟಿ ನಿಂತ ಕ್ರೌರ್ಯ, ದ್ವೇಷ, ವಂಚನೆ, ಸ್ವಾರ್ಥ, ಸಂಕುಚಿತ ಭಾವನೆಗಳನ್ನು ಪ್ರೀತಿ, ಸೌಹಾರ್ದತೆ, ಸೌಶೀಲ್ಯತೆ, ಪರಹಿತ ಚಿಂತನೆ, ಹೃದಯವಂತಿಕೆ, ಸೌಜನ್ಯತೆಗಳನ್ನು ಬಿತ್ತಿ ಬೆಳೆಯುವುದರ ಮೂಲಕ ಪರಿಶುದ್ಧಗೊಳಿಸಿದರು.

# ವಚನ-ತ್ರಿವಿಧಿ

## ಶ್ರೀ ಸಿದ್ಧಲಿಂಗೇಶ್ವರ ವಚನ



**ಆಲೆಯ ಕೊನೆಯಲ್ಲಿ ಬೆಳೆದ ಹಾಲೆ ಬಾಲೆಯರನೆ ಬಯಸುತಿಪ್ಪುದು ನೋಡಾ.**
**ಆಲೆಯ ಕೊನೆಯ ಹಾಲೆಯ ಹರಿದು ಬಾಲೇಂದು ಮೌಳಿ ತಾನಾದ**
**ಲಿಂಗೈಕ್ಯವನೇನ ಹೇಳುವೆನಯ್ಯಾ ನೇತ್ರಕ್ಕೆ ಪ್ರತ್ಯಕ್ಷನಾದ ಘನಮಹಿಮ ತಾನಾದ**
**ನಿಲವ ಚನ್ನಬಸವಣ್ಣ ಬಲ್ಲ, ಚನ್ನಬಸವಣ್ಣನ ಪಾದಕ್ಕೆ**
**ನಮೋ ನಮೋ ಎನುತಿರ್ದೆನು ಕಾಣಾ**
**ಮಹಾಲಿಂಗ ಗುರು ಶಿವಸಿದ್ಧೇಶ್ವರ ಪ್ರಭುವೇ ॥**

ಆಲೆಯ ಕೊನೆಯಲ್ಲಿ ಬೆಳೆದ ಹಾಲೆ – ಆಲೆಯ-ಬಿಳಿಯಾಲೆಯ ಮಧ್ಯದಲ್ಲಿ ತೋರುವಂಥಾದ್ದೆ ಕರೆ ಆಲೆ; ಕರೆ ಆಲೆಯ ಮಧ್ಯದಲ್ಲಿ ತೋರುವಂಥಾದ್ದೆ ಸೂಕ್ಷ್ಮ ತೇಜಸ್ಸು; ಆ ಸೂಕ್ಷ್ಮ ತೇಜಸ್ಸಿನಲ್ಲಿ; ಬೆಳೆದ-ವರ್ಧನವಾದ; ಹಾಲೆ-ಭಿನ್ನ ದೃಕ್ ವಿಶಯವು; ಬಾಲೆಯರನೆ-ಷಟ್ ಪ್ರಕಾರವಾದ ಸ್ತ್ರೀಯರುಗಳನೆ; ಬಯಸುತ್ತಿಪ್ಪುದು-ಇಚ್ಛೆಸುತ್ತಿರ್ಪುದು; ನೋಡಾ-ಕಂಡಾ; ಆಲೆಯ ಕೊನೆಯ ಹಾಲೆ ಹರಿದು-ಬಿಳಿ ಆಲೆಯ ಮಧ್ಯದಲ್ಲಿ ತೋರುವಂಥಾದ್ದೆ ಕರಿ ಆಲೆ, ಆ ಕರೀ ಆಲೆ ಮಧ್ಯದಲ್ಲಿ ತೋರುವಂಥಾ ಸೂಕ್ಷ್ಮ ತೇಜಸ್ಸು; ಆ ಸೂಕ್ಷ್ಮ ತೇಜಸ್ಸಿನಲ್ಲಿ ತೋರುವಂಥಾ ಭಿನ್ನ ದೃಗ್ ವಿಷಯವು ನಷ್ಟವಾಗಿ; ಬಾಲೇಂದು ಮೌಳಿಯೆ ತಾನಾದ-ಜ್ಞಾನ ಚಂದ್ರಧರನಾದ ಪರಶಿವಲಿಂಗವೆ ತಾನಾದ; ಲಿಂಗೈಕ್ಯವ-ಮಹಾಲಿಂಗೈಕ್ಯವನು; ಏನು ಹೇಳುವೆನು-ಏನೆಂದು ಹೇಳುವೆನು; ಅಯ್ಯಾ ಎಲೆ ಲಿಂಗವೆ; ನೇತ್ರಕ್ಕೆ ನಯನಕ್ಕೆ; ಪ್ರತ್ಯಕ್ಷ-ಸಾಕ್ಷಾತ್ಕಾರವಾದ; ಘನ-ಅಧಿಕವಾದ; ಮಹಿಮ ತಾನಾದ-ಮಹತ್ಮಾತಿಶಯವನುಳ್ಳ ಪರಶಿವಲಿಂಗವೆ ತಾನಾದ; ನಿಲವ-ನಿಲುಕಡೆಯನು; ಚನ್ನಬಸವಣ್ಣ-ಚನ್ನಬಸವೇಶ್ವರ ಸ್ವಾಮಿಗಳು; ಬಲ್ಲರಿದು ಬಲ್ಲನು-ಅರಿದು ಬಲ್ಲನೆ; ಚನ್ನಬಸವಣ್ಣನ ಪಾದಕ್ಕೆ – ಚನ್ನಬಸವೇಶ್ವರನ ಪಾದಕಮಲಕ್ಕೆ; ನಮೋ ನಮೋ ಎನುತ್ತಿರ್ದೆನು-ನಮಸ್ಕಾರ ನಮಸ್ಕಾರವೆಂದು ಸಾಂದ್ರ ನಮಸ್ಕರಿಸುತ್ತಿರ್ದೆನು; ಕಾಣಾ-ಕಂಡಾ ; ಮಹಾಲಿಂಗ ಗುರು ಶಿವಸಿದ್ಧೇಶ್ವರ ಪಭುವೇ.

**(ಕೃಪೆ: ತೋಂಟದಾರ್ಯ ವಚನ ವ್ಯಾಖ್ಯೆ- ಸಂಪಾದಕರು- ಡಾ॥ ಸಾ.ಶಿ. ಮರುಳಯ್ಯ, ಪ್ರಕಾಶಕರು, ಶ್ರೀ ತೋಂಟದ ಸಿದ್ಧಲಿಂಗೇಶ್ವರ ಕೈಂಕರ್ಯ (ದಾಸೋಹ) ಸೇವಾ ಸಂಘ (ರಿ.) ಎಡೆಯೂರು-ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ)**

## ಶ್ರೀ ಸಿದ್ಧಗಂಗಾ ಗುರುಕರುಣ ತ್ರಿವಿಧಿ

ಪರಮಾಯುಷಿ ಸಿರಿಯೆ ಶಿವಸನ್ಮಂಗಳರೂಪಿಯೆ
ನೂರು ದಾಟಿದ ಪುಣ್ಯರೂಪಿಯೆ । ನನ್ನತಂದೆ
ಸಿದ್ಧಗಂಗಾ ಗುರುವೆ ಕೃಪೆಯಾಗು ॥

ನಿದ್ದೆ ಎಚ್ಚರಗಳಲಿ ಪೊರೆವ ಕೈಯಾಗಿರುವೆ
ವಾತ್ಸಲ್ಯ ವಾರಿಧಿಯಾಗಿರುವೆ । ನನ್ನತಂದೆ
ಸಿದ್ಧಗಂಗಾ ಗುರುವೆ ಕೃಪೆಯಾಗು ॥

ಬರದ ಕಾಲದೊಳಗೆ ಪೊರೆವೆ ಹಸಿದವರನ್ನು
ಕರೆಕರೆದು ಅನ್ನವ ನೀಡಿದೆ । ನನ್ನತಂದೆ
ಸಿದ್ಧಗಂಗಾ ಗುರುವೆ ಕೃಪೆಯಾಗು ॥

ಬಾಚಿತಬ್ಬಿದೆ ಬಳಿಗೆ ಬಂದ ಮಕ್ಕಳನ್ನು
ಸಾಕಿ ಸಲಹಿದೆ ಬೆಳೆಸಿದೆ । ನನ್ನತಂದೆ
ಸಿದ್ಧಗಂಗಾ ಗುರುವೆ ಕೃಪೆಯಾಗು ॥

ಕಾರುಣ್ಯದ ಕಾಸಾರ ಕಾಯಕದ ಸಿರಿಸೂರ್ಯ
ದಾಸೋಹದ ದಯಶರಧಿ । ನನ್ನತಂದೆ
ಸಿದ್ಧಗಂಗಾ ಗುರುವೆ ಕೃಪೆಯಾಗು ॥

ಎದೆಯ ಮೇಲಣ ಲಿಂಗ ಅಂಗೈಯ ಮೇಲಿಟ್ಟು
ಧೃವಭಕ್ತಿಯಿಂದ ಮನವಿಟ್ಟರ್ಚಿಸೆಂದ
ಸಿದ್ಧಗಂಗಾ ಗುರುವೆ ಕೃಪೆಯಾಗು ॥

ಬೆಳಗು ಬೈಗುಗಳಲ್ಲಿ ಎಡೆಬಿಡದೆ ಪೂಜಿಸು
ಗುರುಕೊಟ್ಟಲಿಂಗ ಮರೆಯಾದೆ ಎಂದ
ಸಿದ್ಧಗಂಗಾ ಗುರುವೆ ಕೃಪೆಯಾಗು ॥

ಗೋಸಲ ಸಿದ್ಧೇಶ ವರಗುರು ಅಟವೀಶ
ಉದ್ದಾನಗುರುವರನ ಸ್ಮರಿಸುವೆ । ನನ್ನತಂದೆ
ಸಿದ್ಧಗಂಗಾ ಗುರುವೆ ಕೃಪೆಯಾಗು ॥

ಕಾಯಕವೆ ಶಿವಪೂಜೆ ಕಾಯಕವೆ ಶಿವಯೋಗ
ಕಾಯಕವೆ ಕಾಯ್ವ ಕೈಲಾಸವೆನುತಿರುವ । ನನ್ನತಂದೆ
ಸಿದ್ಧಗಂಗಾ ಗುರುವೆ ಕೃಪೆಯಾಗು ॥

ದಾಸೋಹ ಕಲಿಸುದಕೆ ದಾಸೋಹಿ ನೀ ಬಂದೆ
ಈಶ ನೀನಾದ ದಾಸೋಹ । ನನ್ನತಂದೆ
ಸಿದ್ಧಗಂಗಾ ಗುರುವೆ ಕೃಪೆಯಾಗು ॥

**ಪ್ರೊ. ಹೆಚ್.ವಿ. ವೀರಭದ್ರಯ್ಯ**

## ಚಿಂತನ

# ಜ್ಞಾನದಾಸೋಹ

– ಶ್ರೀ ಸಿದ್ಧೇಶ್ವರ ಸ್ವಾಮಿಗಳು *

ಸತ್ಯ ಸಾಕ್ಷಾತ್ಕಾರ ಪಡೆದವರು ಸಂತರು, ಮಹಂತರು; ಋಷಿ ಮುನಿಗಳು. ಅವರ ಹೃನ್ಮನಗಳಲ್ಲಿ ಸತ್ಯದ ಭಾನ. ನಡೆನುಡಿಗಳಲ್ಲಿ ಸತ್ಯದ ಬೆಳಕು. ಸತ್ಯದಲ್ಲಿ ಅವರು ಸದಾ ಮಗ್ನರು. ಸತ್ಯವೇ ಅವರ ಉಸಿರು. ವಸ್ತುಗಳು ಶಬ್ದ, ಸ್ಪರ್ಶ, ರೂಪ, ರಸ, ಗಂಧಾದಿ ಗುಣಗಳಿಂದ ಕೂಡಿವೆ. ನಮ್ಮ ಶ್ರೋತ್ರಾದಿ ಇಂದ್ರಿಯಗಳಿಗೆ ಆ ಶಬ್ದಾದಿ ಗುಣಗಳನ್ನು ಗ್ರಹಿಸುವ ಸಾಮರ್ಥ್ಯವಿದೆ. ಈ ಪಂಚೇಂದ್ರಿಯಗಳಿಂದ ನಾವು ಪ್ರಪಂಚದ ಭೌತಿಕ ವಸ್ತುಗಳನ್ನು ಅರಿಯುತ್ತೇವೆ. ಇದು ಇಂದ್ರಿಯಾನುಭವ ಅಥವಾ ಪ್ರತ್ಯಕ್ಷೀಕರಣ.

ಇಲ್ಲೊಂದು ಹೂವಿದೆ. ಈ ಹೂವಿನ ಜ್ಞಾನ ಮಾಡಿಕೊಳ್ಳಲು ನಾವು ಗುಡ್ಡ ಬೆಟ್ಟಗಳನ್ನು ಹತ್ತಬೇಕಾಗಿಲ್ಲ. ಗೆಡ್ಡೆಗೆಣಸುಗಳನ್ನು ತಿಂದು ತಪಸ್ಸು ಆಚರಿಸಬೇಕಾಗಿಲ್ಲ, ಬೆಳಕಿನಲ್ಲಿ ಕಣ್ಣು ತೆರೆದರೆ ಸಾಕು ಹೂವು ಕಾಣುತ್ತದೆ. ಅದೇ ಹೂವನ್ನು ನೋಡುತ್ತ ನಾವು ಆ ಹೂವಿನ ಸೌಂದರ್ಯದಲ್ಲಿ ಮುಳುಗಿಬಿಡಬೇಕು. ಮಗ್ನರಾಗಬೇಕು. ಆಗ ಹೂವಿಲ್ಲ, ನಾವೂ ಇಲ್ಲ. ಬರೀ ಸೌಂದರ್ಯ. ಆ ಸೌಂದರ್ಯವೇ ನಾವು. ನಾವೇ ಆ ಸೌಂದರ್ಯ ! ಹೀಗೆ ವಸ್ತುವಿನೊಂದಿಗೆ ಸಮಾಲೀನವಾಗುವಿಕೆಯೇ ಸಮಾಧಿ. ಅದರಿಂದ ವಸ್ತುಸಾಕ್ಷಾತ್ಕಾರ !

ವಸ್ತುಪ್ರತ್ಯಕ್ಷ ಯಾರಿಗಾದರೂ ಆಗುತ್ತದೆ. ಆದರೆ ವಸ್ತುವಿನ ಸಾಕ್ಷಾತ್ಕಾರವಾಗಲು ಕವಿಹೃದಯ ಬೇಕಾಗುತ್ತದೆ. ಹಾಡುವ ಹಕ್ಕಿ, ತೇಲುವ ಮೇಘ, ಸುರಿಯುವ ಮಳೆ, ಹರಿಯುವ ನದಿ, ಹಸಿರು ಸಿರಿ ಈ ಎಲ್ಲವನ್ನು ಕಂಡು ಮಹಾಕವಿ ಕಾಳಿದಾಸ, ರವೀಂದ್ರ, ವರ್ಡ್ಸ್‌ವರ್ಥ್ ಮೊದಲಾದವರು ಕಾವ್ಯಸಮಾಧಿಯನ್ನು ಅನುಭವಿಸಿದರು. ಅದೇ ಸೃಷ್ಟಿಯನ್ನು ನಾವು ನಿತ್ಯವೂ ನೋಡುತ್ತಿದ್ದರೂ ನಮಗೇಕೆ ಕಾವ್ಯ ಸಮಾಧಿ ಉಂಟಾಗುತ್ತಿಲ್ಲ? ಸೌಂದರ್ಯದ ಸಾಕ್ಷಾತ್ಕಾರ ಆಗುತ್ತಿಲ್ಲ? ಕಾರಣವು ಸ್ಪಷ್ಟ. ನಮಗೆ ಕವಿಹೃದಯವಿಲ್ಲ. ಸತ್ಯದೃಷ್ಟಿಯಿಲ್ಲ.

ಸಂಗೀತವನ್ನು ಕೇಳುತ್ತಲಿರುವ ಗಾನರಸಿಕನು ರಾಗ, ರಸ, ತಾಳ, ಲಯಗಳ ಮಾಧುರ್ಯದಲ್ಲಿ ಮೈಮರೆಯುತ್ತಾನೆ. ಪರಿಸರದ ಭಾನ ಅಡಗುತ್ತದೆ. ಸಂಗೀತದಲ್ಲಿ ಸಮರಸನಾಗುತ್ತಾನೆ. ಅದು ಸಂಗೀತ ಸೌಂದರ್ಯದ ಸಾಕ್ಷಾತ್ಕಾರ. ಹೀಗೆ ವಸ್ತುವನ್ನು ಅರಿಯುವುದು ಜ್ಞಾನ; ಆ ವಸ್ತುವಿನ ಅಸ್ತಿತ್ವದಲ್ಲಿ ಬೆರೆಯುವುದು ಸಾಕ್ಷಾತ್ಕಾರ. ಜ್ಞಾನದಲ್ಲಿ ವಸ್ತು-ವ್ಯಕ್ತಿಗಳ ಮಧ್ಯ ಭೇದವಿದೆ. ಸಾಕ್ಷಾತ್ಕಾರದಲ್ಲಿ ಈ ಭೇದವಿಲ್ಲ. ಆಧ್ಯಾತ್ಮ ಕ್ಷೇತ್ರದಲ್ಲಿ ತತ್ತ್ವಜ್ಞಾನಿಗಳು ಸಾಕಷ್ಟು ಜನ. ಸತ್ಯಸಾಕ್ಷಾತ್ಕಾರಿಗಳು ಅಪರೂಪ. ವಿಪುಲವಾಗಿ ಓದಿದರೆ, ಕೇಳಿದರೆ ಯಾರಾದರೂ ಜ್ಞಾನಿಗಳಾಗುತ್ತಾರೆ. ಆದರೆ ಸಾಕ್ಷಾತ್ಕಾರಿಗಳಾಗುವುದು ಅಷ್ಟು ಸುಲಭವಲ್ಲ. ಕೇಳಿದ ಶಬ್ದ ತಲೆಯೊಳಗೆ ಮೂಡಿನಿಂತರೆ ಆತ ಜ್ಞಾನಿ. ಅದು ಹೃದಯಕ್ಕೆ ಇಳಿದು ಅಂತರಂಗವನ್ನು ಸ್ಪರ್ಶಿಸಿದರೆ ಆತ ಸಾಕ್ಷಾತ್ಕಾರಿ. ಅವನು ಸದಾ ಸತ್ಯವಸ್ತುವಿನಲ್ಲಿ ಸಮಾವಿಷ್ಟ ! ನಿಮಗ್ನ !

ಇಂಗ್ಲೆಂಡ್ ದೇಶದಲ್ಲಿ ಒಬ್ಬ ಸುಪ್ರಸಿದ್ಧ ಶಸ್ತ್ರವೈದ್ಯನಿದ್ದ (Surgeon). ಒಂದು ದಿನ ಯೂರೋಪದೇಶದ ಬೇರೆ ಬೇರೆ ಭಾಗದಿಂದ ಅನೇಕ ವೈದ್ಯರು ಈತನ ಆಸ್ಪತ್ರೆಗೆ ಬಂದಿದ್ದರು. ಇವನು ಮಾಡುತ್ತಿದ್ದ ಶಸ್ತ್ರಚಿಕಿತ್ಸೆಯನ್ನು ನೋಡುತ್ತಿದ್ದರು. ಎರಡು ಗಂಟೆಯವರೆಗೆ ಅವನು ಮಗ್ನನಾಗಿ ಶಸ್ತ್ರಚಿಕಿತ್ಸೆ ಮಾಡಿ ಹೊರಬಂದ. ಯುರೋಪದಿಂದ ಬಂದಿದ್ದ ವೈದ್ಯರು ಕೇಳಿದರು: ''ನಾವು ಶಸ್ತ್ರಚಿಕಿತ್ಸೆ ಮಾಡುವಾಗ ಬೇರೆ ಯಾರಾದರೊಬ್ಬರು ಬಂದರೆ ನಮ್ಮ ಮನವು ವಿಚಲಿತವಾಗುತ್ತದೆ. ಇಷ್ಟು ಜನ ನಾವು ನಿಮ್ಮ ಸುತ್ತುವರೆದಿದ್ದೆವು. ಆದರೆ ಎರಡು ಗಂಟೆಯವರೆಗೆ ನೀವು ಮೇಲೆ ತಲೆ ಎತ್ತಿಯೂ ನೋಡಲಿಲ್ಲ, ಎಂಥಾ ನಿಮಗ್ನತೆ ನಿಮ್ಮದು ! ಇದು ನಿಮಗೆ ಹೇಗೆ ಸಾಧ್ಯವಾಯಿತು?'

ಆ ಶಸ್ತ್ರವೈದ್ಯ ಹೇಳಿದ, ''ನಾನು ಶಸ್ತ್ರಚಿಕಿತ್ಸೆಗೆ ತೊಡಗುತ್ತಿದ್ದಂತೆಯೇ ನನ್ನನ್ನು ನಾನು ಮರೆಯುತ್ತೇನೆ. ಈ ರೋಗಿಯನ್ನು ರಕ್ಷಿಸುವಂಥ ಹಾಗೂ ನನಗೆ ಶಸ್ತ್ರಚಿಕಿತ್ಸೆ ಮಾಡಲು ಚೈತನ್ಯಕೊಡುವಂಥ ಭಗವದ್ಭಾವದಲ್ಲಿ ಮುಳುಗಿಬಿಡುತ್ತೇನೆ. ನನಗೆ ಶಸ್ತ್ರಚಿಕಿತ್ಸೆ ಮುಗಿದದ್ದೇ ಗೊತ್ತಾಗುವುದಿಲ್ಲ!'' ಅದು ನಿಜವಾದ ಕಾರ್ಯಸಾಕ್ಷಾತ್ಕಾರ. ನಮಗಾದರೋ ಆ ರೋಗಿಯ ಜೇಬಿನತ್ತ ಲಕ್ಷ್ಯ. ಸುತ್ತುವರಿದ ಜನರಿಗೆ ನಮ್ಮ ವೈದ್ಯಕೀಯ ಕಲಾಕೌಶಲ್ಯ ತೋರಿಸುವ ಭಾವ. ಹೀಗಿರುವಾಗ ನಮಗೆ ಕಾರ್ಯಮಗ್ನತೆ ಸಾಧಿಸುವುದು ಹೇಗೆ ಸಾಧ್ಯ?

ಹಾಗೆಂದ ಮಾತ್ರಕ್ಕೆ ನಮಗೆ ಮಗ್ನತೆಯೇ ಇಲ್ಲವೆಂದಲ್ಲ. ಒಬ್ಬ ಸಿಗಾರ ಸೇದುತ್ತಿದ್ದಾನೆ. ಆತನ ಬೆರಳು ಸುಡುತ್ತಲಿದೆ. ಆದರೂ ಅವನಿಗದು ಗೊತ್ತಾಗುತ್ತಿಲ್ಲ. ಇದು ಮಗ್ನತೆಯಲ್ಲವೆ? ಇನ್ನೊಬ್ಬ ಕುಡಿಯುತ್ತಾನೆ. ಅನಾರೋಗ್ಯವಾಗುತ್ತದೆ. ಮನೆಮಾರು ಕಳೆದುಕೊಳ್ಳುತ್ತಾನೆ. ಸತಿಸುತರು ಉಪವಾಸ ಬೀಳುತ್ತಾರೆ. ಅದರ ಪರಿವೆಯೇ ಅವನಿಗೆ ಇರುವುದಿಲ್ಲ. ಆತನಿಗೆ ಅಷ್ಟು ನಿಮಗ್ನತೆ ಕುಡಿತದಲ್ಲಿ ! ಈ ಬಗೆಯಾದ ಮಗ್ನತೆ ಹಿತವಸ್ತು, ಹಿತಕಾರ್ಯದಲ್ಲಿ ಇರುವುದಾದರೆ ಅದೇ ಸಾಕ್ಷಾತ್ಕಾರ.

ಕವಿಗಳು, ಕಲಾವಿದರು ತಮ್ಮ ತಮ್ಮ ಕಾರ್ಯಕ್ಷೇತ್ರಗಳಲ್ಲಿ ನಿಮಗ್ನರು. ಅಂತಲೇ ಅವರಿಗೆ ರಸಾನುಭವ, ರಸಸಾಕ್ಷಾತ್ಕಾರ. ಅದರಂತೆಯೇ ಸತ್ಯಶೋಧಕನು ಪರಮಸತ್ಯದಲ್ಲಿ ನಿಮಗ್ನನಾಗಿ ಸತ್ಯಸಾಮರಸ್ಯವನ್ನು ಅನುಭವಿಸುತ್ತಾನೆ.

* ಜ್ಞಾನಯೋಗಾಶ್ರಮ, ಬಿಜಾಪುರ ಜಿಲ್ಲೆ.

ಕಾಶ್ಮೀರ ದೇಶವು ನಂದನವನ, ಭೂಕೈಲಾಸ. ಮೋಳಿಗೆಯ ಮಾರಯ್ಯ ಆ ದೇಶದ ದೊರೆ. ಹೇರಳವಾದ ಸಿರಿ-ಸಂಪದ, ಭೋಗಭಾಗ್ಯಕ್ಕೇನು ಕೊರತೆಯಿರಲಿಲ್ಲ. ಮಾರಯ್ಯನು ಅದನ್ನೆಲ್ಲ ಸಲೀಸಾಗಿ ಬಿಟ್ಟುಕೊಟ್ಟ. ಜ್ಞಾನಸುಧೆಯನ್ನು ಬಯಸಿ ಭಕ್ತಿಭಂಡಾರಿ ಬಸವಣ್ಣನವರ ಸಾಮೀಪ್ಯಕ್ಕೆ ಬಂದ. ರಾಜ್ಯವನ್ನಾಳಿದ ಕೈಗಳಿಂದ ಕಟ್ಟಿಗೆ ಒಡೆದು ಮಾರುವ ಕಾಯಕ ಮಾಡಿದ. ಮಾರಯ್ಯನ ಆತ್ಮಜ್ಞಾನದಾಹ ಅಷ್ಟು ಬಲಿಷ್ಠವಾಗಿತ್ತು. ಆದ್ದರಿಂದ ಅವನ ಸತ್ಯಸಾಕ್ಷಾತ್ಕಾರದ ಸಾಧನೆಗೆ ಯಾವುದೂ ಅಡ್ಡಿಯಾಗಲಿಲ್ಲ.

ನಾವು ಮಠ-ಮಂದಿರಕ್ಕೆ ಪುರಾಣ-ಪ್ರವಚನ ಕೇಳಲು, ಗುರುದರ್ಶನ ಪಡೆಯಲು ಹೊರಟಿರುತ್ತೇವೆ. ಅದೇ ಸಮಯಕ್ಕೆ ನಮ್ಮ ಅಂಗಡಿಗೆ ಒಂದು ಸಣ್ಣ ಗಿರಾಕಿ ಬರುತ್ತದೆ. ಅಥವಾ ನಮ್ಮ ಮನೆಗೆ ನೆಂಟರೋ, ನಾಯಕರೋ ಬರುತ್ತಾರೆ. ಅಷ್ಟೇ ನೆಪ ಸಾಕಾಗುತ್ತದೆ. ಗುರುದೇವರ ದರ್ಶನ ನಿಂತುಬಿಡುತ್ತದೆ. ನಮ್ಮದು ಇದೆಂಥ ಭಕ್ತಿಬಯಕೆ, ಜ್ಞಾನದಾಹ !

ಕೋಗಿಲೆಯು ವಸಂತಮಾಸದ ಅರುಣೋದಯಕ್ಕಾಗಿ ಕಾಯುತ್ತದೆ. ಅದರ ಎದೆಯಲ್ಲಿ ತರತರದ ಹಾಡುಗಳು ತುಂಬಿ ನಿಂದಿವೆ. ಅರುಣ ತೋರುವುದೇ ತಡ ಕೋಗಿಲೆಯು ಮನದುಂಬಿ ಹಾಡುತ್ತದೆ. ಸಚ್ಛಿಷ್ಯನೂ ಒಂದು ಬಗೆಯ ಕೋಗಿಲೆ. ಸದ್ಗುರುವೆಂಬ ವಸಂತರವಿಯ ಆಗಮನಕ್ಕಾಗಿ ಆತ ಕಾಯುತ್ತಾನೆ. ಆ ಜ್ಞಾನಭಾಸ್ಕರನ ಉದಯವಾಗುತ್ತಲೆ ಹೃದಯದುಂಬಿ ಆತ್ಮಗಾನ ಮಾಡಿ ಧನ್ಯನಾಗುತ್ತಾನೆ. ಈ ಉತ್ಕಟ ಜ್ಞಾನಪಿಪಾಸೆ ಸತ್ಯಸಾಧಕನಲ್ಲಿರಬೇಕು.

ನಮ್ಮ ತರುಣರಿಗೂ ಬಯಕೆಯಾಗುತ್ತವೆ, ನೋಡಬೇಕು. ಅವರಿಗೆ ಲಗ್ನದ ಬಯಕೆಯಾದಾಗ ಮನೆಯಲ್ಲಿ ಕಾರಣವಿಲ್ಲದೆ ಸಿಡಿಮಿಡಿಗೊಳ್ಳುತ್ತಾರೆ. ಗುಡಿಗುಂಡಾರ ಅಲೆದಾಡಿ ದೇವರಿಗೆ ಬೇಡಿಕೊಳ್ಳುತ್ತಾರೆ, 'ಬೇಗ ಲಗ್ನದ ಯೋಗವಾಗಲಿ' ಎಂದು. ಒಬ್ಬ ತರುಣನು ಮಾರುತಿ ಮಂದಿರಕ್ಕೆ ಹೋಗಿ ''ವಾಯುಪುತ್ರ, ನನಗೆ ಬೇಗ ಸತಿಯ ಕರುಣಿಸು'' ಎಂದು ಬೇಡಿಕೊಂಡ. ''ಶತಮಾನಗಳಾದರೂ ನಾನೇ ಲಗ್ನವಿಲ್ಲದೆ ನಿಂತಿದ್ದೇನೆ'' ಎಂದನಂತೆ ಮಾರುತಿ ! ನಮ್ಮ ತರುಣರ ಪ್ರಾಪಂಚಿಕ ಬಯಕೆ ಎಷ್ಟು ತೀವ್ರವಾಗಿದೆ ಎಂದರೆ – ಯಾರಿಗೆ ಏನು ಬೇಡಬೇಕೆಂಬುದೂ ಅವರಿಗೆ ತಿಳಿಯದಾಗಿದೆ.

ನಚಿಕೇತ ಎಂಟು ವರ್ಷದ ಬಾಲಕ. ಕಾರಣಾಂತರದಿಂದ ಕಾಲಪುರುಷನಾದ ಯಮಧರ್ಮನ ಬಳಿಗೆ ಹೋದ. ಬಾಲಕನ ಧೈರ್ಯ ಕಂಡು ಯಮಧರ್ಮರಾಜ ಸಂತುಷ್ಟನಾದ. ''ನಿನಗೇನು ವರ ಬೇಕು? ಬೇಡು, ಕೊಡುವೆ'' ಎಂದ. ''ಯಮಧರ್ಮ ನನಗೆ ಆತ್ಮವಿದ್ಯೆಯನ್ನು ಕೊಡು'' ಎಂದ ಬಾಲಕ ನಚಿಕೇತ.

'ನೀನಿನ್ನೂ ಚಿಕ್ಕವನು, ಕಠಿಣವಾದ ಆತ್ಮವಿದ್ಯೆ ನಿನಗೇಕೆ? ಬೇರೆ ಏನಾದರೂ ಕೇಳು. ಲೋಕದಲ್ಲಿ ಬಲ್ಲವರು, ಪಂಡಿತರು ತೀರ್ಥಕ್ಷೇತ್ರಗಳಿಗೆ ಹೋಗಿ ವ್ರತಾಚರಣೆಗಳನ್ನು ಮಾಡಿ ದೇವರಲ್ಲಿ ಅನೇಕ ವರಗಳನ್ನು ಬೇಡುತ್ತಾರೆ. ಆ ಎಲ್ಲ ವರಗಳನ್ನು ನಾನು ನಿನಗೆ ಕೊಡುತ್ತೇನೆ ಬೇಡು'' ಎಂದು ಯಮಧರ್ಮ ಹೇಳಿದ.

**ಯೇ ಯೇ ಕಾಮಾ ದುರ್ಲಭಾ ಮರ್ತ್ಯಲೋಕೇ**
**ಸರ್ವಾನ್ ಕಾಮಾಂಶ್ಛಂದತಃ ಪ್ರಾರ್ಥಯಸ್ವ ॥ 25(1) ಕ.ಉ.**

''ಅಷ್ಟೇ ಅಲ್ಲ, ಈ ಜಗತ್ತಿನಲ್ಲಿ ಅತ್ಯಂತ ದುರ್ಲಭವಾದುದು ಏನೇನು ಇದೆಯೋ ಅದನ್ನೆಲ್ಲಾ ಬೇಡು ಕೊಡುತ್ತೇನೆ. ಅಪಾರ ಸಂಪದ, ಅಧಿಕಾರ, ರಾಜ್ಯಗದ್ದುಗೆ, ಸೌಂದರ್ಯ, ಚಿರಾಯುಷ್ಯ ಏನಾದರೂ ಬೇಡು ಕೊಡುತ್ತೇನೆ'' ಎಂದು ಯಮಧರ್ಮನು ನಚಿಕೇತನಿಗೆ ಅನಾತ್ಮ ವಿಷಯಗಳ ಪ್ರಲೋಭನೆ ಒಡ್ಡಿದ.

**ಶ್ವೋಭಾವಾಮರ್ತ್ಯಸ್ಯ ಯದಂತಕೈತತ್**
**ಸರ್ವೇಂದ್ರಿಯಾಣಾಂ ಜರಯಂತಿ ತೇಜಃ ।**
**ಅಪಿ ಸರ್ವಂ ಜೀವಿತಮಲ್ಪಮೇವ**
**ತವೈವ ವಾಹಾಸ್ತವನೃತ್ಯಗೀತೇ ॥ 26 (1) ಕ.ಉ.**

''ನೀನು ಕೊಡುವ ಈ ವರಗಳೆಲ್ಲ, ನಶ್ವರವಾಗಿವೆ, ನನಗೆ ಅಮರವಾದ ಆತ್ಮವಿದ್ಯೆ ಒಂದನ್ನೇ ಕೊಡು'' ಎಂದನು ನಚಿಕೇತ. ''ಇದುವರೆಗೆ ನೀನು ಭೂಮಂಡಲದಲ್ಲಿ ಕೊಟ್ಟ ಸಂಪತ್ತನ್ನು ಯಾರೂ ಜೊತೆಗೆ ಒಯ್ದಿಲ್ಲ. ಮೇಲಾಗಿ ಈ ಐಶ್ವರ್ಯ ಎಂದೂ ಶಾಶ್ವತವಲ್ಲ. ಇನ್ನು ನೀನು ಬೇಡಿದಷ್ಟು ಆಯುಷ್ಯ ಕೊಡುತ್ತೇನೆ ಎನ್ನುತ್ತೀಯೆ. ಆದರೆ ಮನುಷ್ಯನಿಗೆ ಎಷ್ಟು ವರ್ಷ ಬದುಕಿದರೂ ಸಾಕೆನ್ನಿಸುವುದಿಲ್ಲ.'' (ಯಯಾತಿ ಮಹಾರಾಜನು ವಿಷಯ ಭೋಗದಾಸೆಯಿಂದ ಮಗನ ಆಯುಷ್ಯವನ್ನೂ ಸಹ ಬೇಡಲು ನಾಚಲಿಲ್ಲ).

ಇನ್ನು ನೀನು ಕೊಡುವ ವಿಷಯಭೋಗವೆಲ್ಲಾ ನಮ್ಮನ್ನು ಶಕ್ತಿಹೀನರನ್ನಾಗಿ ಮಾಡುತ್ತವೆ. ನಮ್ಮ ಕಣ್ಣಿನ ತೇಜ, ಬುದ್ಧಿಯ ಓಜ, ಮನದ ಉತ್ಸಾಹ, ಮೈಕಾವನ್ನೆಲ್ಲಾ ಈ ವಿಷಯಗಳು ಹರಣ ಮಾಡುತ್ತವೆ. ಆದ್ದರಿಂದ ನೀನು ಕೊಡಬೇಕೆಂದಿರುವ ಆಯುಷ್ಯ, ಐಶ್ವರ್ಯ, ಇತರ ಭೋಗವಾವುದೂ ನನಗೆ ಬೇಡ. ಅವುಗಳೆಲ್ಲ ನಿನಗೇ ಇರಲಿ. ಅಮೌಲ್ಯವಾದ ಆತ್ಮಜ್ಞಾನವೊಂದನ್ನೇ ಕರುಣಿಸು'' ಎಂದು ಜಾಣನಾದ ಬಾಲಕ ನಚಿಕೇತನು ಯಮಧರ್ಮನಿಗೆ ಹೇಳಿದ. ನಚಿಕೇತನ ಆತ್ಮಜ್ಞಾನದ ಪಿಪಾಸೆಯು ಜಗನ್ಮಾನ್ಯ ! ವಿಶ್ವ ಆಧ್ಯಾತ್ಮ ಸಾಧಕರಿಗೆಲ್ಲ ಆದರ್ಶ !

ನೌಕರರಿಗೆ ತಿಂಗಳ ಮೊದಲನೆ ವಾರದಲ್ಲಿರುವ ಉತ್ಸಾಹ ಕೊನೆಯ ವಾರದಲ್ಲಿರುವುದಿಲ್ಲ. ಮೊದಲನೆಯ ವಾರದಲ್ಲಿ ಅವರ ಕಿಸೆಗಳು ತುಂಬಿರುವಾಗ ಅವರಿಗೆ ಮುಗಿಲು ಮೂರೇ ಗೇಣು ! ಅವರೇ ಇಂದ್ರರು, ಅವರೇ ಚಂದ್ರರು ! ಮುಂದೆ ಮೂರನೆಯ ವಾರದಲ್ಲಿ ಕಿಸೆ ಖಾಲಿಯಾದಾಗ ಮನೆಯ ನೆನಪಾದರೆ ಅವರಿಗೆ ಭಯವಾಗುತ್ತದೆ.

ನೆಪೋಲಿಯನ್ ಬೋನಾಪಾರ್ಟನು ತಾರುಣ್ಯದಲ್ಲಿದ್ದಾಗ ''ಅಸಾಧ್ಯವೆನ್ನುವುದು ಮೂರ್ಖರ ಶಬ್ದಕೋಶದಲ್ಲಿ ದೊರೆಯುತ್ತದೆ'' ಎನ್ನುತ್ತಿದ್ದ. ಮುಂದೆ ಅದೇ ನೆಪೋಲಿಯನ್ ಸೇಂಟ್ ಹೆಲೆನ್ ಸೆರೆಮನೆಯಲ್ಲಿದ್ದಾಗ ಹೇಳಿದ್ದೇನು? 'ಸರ್ವಸಾಧ್ಯವೆನ್ನುವುದೇ ಮೂರ್ಖರ ಶಬ್ದಕೋಶದಲ್ಲಿ ದೊರೆಯುತ್ತದೆ !' ಎಂದಲ್ಲವೆ? ಎಂದಾಗ ಜಗತ್ತಿನಲ್ಲಿ ಲೌಕಿಕವಾದ ಯಾವ ಐಶ್ವರ್ಯ, ಅಧಿಕಾರ ಸ್ಥಿರವಾಗಿದೆ? ನಚಿಕೇತನು ಬಯಸಿದ ಆತ್ಮ ಜ್ಞಾನವೊಂದೇ ಚಿರ-ಸ್ಥಿರವಾದ ಅಲೌಕಿಕ ಸಂಪದ. ಸತ್ಯಸಾಧಕನು ನಿತ್ಯವೂ ಅದನ್ನೇ ಬಯಸಬೇಕು ! ಹೇಗೆ?

ಬೇಸಿಗೆಯಲ್ಲಿ ಭೂಮಿ ಕಾಯ್ದು ಧೂಳೆದ್ದಿರುತ್ತದೆ. ಮಣ್ಣು ಹುಡಿಹುಡಿಯಾಗಿ ಭೂಮಿ ಬಾಯ್ದೆರೆದಿರುತ್ತದೆ. ತನ್ನೊಡಲಿನಲ್ಲಿ ಕೋಟ್ಯಂತರ ಸಸಿಯ ಬೀಜಗಳನ್ನು ತುಂಬಿಕೊಂಡು ಭೂಮಿಯು ಮಳೆಗಾಗಿ ಹಂಬಲಿಸುತ್ತದೆ. ಹಂಬಲಿ ಹಂಬಲಿಸಿ ಒಂದು ದಿನ ಅದರ ಹಂಬಲವು ಕೈಗೂಡುತ್ತದೆ. ಮೇಘವು ಅಮೋಘವಾದ ಮಳೆಗರೆಯುತ್ತದೆ. ಆ ಭೋರ್ಗರೆವ ಮಳೆಯಲ್ಲಿ ತೊಯ್ದು ತೃಪ್ತವಾದ ಭೂಮಿಯಿಂದ ಒಂದು ಬಗೆಯ ಸಂತಸದ ಸುವಾಸನೆ ಹೊರಹೊಮ್ಮುತ್ತದೆ. ಅಲ್ಲಿಂದ ಮುಂದೆ ಜಗವೇ ನಂದನವನವಾಗಿ ಕಂಗೊಳಿಸುತ್ತದೆ.

ಹಾಗೆಯೇ ಸಚ್ಛಿಷ್ಯನು ಗುರುವಿನ ಜ್ಞಾನಾಮೃತದ ವರ್ಷಾಗಮನಕ್ಕಾಗಿ ಕಾಯಬೇಕು. ಹಂಬಲಿಸಿ ತಪಿಸಬೇಕು. ಉನ್ಮತ್ತನಾಗಬೇಕು. ಶ್ರೀಗುರುದರ್ಶನವಾಗುತ್ತಲೇ ಭಕ್ತಿಯಲ್ಲಿ ಹೂವಾಗಿ ಅರಳಿ, ಅನುಭಾವದಲ್ಲಿ ಹಣ್ಣಾಗಿ ಮಾಗಬೇಕು. ಶ್ರೀ ಗುರುವಿನಡಿಗೆ ತಾನೇ ಎಡೆಯಾಗಬೇಕು. ಸತ್ಯಸಾಧಕನಲ್ಲಿರುವ ಈ ಜ್ಞಾನದಾಹವೇ ಮುಂದೆ ಆತ್ಮಸಾಕ್ಷಾತ್ಕಾರಕ್ಕೆ, ಆನಾರೆಂಬುದನ್ನು ಅರಿಯುವುದಕ್ಕೆ ಹಸನಾದ ಭೂಮಿಕೆಯಾಗುತ್ತದೆ.

(ಕೃಪೆ: ಭಗವಚ್ಚಿಂತನ)







ಏಪ್ರಿಲ್ ೩೦ ರಂದು, ಶ್ರೀ ಸಿದ್ಧಗಂಗಾ ತಾಂತ್ರಿಕ ಮಹಾವಿದ್ಯಾಲಯದ ಮುಂಭಾಗದಲ್ಲಿ ಮಹಾಮಾನವತಾವಾದಿ ಜಗಜ್ಯೋತಿ ಬಸವಣ್ಣನವರ ಜಯಂತಿಯನ್ನು ಪರಮಪೂಜ್ಯ ಶ್ರೀ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳವರ ದಿವ್ಯಸಾನ್ನಿಧ್ಯದಲ್ಲಿ ಬಸವಣ್ಣನವರ ಪುತ್ಥಳಿಗೆ ಪುಷ್ಪಾರ್ಚನೆ ಮಾಡಿ ಭಕ್ತಿ ನಮನ ಸಲ್ಲಿಸಲಾಯಿತು. ನಂತರ ಹಮ್ಮಿಕೊಳ್ಳಲಾಗಿದ್ದ ಭವ್ಯ ಶೋಭಯಾತ್ರೆಯಲ್ಲಿ ಭಾಗವಹಿಸಿ ಬಸವ ತತ್ತ್ವಗಳ ಸ್ಮರಣೆ ಮಾಡಲಾಯಿತು. ಈ ಸಂದರ್ಭದಲ್ಲಿ ಹರಗುರು ಚರಮೂರ್ತಿಗಳು, ಗಣ್ಯರು ಹಾಗೂ ಸಾರ್ವಜನಿಕರು ಪಾಲ್ಗೊಂಡಿದ್ದರು.







ಚಿಂತನ

# ಶಿವಯೋಗಿಗಳ ಗದ್ದುಗೆಗಳು ಜಾಗೃತಸ್ಥಾನಗಳು

– ಕೋ.ರಂ. ಬಸವರಾಜು *

ಶಿವಶರಣರ ಅಥವಾ ಶಿವಯೋಗಿಗಳ ಲಿಂಗಶರೀರವನ್ನು ಸಮಾಧಿಗೊಳಿಸುವ ಐಕ್ಯ ಸ್ಥಳಗಳಿಗೆ 'ಗದ್ದುಗೆ'ಗಳೆಂದು ಕರೆಯುತ್ತೇವೆ. ಇದು ವಾಡಿಕೆಯಲ್ಲಿ ರೂಢಿಗತವಾಗಿ ಬಂದದ್ದು ಪ್ರಾಯಃ ಶರಣರ ಕಾಲದಿಂದ. ಮಹಾಶಿವಯೋಗಿಗಳ ಗದ್ದುಗೆಗಳು ಕಾಲಾಂತರದಲ್ಲಿ ಕ್ಷೇತ್ರಗಳಾಗಿ, ಮಠಗಳಾಗಿ ರೂಪುಗೊಂಡವು. ಈ ಗದ್ದುಗೆಗಳಲ್ಲಿ ಮಹಾಲಿಂಗವೇ ಆದ ಮಹಾಶಿವಯೋಗಿಗಳ ಧನಾತ್ಮಕವಾದ ತಪೋತರಂಗಗಳು ಅದೃಶ್ಯವಾಗಿ ಸಾವಿರಾರು ವರ್ಷಗಳ ಕಾಲ ಪ್ರಭಾವಶಾಲಿಯಾಗಿರುತ್ತವೆ ಎಂಬುದನ್ನು ವಿಜ್ಞಾನಿಗಳು ದೃಢಪಡಿಸಿದ್ದಾರೆ. ಹಾಗಾಗಿ ಗದ್ದುಗೆಗಳು ಸಂದರ್ಶನ ಮಾಡುವ ಭಕ್ತರ ಶ್ರದ್ಧಾ ಭಕ್ತಿಕೇಂದ್ರಗಳಾಗಿವೆ. ಉದಾ: ಕೂಡಲ ಸಂಗಮದ ಬಸವಣ್ಣನವರ ಐಕ್ಯಮಂಟಪ, ತೋಂಟದ ಶ್ರೀ ಸಿದ್ಧಲಿಂಗೇಶ್ವರರ ಎಡೆಯೂರಿನಂತಹ ತಪೋಕ್ಷೇತ್ರಗಳು, ಅಥಣಿ ಅಪ್ಪಗಳ ಗದ್ದುಗೆ ಮುಂತಾದವು. ಶಿವಯೋಗಿಗಳ ಗದ್ದುಗೆಗಳು ಸ್ಥಾವರಗಳಾಗಬಾರದು. ಅವು ಜಾಗೃತ ಕೇಂದ್ರಗಳಾಗಿ ಜಂಗಮಕ್ಷೇತ್ರಗಳಾಗಿ ನಮ್ಮ ಧರ್ಮ ಮತ್ತು ಸಂಸ್ಕೃತಿಯ ಶ್ರದ್ಧಾಕೇಂದ್ರಗಳಾಗಬೇಕು. ಅಧ್ಯಾತ್ಮವಿದ್ಯಾಪ್ರಸಾರದ ಕೇಂದ್ರಗಳಾಗಬೇಕು. ಲೋಕವಿದ್ಯೆಯನ್ನು ನೀಡುವ ಘಟಿಕಾಸ್ಥಾನಗಳಾಗಬೇಕು. ದೈವದ ನೆಲೆಗಳಾಗಬೇಕು. ನ್ಯಾಯಾಲಯಗಳಾಗಬೇಕು. ಸಮಾಜಕ್ಕೆ ಸಂಸ್ಕಾರ ಕೊಡುವ ತಾಣಗಳಾಗಬೇಕು. ಸಹಬಾಳ್ವೆಯ ಯೋಗ ಮಂದಿರಗಳಾಗಬೇಕು ಎಂಬುದು ಶರಣರ ಅಭಿಪ್ರಾಯ. ಮಹಾಶಿವಯೋಗಿಗಳ ಗದ್ದುಗೆ ದರ್ಶನದಿಂದ –

**'ಸಾಲೋಕ್ಯಂ ಭಕ್ತಿರೂಪೇಣ ಪೂಜಾಸಾಮೀಪ್ಯಮೇವಚ ।**
**ಸಾರೂಪ್ಯಂ ಧ್ಯಾನಯೋಗಂ ಚ ಸಾಯುಜ್ಯಂ ಚ ಮನೋಲಯಂ ॥**

ಭಕ್ತಿಯೋಗದಿಂದ ಸಾಲೋಕ್ಯಮೋಕ್ಷ, ಕರ್ಮ(ಪೂಜೆ) ಯೋಗದಿಂದ ಸಾಮೀಪ್ಯಮೋಕ್ಷ, ಧ್ಯಾನಯೋಗದಿಂದ ಸಾರೂಪ್ಯಮೋಕ್ಷ ಮತ್ತು ಮನಸ್ಸನ್ನು ಶಿವಯೋಗಿಯ ಮಹಾಲಿಂಗದಲ್ಲಿ ಲಯಗೊಳಿಸುವುದರಿಂದ ಸಾಯುಜ್ಯಮೋಕ್ಷ ಹೀಗೆ ಶಿವಯೋಗಿಯ ಗದ್ದುಗೆಯ ದರ್ಶನದಿಂದ ಚತುರ್ವಿಧ ಮೋಕ್ಷಗಳು ಪ್ರಾಪ್ತವಾಗುತ್ತವೆ.

**ಕೊನೆಯಲ್ಲಿ ಒಂದು ಮಾತು:** ಕೆಲವರು ಶಿವಯೋಗಿಗಳ ಜಂಗಮಕ್ಷೇತ್ರವಾದ ಗದ್ದುಗೆಗಳನ್ನು ಇತರ ದೇವಾಲಯಗಳಂತೆ (ವಾಸ್ತವವಾಗಿ ಅವೂ ಸ್ಥಾವರಗಳಲ್ಲ) ಸ್ಥಾವರಗಳೆಂಬುದಾಗಿ ಭಾವಿಸಿ ಅವುಗಳ ದರ್ಶನವನ್ನು ನಿಷಿದ್ಧ ಎಂದು ಹೇಳುತ್ತಾರೆ. ಆದರೆ ಅದು ನಿಜವರಿತ ಸಂಗತಿಯಲ್ಲ. ಅದಕ್ಕೆ ಒಂದೆರೆಡು ಉದಾಹರಣೆಗಳನ್ನು ಹೇಳಬಹುದು.

ಒಮ್ಮೆ ಧಾರವಾಡದ ಶ್ರೀ ಮೃತ್ಯುಂಜಯಪ್ಪಗಳು ಕೆಲವು ಸ್ವಾಮಿಗಳನ್ನು ಸಿದ್ಧಗಂಗೆಗೆ ಬರಲು ಹೇಳಿ ಹೊರಡುತ್ತಾರೆ. ದಾರಿಮಧ್ಯೆ ಎಡೆಯೂರಿಗೆ ಆಗಮಿಸಿ ಸಂಜೆ ಅಲ್ಲಿ ತಂಗುತ್ತಾರೆ. ಜೊತೆಯಲ್ಲಿ ಬಂದ ಜಂಗಮರೆಲ್ಲ ಸಿದ್ಧಲಿಂಗೇಶ್ವರರ ದರ್ಶನಕ್ಕಾಗಿ ಗದ್ದುಗೆಗೆ ಹೋಗುತ್ತಾರೆ. ಆದರೆ ಮೃತ್ಯುಂಜಯಪ್ಪಗಳು ಗದ್ದುಗೆ ಸ್ಥಾವರ ಎಂಬುದಾಗಿ ದರ್ಶನಕ್ಕೆ ಹೋಗುವುದಿಲ್ಲ. ಸರಿ, ರಾತ್ರಿ ಎಲ್ಲರೂ ಪವಡಿಸಿದ್ದಾರೆ. ಅಪ್ಪಗಳಿಗೆ ನಿದ್ದೆ ಬರಲಿಲ್ಲ. ಮನಃ ಪರಿವರ್ತನೆಯಾಗಿ ಎಲ್ಲರೂ ಏಳುವ ಮೊದಲೇ ಸ್ನಾನಾದಿಗಳನ್ನು ಪೂರೈಸಿ ಶ್ರೀ ಸಿದ್ಧಲಿಂಗೇಶ್ವರರ ಗದ್ದುಗೆಗೆ ಹೋಗಿ ದರ್ಶನ ಮಾಡಿ ದೀರ್ಘದಂಡವತ್ ನಮಸ್ಕಾರ ಮಾಡುತ್ತಾರೆ. ನಂತರ ಹೊರಟು ಸಿದ್ಧಗಂಗೆಗೆ ಬಿಜಂಗೈಯ್ಯುತ್ತಾರೆ.

**ಮತ್ತೊಂದು ಪ್ರತ್ಯಕ್ಷ ದೃಷ್ಟಾಂತ:** ಈಗ್ಗೆ ೨೦ ವರ್ಷಗಳ ಹಿಂದೆ ಅಥಣಿಯಲ್ಲಿ ನಮ್ಮ ಶ್ರೀಮಠದ ವತಿಯಿಂದ ಬಸವಜಯಂತಿಯ ನಿಮಿತ್ತ ಬಸವೇಶ್ವರ ನಾಟಕವು ನಡೆಯಿತು. ನಮ್ಮ ಪರಮಪೂಜ್ಯರಾದ ಡಾ. ಶ್ರೀ ಶ್ರೀ ಶ್ರೀಶಿವಕುಮಾರ ಮಹಾಶಿವಯೋಗಿಗಳು ಇಡೀದಿನ ಅಪ್ಪಗಳ ಮಠದಲ್ಲಿ ವಾಸ್ತವ್ಯ ಮಾಡಿದ್ದರು. ನಾಟಕವಾದ ಮರು ಬೆಳಿಗ್ಗೆ ನಾಟಕ ಪಾತ್ರಧಾರಿಗಳಾದ ನಾವೆಲ್ಲಾ ಅಧ್ಯಾಪಕರೂ ಅಪ್ಪಗಳ ಗದ್ದುಗೆಯಲ್ಲಿ ಭಕ್ತಿಪರವಶರಾಗಿ ಕುಳಿತಿದ್ದೆವು. ಆಗ ನಮ್ಮ ಪರಮಪೂಜ್ಯರು ಲಿಂಗಾರ್ಚನೆಯನ್ನು ಸಂಪನ್ನಗೊಳಿಸಿ ನೇರವಾಗಿ ಅಥಣಿ ಅಪ್ಪಗಳ ಗದ್ದುಗೆಗೆ ದಯಮಾಡಿಸಿದರು. ಬಂದವರೇ ಅಪ್ಪಗಳ ಗದ್ದುಗೆಗೆ ಸಾಷ್ಟಾಂಗ ನಮಸ್ಕಾರ ಮಾಡಿದರು. ನಾವೆಲ್ಲರೂ ಭಾವಪರವಶರಾದೆವು.

---

* ನಿವೃತ್ತ ಸಂಸ್ಕೃತ ಪ್ರಾಧ್ಯಾಪಕರು, ಸಿದ್ಧಗಂಗಾ ಮಠ

## ವಿದೇಶ ವಾರ್ತೆ

# ಅಮೇರಿಕಾದ ಕ್ಯಾಲಿಫೋರ್ನಿಯಾದಲ್ಲಿ ಬಸವ ಜಯಂತಿ ಹಾಗೂ ಪರಮಪೂಜ್ಯ ಡಾ. ಶ್ರೀ ಶ್ರೀ ಶಿವಕುಮಾರ ಶಿವಯೋಗಿಗಳವರ ೧೧೮ನೇ ಜನ್ಮದಿನೋತ್ಸವ ಸಮಾರಂಭ




ಅಮೇರಿಕಾದಲ್ಲಿರುವ ಶ್ರೀಮಠದ ಭಕ್ತರು ಹಾಗೂ ಹಳೆಯ ವಿದ್ಯಾರ್ಥಿಗಳು ಹಾಗೂ ಹಿತೈಷಿ ಸಂಘದ ಬಿನ್ನಹದ ಮೇರೆಗೆ ಪರಮಪೂಜ್ಯ ಶ್ರೀ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳವರು ಏಪ್ರಿಲ್ ೧೨ ರಂದು ಶ್ರೀಮಠದಿಂದ ಹೊರಟು ಮೇ ೧೫ರ ರಾತ್ರಿ ಶ್ರೀಮಠಕ್ಕೆ ದಯಮಾಡಿಸಿದರು.

ಪರಮಪೂಜ್ಯ ಶ್ರೀ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳವರು ಅಮೇಕಾದ ಭೇಟಿಯ ಹಿನ್ನೆಲೆಯಲ್ಲಿ ಕ್ಯಾಲಿಫೋನಿರ್ಯಾದಲ್ಲಿ ಶ್ರೀಮಠದ ಹಳೆಯ ವಿದ್ಯಾರ್ಥಿಗಳು ಹಾಗೂ ಹಿತೈಷಿ ಸಂಘದ ಶ್ರೀ ರೇಣುಕಾನಂದ ಸ್ವಾಮಿ ಮತ್ತು ಡಾ.ನಾಗಣ್ಣ ಅವರು ಆಯೋಜಿಸಿದ್ದ ಬಸವ ಜಯಂತಿ ಹಾಗೂ ಪರಮಪೂಜ್ಯ ಡಾ. ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರ ೧೧೮ನೇ ಜಯಂತ್ಯೋತ್ಸವ ಹಾಗೂ ಗುರುವಂದನ ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿ ತಮ್ಮ ಶಿವನುಡಿಗಳಲ್ಲಿ ಬಸವಣ್ಣನವರ ಘನವಕ್ತಿತ್ವವನ್ನು ಕುರಿತು "ಅಮೇರಿಕಾ ಕ್ಯಾಲಿರ್ಫೋನಿಯಾ ಹಾಗೂ ಭಾರತದಲ್ಲಿರುವ ಕರ್ನಾಟಕಕ್ಕೆ ಎತ್ತಣ ಸಂಬಂಧವನ್ನು ಅಲ್ಲಮನ ವಚನವನ್ನು ಉದಾರಿಸುತ್ತಾ –

**ಎತ್ತಣ ಮಾಮರ ಎತ್ತಣ ಕೋಗಿಲೆ,**
**ಎತ್ತಣೆಂದೆತ್ತ ಸಂಬಂಧವಯ್ಯ,**
**ಬೆಟ್ಟದ ಮೇಲಣ ನೆಲ್ಲಿಕಾಯಿ**
**ಸಮುದ್ರದೊಳಗಣ ಉಪ್ಪು,**
**ಎತ್ತಣಿಂದತ್ತ ಸಂಬಂಧವಯ್ಯ**
**ಗುಹೇಶ್ವರ ಲಿಂಗಕ್ಕೆಯೂ ಎನಗೆಯೂ**
**ಎತ್ತಣಿಂದೆತ್ತ ಸಂಬಂಧವಯ್ಯ.**



ನಾವು ಭೌತಿಕವಾಗಿ ಎಷ್ಟೇ ದೂರದಲ್ಲಿದ್ದರೂ ಭಾವನಾತ್ಮಕವಾಗಿ ಹತ್ತಿರವಾಗಿದ್ದೇವೆ. ನಾವು ಭೌತಿಕವಾಗಿ ಹತ್ತಿರವಿದ್ದರೂ ಭಾವನಾತ್ಮಕವಾಗಿ ಸ್ಪಂದಿಸದಿದ್ದಾಗ ದೂರವಾಗುತ್ತೇವೆ.

ನಮ್ಮ ಗುರುವರ್ಯರಾದ ಪರಮಪೂಜ್ಯ ಡಾ. ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರ ಸೇವಾಕಾರ್ಯಕ್ಕೆ ಬಸವಣ್ಣನವರೇ ಪ್ರೇರಣೆ. ಬಸವಣ್ಣನವರ ಸಾಮಾಜಿಕ ಹಾಗೂ ಧಾರ್ಮಿಕ ಕ್ರಾಂತಿ, ಕಾಯಕ–ದಾಸೋಹ ತತ್ತ್ವಗಳನ್ನು ಕರ್ನಾಟಕದಲ್ಲಿರುವ ಅನೇಕ ಮಠಗಳು ಅಳವಡಿಸಿಕೊಂಡು ಸೇವೆ ಸಲ್ಲಿಸುತ್ತಾ ಬಂದಿವೆ. ಬಸವಣ್ಣನವರು ಒಂದು







ವರ್ಗಕ್ಕೆ, ಒಂದು ಜಾತಿಗೆ, ಒಂದು ಸಮಾಜಕ್ಕೆ, ಒಂದು ಭಾಷೆಗೆ ಸೀಮಿತವಾದವರಲ್ಲ. ಅವರು ಇಡೀ ಜಗತ್ತಿಗೆ ಸೀಮಿತರಾದ ವಿಭೂತಿ ಪುರುಷರು. ಇಂಥ ಮಹಾತ್ಮರನ್ನು ನೆನೆಯುವುದೇ ಅತ್ಯಂತ ಮಹತ್ವವಾದ ಸಂದರ್ಭ. ಬಸವಣ್ಣನವರೇ ಹೇಳಿರುವಂತೆ –

**ಇವನಾರವ, ಇವನಾರವ,**
**ಇವನಾರವನೆಂದೆನಿಸದಿರಯ್ಯಾ,**
**ಇವ ನಮ್ಮವ, ಇವ ನಮ್ಮವ**
**ಇವ ನಮ್ಮವನೆಂದೆನಿಸಯ್ಯಾ,**
**ಕೂಡಲಸಂಗಮದೇವಾ**
**ನಿಮ್ಮ ಮನೆಯ ಮಗನೆಂದೆನಿಸಯ್ಯ.**

ಬಸವಣ್ಣನವರು ಹೇಳಿದಂತೆ ನಾವು ಎಲ್ಲರನ್ನೂ ಪ್ರೀತಿಯಿಂದ, ಗೌರವದಿಂದ ಕಂಡಾಗ ಜೀವನ ಸುಂದರವಾಗುತ್ತದೆ. ಸಮಾಜದಲ್ಲಿ ಸಾಮರಸ್ಯ ಭಾವನೆ ಮೂಡುತ್ತದೆ. ಮನುಷ್ಯರು ಹೇಗೆ ಬದುಕಬೇಕು, ಹೇಗೆ ನಮ್ಮ ಬದುಕನ್ನು ರೂಪಿಸಿಕೊಳ್ಳಬೇಕು ಎಂಬ ಎಲ್ಲಾ ವಿಚಾರಗಳನ್ನು ಕೊಟ್ಟಂತವರು ಜಗಜ್ಯೋತಿ ಬಸವಣ್ಣನವರು. ನಾವು ಮೊದಲು ಬಸವಣ್ಣನವರು ಹೇಳಿದ ಆದರ್ಶ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ನಂತರ ಬೇರೆಯವರಿಗೆ ಹೇಳಬೇಕು. ಜನಪದರು ಹೇಳಿದಂತೆ ನಡೆ ಕಲಿಸಿದವ ಬಸವ, ನುಡಿ ಕಲಿಸಿದವ ಬಸವ, ಗುಣ ಕಲಿಸಿದ ಬಸವ. ಬಸವಣ್ಣನವರು ಹೇಗೆ ನಡೆಯಬೇಕು ಎಂಬುದನ್ನು ಕಲಿಸಿದ್ದಾರೆ. ಹೇಗೆ ಮಾತನಾಡಬೇಕು ಎಂಬುದನ್ನು ಕಲಿಸಿಕೊಟ್ಟಿದ್ದಾರೆ. ಅಷ್ಟೇ ಅಲ್ಲ, ಹೇಗೆ ನಗಬೇಕು ಎಂಬುದನ್ನು ಕಲಿಸಿಕೊಟ್ಟಿದ್ದಾರೆ.

ಬಸವಣ್ಣನವರು ಒಂದು ಮಾರ್ಗ ಇದ್ದಂತೆ. ಅವರೊಂದು ಬೆಳಕು, ಧರ್ಮ, ವಿಶ್ವಾಸವನ್ನು ತಂದುಕೊಟ್ಟವರು. ಅನುಭವ ಮಂಟಪದ ಅಧ್ಯಕ್ಷರಾದ ವೈರಾಗ್ಯಮೂರ್ತಿ ಅಲ್ಲಮಪ್ರಭು ಬಸವಣ್ಣವರ ವ್ಯೋಮ ವ್ಯಕ್ತಿತ್ವವನ್ನು ಕುರಿತು ತಮ್ಮ ವಚನದಲ್ಲಿ ಅಭಿವ್ಯಕ್ತಿಗೊಳಿಸುತ್ತಾ –

**ಕಲ್ಯಾಣವೆಂಬ ಪ್ರಣತೆಯಲ್ಲಿ**
**ಭಕ್ತಿರಸವೆಂಬ ತೈಲವನೆರೆದು**
**ಆಚಾರವೆಂಬ ಭಕ್ತಿಯಲ್ಲಿ**
**ಬಸವಣ್ಣನೆಂಬ ಜ್ಯೋತಿಯ ಮುಟ್ಟಿಸಲು,**
**ತೊಳಗಿ ಬೆಳಗುತ್ತಿದ್ದಿತ್ತಯ್ಯಾ ಶಿವನ ಪ್ರಕಾಶ,**
**ಆ ಬೆಳಗಿನೊಳಗೆ ಒಪ್ಪುತ್ತಿದ್ದರಯ್ಯಾ,**
**ಅಸಂಖ್ಯಾತ ಭಕ್ತ ಗಣಂಗಳು**
**ಶಿವಭಕ್ತಕರಿರ್ದ ಕ್ಷೇತ್ರವೆ ಅನಿಮುಕ್ತ**
**ಕ್ಷೇತ್ರವೆಂಬುದು ಹುಸಿಯೆ?**
**ಶಿವಭಕ್ತರಿರ್ದ ದೇಶ ಪಾವನವೆಂಬುದು ಹುಸಿಯೆ?**
**ಗುಹೇಶ್ವರ ಲಿಂಗದಲ್ಲಿ**
**ಎನ್ನ ಪರಮಾರಾಧ್ಯ ಸಂಗನ ಬಸವಣ್ಣನ ಕಂಡು**
**ಬದುಕಿದೆನು ಕಾಣಾ ಸಿದ್ಧರಾಮಯ್ಯಾ.**

ಎಂದಿದ್ದಾರೆ.

ಹಾಗೆಯೇ ಜನಪದರೂ ಕೂಡ ಬಸವಣ್ಣನವರ ಭವ್ಯ ವ್ಯಕ್ತಿತ್ವವನ್ನು ಕುರಿತು –

**ಎಲ್ಲ ಬಲ್ಲಿದನಯ್ಯ ಕಲ್ಯಾಣ ಬಸವಯ್ಯ,**
**ಚೆಲ್ಲಿದನು ತಂದು ಶಿವಬೆಳಕ – ನಾಡೋಳಗೆ**
**ಸೊಲ್ಲೆತ್ತಿ ಜನವು ಹಾಡುವುದು.**

ಜನಪದರಿಗೆ ಬಸವಣ್ಣನವರ ಬಗ್ಗೆ ಅತ್ಯಂತ ಪ್ರೀತಿ, ಭಕ್ತಿ. ಅವರನ್ನು ಎಷ್ಟು ಕೊಂಡಾಡಿದರೂ ಸಮಾಧಾನವಿಲ್ಲ. ಅಂತಹ ವ್ಯಕ್ತಿತ್ವ ಬಸವಣ್ಣನವರು.

ಬಸವಣ್ಣನವರು ದೀನ ದಲಿತರನ್ನು ಉದ್ಧರಿಸಲು ಬಂದವರು, ದಾರ್ಶನಿಕ ಕವಿ ಡಾ.ಸಿದ್ಧಯ್ಯ ಪುರಾಣಿರು ತಮ್ಮ ಆಧುನಿಕ ವಚನದಲ್ಲಿ ಬಸವಣ್ಣನವರನ್ನು 'ಬೆಳಕು' ಎಂದು ಹೇಳಿದ್ದಾರೆ.

ಬಸವಣ್ಣನವರೆಂಬ ದರ್ಪಣವನ್ನಿಟ್ಟು ಅದರಲ್ಲಿ ನಮ್ಮನ್ನು ನೋಡಿಕೊಳ್ಳುತ್ತಾ ನಮ್ಮ ತಪ್ಪನ್ನು ತಿದ್ದಿಕೊಳ್ಳಬೇಕು. ಬಸವಣ್ಣನವರು ಹೇಳಿರುವಂತೆ –

**ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ,**
**ಮುನಿಯಬೇಡ, ಅನ್ಯರಿಗೆ ಅಸಹ್ಯಪಡಬೇಡ,**
**ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ.**
**ಇದೇ ಅಂತರಂಗಶುದ್ಧಿ, ಇದೇ ಬಹಿರಂಗಶುದ್ಧಿ**
**ಇದೇ ನಮ್ಮ ಕೂಡಲಸಂಗಮದೇವರನೊಲಿಸುವ ಪರಿ.**

ಈ ಸಪ್ತಸೂತ್ರಗಳು ಎಲ್ಲಾ ಧರ್ಮಗಳಲ್ಲಿಯೂ ಇವೆ. ತ್ರಿಕರಣ ಶುದ್ಧಿಯಿಂದ ಈ ಸಪ್ತ ಸೂತ್ರಗಳನ್ನು

ಜೀವನದಲ್ಲಿ ಅಳವಡಿಸಿಕೊಂಡರೆ ಸಮಾಜದಲ್ಲಿ ಆರೋಗ್ಯ ವಾತಾವರಣ ಮೂಡುತ್ತದೆ ಎಂದು ಪೂಜ್ಯ ಶ್ರೀಗಳವರು ಹೇಳಿದರು.

ಬಸವಣ್ಣನವರು ನಡೆ-ನುಡಿಗೆ ಹೆಚ್ಚು ಮಹತ್ವವನ್ನು ಕೊಟ್ಟಿದ್ದಾರೆ.

**ನುಡಿದರೆ ಮುತ್ತಿನ ಹಾರದಂತಿರಬೇಕು.**
**ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು.**
**ನುಡಿದರೆ ಸ್ಫಟಿಕದ ಶಲಾಕೆಯಂತಿರಬೇಕು.**
**ನುಡಿದರೆ ಲಿಂಗ ಮೆಚ್ಚಿ ಅಹುದೆನಬೇಕು.**
**ನುಡಿಯೊಳಗಾಗಿ ನಡೆಯದಿದ್ದಡೆ,**
**ಕೂಡಲಸಂಗಮದೇವನೆಂತೊಲಿವನಯ್ಯ?**

ನಾವು ನುಡಿಗೆ ಹೆಚ್ಚು ಮಹತ್ವ ಕೊಡುತ್ತೇವೆ, ಆದರೆ ನಡೆಗೆ ಗಮನ ಕೊಡುವುದಿಲ್ಲ. ನಡೆ-ನುಡಿಯಲ್ಲಿ ಒಂದಾದಾಗ ಮಾತ್ರ ಬದುಕಿಗೊಂದು ಅರ್ಥ ಬರುತ್ತದೆ ಎಂದು ಬಸವಣ್ಣನವರು ಹೇಳಿದ್ದಾರೆ. ಅವರ ಎಲ್ಲಾ ವಚನಗಳು ಬೆಳಕಾಗಿರುವಂತಹವು. ನುಡಿ ಎಷ್ಟು ಸುಂದರವಾಗಿರುತ್ತದೋ ನಡೆಯೂ ಅಷ್ಟೇ ಸುಂದರವಾಗಿರಬೇಕು. ಅದಕ್ಕೆ ಹೆಚ್ಚು ಒತ್ತು ಕೊಡಬೇಕು ಎಂದು ಹೇಳಿದರು.

ಬಸವಣ್ಣನವರು ಮಹಿಳೆಯರಿಗೆ ಹೆಚ್ಚು ಪ್ರಾಧಾನ್ಯತೆಯನ್ನು ಕೊಟ್ಟಿದ್ದರು. ಸಮಾಜದಲ್ಲಿ ಸ್ವಾಭಿಮಾನದಿಂದ ಬದುಕಲು ಉತ್ತಮವಾದ ಸ್ಥಾನಮಾನವನ್ನು ಕೊಟ್ಟಿದ್ದರು. ಜಗತ್ತಿನಲ್ಲಿ ಎಲ್ಲಿಯೂ ಮಹಿಳೆಯರಿಗೆ ಪ್ರಾತಿನಿಧ್ಯವನ್ನು ಕೊಟ್ಟಿಲ್ಲ. ಹೆಣ್ಣು ಮಕ್ಕಳಿಗೆ ಸಮಾಜದಲ್ಲಿ ಸಾಮಾಜಿಕವಾಗಿ, ರಾಜಕೀಯವಾಗಿ, ಆರ್ಥಿಕವಾಗಿ ಸ್ವಾತಂತ್ರ್ಯವನ್ನು ಕೊಟ್ಟಿದ್ದಾರೆ. ಆದರೆ ಧಾರ್ಮಿಕ ಕ್ಷೇತ್ರದಲ್ಲಿ ಕೊಟ್ಟಿಲ್ಲ. ಆದರೆ ಬಸವಣ್ಣನವರು ಧಾರ್ಮಿಕ ಕ್ಷೇತ್ರದಲ್ಲಿ ಪುರುಷರಷ್ಟೇ ಮಹಿಳೆಯರಿಗೂ ಸಮಾನತೆಯನ್ನು ಕೊಟ್ಟಿದ್ದಾರೆ.

ಜೇಡರ ದಾಸಿಮಯ್ಯ ಹೇಳಿರುವಂತೆ –

**ಮೊಲೆ ಮುಡಿ ಬಂದಡೆ ಹೆಣ್ಣೆಂಬರು.**
**ಗಡ್ಡ ಮೀಸೆ ಬಂದಡೆ ಗಂಡೆಂಬರು.**
**ನಡುವೆ ಸುಳಿವ ಆತ್ಮನು**
**ಹೆಣ್ಣೂ ಅಲ್ಲ ಗಂಡೂ ಅಲ್ಲ ಕಾಣಾ! ರಾಮನಾಥ.**

ಶರಣರ ದೃಷ್ಟಿಯಲ್ಲಿ ಹೆಣ್ಣು ಬೇರೆಯಲ್ಲ, ಗಂಡು ಬೇರೆಯಲ್ಲ. ಎಲ್ಲರೂ ಸಮಾನರು ಎಂದು ಹೇಳಿದರು. ಹೇಳಿದರಷ್ಟೇ ಅಲ್ಲ; ಹಾಗೆಯೇ ನಡೆದುಕೊಂಡರು. ೧೨ನೇ ಶತಮಾನದಲ್ಲಿ ಅನುಭವ ಮಂಟಪದಲ್ಲಿ ೩೩ ವಚನಕಾರ್ತಿಯರು ಭಾಗವಹಿಸಿ ತಮ್ಮ ತಮ್ಮ ಅಭಿಪ್ರಾಯಗಳನ್ನು ನೀಡಲು ಮುಕ್ತ ಅವಕಾಶವಿತ್ತು. ಅವಕಾಶ ಕಲ್ಪಿಸಿಕೊಟ್ಟಿದ್ದರು. ಅಲ್ಲಿ ಎಲ್ಲ ಕಾಯಕ ಮಾಡುವ ಜನರಿದ್ದರು. ಅಲ್ಲಿ ಕಾಯಕಕ್ಕೆ ಮೇಲು-ಕೀಳು ಎಂಬ ಭಾವನೆ ಇರಲಿಲ್ಲ. ಶರಣೆಯರಾದ ನೀಲಾಂಬಿಕೆ, ಆಯ್ದಕ್ಕಿ ಲಕ್ಕಮ್ಮ, ಮೋಳಿಗೆ ಮಹಾದೇವಿ, ಸತ್ಯಕ್ಕ, ದುಗ್ಗಳೆ, ಅಕ್ಕಮಹಾದೇವಿ ಮೊದಲಾದವರಿದ್ದರು. ಇವರಲ್ಲಿ ಅಕ್ಕಮಹಾದೇವಿ ಶಿಖರಪ್ರಾಯವಾಗಿದ್ದಳು. ಇವರೆಲ್ಲರೂ ಪುರುಷನಷ್ಟೇ ಹೆಚ್ಚಿನ ಸಾಧನೆ ಮಾಡಿದವರು. ಅನುಭವ ಮಂಟಪ ವಿಶ್ವದಲ್ಲೇ ಮೊದಲ ಪಾರ್ಲಿಮೆಂಟ್ ಎಂಬ ಹೆಗ್ಗಳಿಕೆಗೆ ಪಾತ್ರವಾಗಿತ್ತು. ಸತ್ಯಕ್ಕ ಕಸ ಗುಡಿಸುವ ಕಾಯಕ ಮಾಡುತ್ತಿದ್ದರೂ ಆದರ್ಶ ಜೀವನವನ್ನು ನಡೆಸುತ್ತಿದ್ದಳು.

**ಅರ್ಚನೆ ಪೂಜನೆ ನೇಮವಲ್ಲ;**
**ಮಂತ್ರ ತಂತ್ರ ನೇಮವಲ್ಲ;**
**ಧೂಪ ದೀಪಾರತಿ ನೇಮವಲ್ಲ;**
**ಪರಧನ ಪರಸ್ತ್ರೀ ಪರದೈವಂಗಳಿಗೆರಗದಿಪ್ಪುದೆ ನೇಮ.**
**ಶಂಭುಜಕ್ಕೇಶ್ವರನಲ್ಲಿ ಇವು ಕಾಣೆರಣ್ಣಾ ನಿತ್ಯನೇಮ.**

ಸತ್ಯಕ್ಕ ಕಸಗುಡಿಸುವಾಗ ಬೀದಿಯಲ್ಲಿ ಬೆಲೆ ಬಾಳುವ ವಸ್ತು ಬಿದ್ದಿರುತ್ತದೆ. ಅದನ್ನು ಮುಟ್ಟುವುದಿಲ್ಲ. ಅಂತಹ ದಿಟ್ಟತನವನ್ನು ಸತ್ಯಕ್ಕ ತನ್ನ ಆದರ್ಶ ನಡೆಯ ಮೂಲಕ ತೋರಿಸಿ ದಾರಿದೀಪವಾಗಿದ್ದಾಳೆ.

ಪ್ರತಿಯೊಂದು ಮನೆಯಲ್ಲಿಯೂ ಆಯ್ದಕ್ಕಿ ಲಕ್ಕಮ್ಮ ಅಂತವರಿದ್ದರೆ ಕುಟುಂಬದಲ್ಲಿ ನೆಮ್ಮದಿ ದೊರೆಯುತ್ತದೆ. 'ಹಾಸಿಗೆ ಇದ್ದಷ್ಟು ಕಾಲು ಚಾಚು' ಎಂಬ ಗಾದೆಯ ಆಶಯದಂತೆ ಬದುಕಿದವರು. ದುರಾಸೆಯನ್ನು ಹತ್ತಿರ ಸುಳಿಯಲು ಬಿಡುತ್ತಿರಲಿಲ್ಲ. ಅವರದು ಆದರ್ಶ ದಾಂಪತ್ಯ. ಪತಿ ಮಾರಯ್ಯ ಮಹಾಮನೆಯ ಬೀದಿಯಲ್ಲಿ ಚೆಲ್ಲಿದ್ದ ಅಕ್ಕಿಯನ್ನು ಹಾಯ್ದು ತಂದು ತಮಗೆಷ್ಟು ಬೇಕೋ ಅಷ್ಟನ್ನು ಇಟ್ಟುಕೊಂಡು ಉಳಿದುದನ್ನು ಜಂಗಮ ದಾಸೋಹಕ್ಕೆ ವಿನಿಯೋಗಿಸುತ್ತಿದ್ದರು. ಒಮ್ಮೆ ಅನುಭವದ

ಮಂಟಪದಲ್ಲಿ ಆಯ್ದಕ್ಕಿ ಮಾರಯ್ಯ ಚರ್ಚೆಯಲ್ಲಿ ಭಾಗಿಯಾಗಿದ್ದಾಗ ತನ್ನ ನಿತ್ಯದ ಕಾಯಕವನ್ನೇ ಮರೆತು ಬಿಡುತ್ತಾನೆ. ಆತನ ಮಡದಿ 'ಎನ್ನಾಳ್ದನೆ ಕಾಯಕ'ಕ್ಕೆ ವೇಳೆಯಾಯಿತು ಎಂದು ಎಚ್ಚರಿಸುತ್ತಾಳೆ. ಈಗಾಗಲೇ ಸಾಕಷ್ಟು ಸಮಯವಾಗಿದೆ ಎಂದು ಗಡಿ ಬಿಡಿಯಿಂದ ಕಾಯಕಕ್ಕೆ ಹೋಗುತ್ತಾನೆ. ಇದನ್ನೆಲ್ಲ ಗಮನಿಸಿದ ಬಸವಣ್ಣನವರು ದಾರಿಯಲ್ಲಿ ಹೆಚ್ಚು ಅಕ್ಕಿಯನ್ನು ಚೆಲ್ಲಿಸುತ್ತಾರೆ. ಮಾರಯ್ಯ ಸಂತೋಷದಿಂದ ಅವೆಲ್ಲವನ್ನು ಸಂಗ್ರಹಿಸಿ ಗಂಟು ಕಟ್ಟಿಕೊಂಡು ಮನೆಗೆ ಬರುತ್ತಾನೆ. ಅವನ ದೃಷ್ಟಿಯಲ್ಲಿ ಇಷ್ಟೊಂದು ಅಕ್ಕಿಯನ್ನು ಕಂಡು ಹೆಂಡತಿ ಸಂತೋಷಪಡುತ್ತಾಳೆ ಎಂದು ನಿರೀಕ್ಷಿಸುತ್ತಾನೆ. ಆದರೆ ಆಗಿದ್ದೇ ಬೇರೆ. ಆ ಅಕ್ಕಿಯ ಗಂಟನ್ನು ಕಂಡು ಲಕ್ಕಮ್ಮ ಸಿಡಿಮಿಡಿಗೊಳ್ಳುತ್ತಾಳೆ. ಅದನ್ನೆಲ್ಲಾ ಅಲ್ಲಿಯೇ ಸುರಿದು ನಮಗೆ ಎಷ್ಟುಬೇಕೋ ಅಷ್ಟನ್ನು ಮಾತ್ರ ತೆಗೆದುಕೊಂಡು ಬರುವಂತೆ ಹೇಳುತ್ತಾಳೆ. ಆಗಿನ ತನ್ನ ಮನಸ್ಸಿನ ಭಾವನೆಗಳನ್ನು ವಚನ ಮೂಲಕ ಹೀಗೆ ಅಭಿವ್ಯಕ್ತಿಪಡಿಸುತ್ತಾಳೆ. ಚೆಲ್ಲುವುದು ನಮ್ಮ ಸಂಸ್ಕಾರವಲ್ಲ, ಚೆಲ್ಲಿದ್ದನ್ನು ಆಯ್ದುಕೊಂಡು ಬರುವುದು ಒಂದು ಸಂಸ್ಕಾರ. ಅಂತಹ ಸಂಸ್ಕಾರವನ್ನು ಕೊಟ್ಟವಳು ಆಯ್ದಕ್ಕಿ ಲಕ್ಕಮ್ಮ. ಲಕ್ಕಮ್ಮ ತನ್ನ ಗಂಡನ ದುರಾಸೆಯನ್ನು ಕಂಡು ಎಚ್ಚರಿಸುತ್ತಾಳೆ –

**ಆಸೆಯೆಂಬುದು, ಅರಸಿಂಗಲ್ಲದೆ,**
**ಶಿವಭಕ್ತರಿಗುಂಟೆ ಅಯ್ಯಾ?**
**ರೋಷವೆಂಬುದು, ಯಮದೂತರಿಗಲ್ಲದೆ,**
**ಅಜಾತರಿಗುಂಟೆ ಅಯ್ಯಾ?**
**ಈಸಕ್ಕಿಯಾಸೆ ನಿಮಗೇಕೆ? ಈಶ್ವರನೊಪ್ಪ,**
**ಮಾರಯ್ಯಪ್ರಿಯ ಅಮರೇಶ್ವರಲಿಂಗಕ್ಕೆ ದೂರ**
**ಮಾರಯ್ಯ.**

ಈ ವಚನದ ಆಶಯವನ್ನು ಅರ್ಥ ಮಾಡಿಕೊಂಡು ನಡೆದರೆ ಪ್ರತಿಯೊಂದು ಕುಟುಂದಲ್ಲಿಯೂ ಸಂತೋಷ ನೆಮ್ಮದಿ ದೊರೆಯುತ್ತದೆ ಎಂದು ಹೇಳಿದರು.

ಪರಮಪೂಜ್ಯ ಶ್ರೀ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳವರು ತಮ್ಮ ಪೂಜ್ಯ ಗುರುವರ್ಯರಾದ ಪರಮಪೂಜ್ಯ ಡಾ. ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳ ಬಗ್ಗೆ ತಮ್ಮ ನುಡಿನಮನದಲ್ಲಿ "ಭಾರತದ ಪ್ರಖ್ಯಾತ ನೇತ್ರ ತಜ್ಞರಲ್ಲಿ ಒಬ್ಬರಾದ ಡಾ.ಎಂ.ಸಿ.ಮೋದಿಯವರು ಹಳ್ಳಿ ಹಳ್ಳಿಗೆ ಹೋಗಿ ಶಿಬಿರಗಳನ್ನು ಏರ್ಪಡಿಸಿ ಲಕ್ಷಾಂತರ ಜನರ ಕಣ್ಣಿನ ಶಸ್ತ್ರ ಚಿಕಿತ್ಸೆ ಮಾಡಿದವರು. ಅವರು ಒಂದು ಮಾತು ಹೇಳುತ್ತಿದ್ದರು. ಮಠ ಎಂದರೆ 'ಸಿದ್ಧಗಂಗಾ ಮಠ, ಸ್ವಾಮಿಗಳೆಂದರೆ ಶ್ರೀ ಶಿವಕುಮಾರ ಮಹಾಶಿವಯೋಗಿಗಳು' ಎಂದು. ಮಠ ಒಂದು ಸೇವಾ ಕೇಂದ್ರವಾಗಿರಬೇಕು, ಇತರ ಮಠಗಳು ಚಿಕ್ಕದಿರಲಿ, ದೊಡ್ಡದಿರಲಿ ತಮ್ಮ ಇತಿಮಿತಿಯಲ್ಲಿ ಸೇವೆ ಮಾಡುತ್ತಾ ಬಂದಿವೆ. ಬೆಳಗಾವಿಯಲ್ಲಿರುವ ನಾಗನೂರು ರುದ್ರಾಕ್ಷಿ ಮಠವಿರಬಹುದು, ಮೈಸೂರಿನಲ್ಲಿರು ಶ್ರೀ ಸುತ್ತೂರು ಮಠವಿರಬಹುದು, ಎಲ್ಲಾ ಮಠಗಳು ಸಮಾಜಕ್ಕೆ ಸಮರ್ಪಣೆ ಭಾವದಿಂದ ಸೇವೆ ಸಲ್ಲಿಸುತ್ತಾ ಬಂದಿವೆ.

ಲಕ್ಷಾಂತರ ಜನರಿಗೆ ಬೆಳಕು ತೋರಿಸಿದವರು ಪರಮಪೂಜ್ಯ ಡಾ. ಶ್ರೀ ಶ್ರೀ ಶಿವಕುಮಾರ ಶಿವಯೋಗಿಗಳು. ೮೯ ವರ್ಷಗಳ ಕಾಲ ನಿರಂತರವಾಗಿ ಧಾರ್ಮಿಕ ಕ್ಷೇತ್ರದಲ್ಲಿ ತಮ್ಮನ್ನು ಸಮರ್ಪಣಾಭಾವದಿಂದ ಸಮರ್ಪಿಸಿಕೊಂಡ ಕೀರ್ತಿ ಪೂಜ್ಯ ಶ್ರೀಗಳವರದು.

ಕಾಳಿದಾಸ ಕವಿ ರಘುವಂಶ ಮಹಾಕಾವ್ಯದಲ್ಲಿ ರಾಜನ ವರ್ಣನೆಯನ್ನು ಮಾಡಿದ್ದಾನೆ. ರಾಜನಾದವನು ಪ್ರಜೆಗಳಿಗೆ ತಂದೆ ತಾಯಿಯಂತ್ತಿರಬೇಕು ಎಂದು. ಹಾಗಾದರೆ ತಂದೆ ತಾಯಿಗಳು ಯಾರು ಎಂದರೆ ಜನ್ಮವನ್ನು ಕೊಟ್ಟವರು. ಕಾಳಿದಾಸ ತನ್ನ ಕಾವ್ಯದಲ್ಲಿ ಐದು ವರ್ಗಗಳನ್ನು ಹೇಳಿದ್ದಾನೆ.

ಶಿಲಾವರ್ಗ, ಸಸ್ಯವರ್ಗ, ಪ್ರಾಣಿವರ್ಗ, ಮನುಷ್ಯವರ್ಗ ಹಾಗೂ ದೇವವರ್ಗ ಎಂದು. ಶಿಲಾವರ್ಗ ಎಂದರೆ ತಾವು ಮಾತ್ರ ಚೆನ್ನಾಗಿರಬೇಕು ಎಂಬುದು. ಸಸ್ಯವರ್ಗ ತಾನು ಮತ್ತು ತನ್ನ ಮಕ್ಕಳು ಚೆನ್ನಾಗಿರಬೇಕು ಎಂಬುದು. ಪ್ರಾಣಿವರ್ಗ ಎಂದರೆ ತನ್ನ ಕುಟುಂಬ, ಪರಿವಾರ ಚೆನ್ನಾಗಿರಬೇಕು, ಮನುಷ್ಯವರ್ಗ ತನ್ನ ದೇಶ ಚೆನ್ನಾಗಿರಬೇಕು ಎಂಬುದು. ದೇವರ್ಗದವರು ಇಡೀ ವಿಶ್ವವೇ ಚೆನ್ನಾಗಿರಬೇಕು ಎಂಬ ಆಶಯವನ್ನಿಟ್ಟು ಕೊಂಡವರು. ಶ್ರೀ ಶಿವಕುಮಾರ ಶಿವಯೋಗಿಗಳವರು ಕಾಯಕ ಮಾಡಿ ಮಠ ಕಟ್ಟಿದವರು. ಅವರು ಸೌದೆ ಒಡೆದಿದ್ದಾರೆ, ಅಡುಗೆ

ಮಾಡಿದ್ದಾರೆ, ಮಕ್ಕಳಿಗೆ ಊಟ ಬಡಿಸಿದ್ದಾರೆ. ಭಕ್ತರು ಬಿನ್ನಹಕ್ಕೆ ಕರೆದಾಗ ೨೫ ಮೈಲಿಯುವರೆಗೂ ನಡೆದುಕೊಂಡು ಹೋಗಿ ಬರುತ್ತಿದ್ದನ್ನು ನಮಗೆ ಹೇಳುತ್ತಿದ್ದರು. ಅವರ ದಿನಚರಿಯೆ ಅದ್ಭುತವಾದುದು.

ಶ್ರೀಮಠದಲ್ಲಿ ಮೂರು ವರ್ಷ ವ್ಯಾಸಂಗ ಮಾಡಿ ರಾಷ್ಟ್ರಕವಿ ಎಂಬ ಗೌರವಕ್ಕೆ ಭಾಜನರಾಗಿದ್ದ ಡಾ.ಜಿ.ಎಸ್.ಶಿವರುದ್ರಪ್ಪನವರು ತಮ್ಮ ಕವನದ ಮೂಲಕ ಪರಮಪೂಜ್ಯರ ಘನ ಶಿವವ್ಯಕ್ತಿತ್ವವನ್ನು ಬಹು ಸುಂದರವಾಗಿ ಕಟ್ಟಿಕೊಟ್ಟಿದ್ದಾರೆ.

**ಹರನ ಕರುಣೋದಯದ ತೆರದಲಿ ಬೆಳಗು ತೆರೆಯುವ ಹೊತ್ತಿಗೆ ।**
**ವೇದ ಘೋಷದ ದಿವ್ಯ ಲಹರಿಯು ಮನವ ತೊಳೆಯಲು ಮೆಲ್ಲಗೆ।**
**ಬರುವ ಶ್ರೀಗುರು ಪಾದುಕೆಯ ದನಿ ಅನುರಣಿತವಾಗಲು ಮೌನಕೆ ।**
**ಸಿದ್ಧಗಂಗೆಯ ನೆಲವು ಜಲವೂ ನಮಿಸಿ ನಿಲುವುದು ಸುಮ್ಮಗೆ ॥**

**ಬೆಟ್ಟಬಂಡೆಯ ನಡುವೆ ಗಿಡ ಮರ ಹೂವನೆತ್ತಿರೆ ಪೂಜೆಗೆ ।**
**ದೇಗುಲದ ಪೂಜಾರತಿಯ ಗಂಟೆಯ ಮೊಳಗು ಮುಟ್ಟಲು ಬಾನಿಗೆ ।**
**ಧೂಪಗಂಧವು ಮಂದಮಂದಾನಿಲನ ಜೊತೆಯೊಳು ಮನಸಿಗೆ ।**
**ಸಂಭ್ರಮನುಕ್ಕಿಸೆ ಬೆಳಗು ಇಳಿವುದು ಸಿದ್ಧಗಂಗೆಯ ಕ್ಷೇತ್ರಕೆ ॥**

**ಇಲ್ಲಿ ಇಲ್ಲ ಪವಾಡದದ್ಭುತ ಅಥವ ಉತ್ಸವದಬ್ಬರ ।**
**ಮುಡಿಯನೆತ್ತಿದೆ ಸರಳ ಸಾಧಾರಣದ ಬದುಕಿನ ಗೋಪುರ ।**
**ಅದರ ಮೇಲಿದೆ ತ್ಯಾಗ ಧ್ವಜ ಕೈಬೀಸಿ ಕರೆವುದು ಪಥಿಕರ ।**
**ಪರಮ ನಿರಪೇಕ್ಷೆಯಲಿ ದಿನವೂ ಸೇವೆಗಾಗಿದೆ ಸರ್ವರ ॥**

**ಭಿಕ್ಷೆ ಹೊರಟಿದೆ ಜಂಗಮದ ಜೋಳಿಗೆ ಲಕ್ಷ ಜನಗಳ ಪೊರೆದಿದೆ।**
**ತೀರ್ಥವಾಗಿದೆ ಭಕ್ತರಿಗೆ ಜೊತೆಗೇ ಸ್ಫೂರ್ತಿಯಾಗಿದೆ ಬುದ್ಧಿಗೆ ।**
**ಬಂದ ಹಣತೆಗೆ ಎಣ್ಣೆ – ಬತ್ತಿಯ ದೀಪ್ತಿದಾನವ ಮಾಡಿದೆ ।**
**ರಕ್ಷೆಯಾಗಿದೆ ಮುಗಿಲನೇರಿದ ಎಷ್ಟೋರೆಕ್ಕೆಯ ಹಾದಿಗೆ ॥**

**ಸದ್ದುಗದ್ದಲವಿರದ ಸಾಧನೆ ಇಲ್ಲಿ ಗದ್ದುಗೆಯೇರಿದೆ ।**
**ಕಾಯಕವೆ ಕೈಲಾಸವೆನ್ನುವ ಮಾತು ಕೃತಿಯೊಳು ಮೂಡಿದೆ ।**
**ಕಾವಿಯುಡುಗೆಯನುಟ್ಟು ನಭವೇ ಕಿರಣ ಹಸ್ತವ ಚಾಚಿದೆ ।**
**ಎಲ್ಲ ನನ್ನವರೆನುವ ಭಾವದ ಕರುಣೆಯೇ ಕಣ್ತೆರೆದಿದೆ ॥**

ಅವರ ಸ್ಮರಣೆಯೆ ನಮಗೆ ಶಕ್ತಿ. ಪರಮಪೂಜ್ಯ ಡಾ. ಶ್ರೀ ಶ್ರೀ ಶಿವಕುಮಾರ ಶಿವಯೋಗಿಗಳವರನ್ನು ಯಾರಿಗೂ ಹೋಲಿಸಲು ಸಾಧ್ಯವಿಲ್ಲ. ಸೂರ್ಯನಿಗೆ ಸೂರ್ಯನೆ ಹೋಲಿಕೆ, ಸಾಗರಕ್ಕೆ ಸಾಗರವೇ ಹೋಲಿಕೆ, ಪೂಜ್ಯ ಶ್ರೀಗಳವರು ನಿಮ್ಮಲ್ಲಿಯೇ ನೆಲೆಸಿದ್ದಾರೆ. ಅವರ ಸೇವೆ ವಿಶ್ವದ ಧಾರ್ಮಿಕ ಇತಿಹಾಸದಲ್ಲಿ ಸುವರ್ಣಾಕ್ಷರಗಳಲ್ಲಿ ದಾಖಲಾಗಿರುವಂತಹದು.

ಇವತ್ತು ವಿಶ್ವಮಾತೆಯರ ದಿನಾಚರಣೆಯನ್ನು ಆಚರಿಸುತ್ತಿರುವುದರ ಮೂಲಕ ತಾಯಿಗೆ ಗೌರವವನ್ನು ಸಮರ್ಪಿಸುತ್ತಿದ್ದೀರಿ. ತಾಯಿಗಿಂತ ದೇವರಿಲ್ಲ ಎಂಬ ಮಾತು ಅರ್ಥಪೂರ್ಣವಾದುದು. ತಾಯಿ ಪ್ರೀತಿ ಬೆಲೆ ಕಟ್ಟಲಾಗದಂತಹದು. ಈ ಜಗತ್ತಿನಲ್ಲಿ ಕೆಟ್ಟ ತಾಯಿ ಇಲ್ಲ ಎಂದು ಶಂಕರಾಚಾರ್ಯರು ಹೇಳಿದ್ದಾರೆ. ಅವರ ಮಾತು ಮೌಲಿಕವಾದುದು" ಎಂದು ಹೇಳಿದರು.

ಇಲ್ಲಿ ಕನ್ನಡ ಸಂಘ, ಅನುಭವ ಮಂಟಪ ಇದೆ ಎಂದು ಕೇಳಿದ್ದೇವೆ. ಎಲ್ಲರೂ ಒಗ್ಗಟ್ಟಾಗಿ ಒಂದೇ ಎಂದು ಭಾವಿಸಿ ಸೇವೆ ಸಲ್ಲಿಸಿ, ಭಾಷೆ, ಗಡಿ, ಪ್ರಾಂತ್ಯ ಬೇರೆಯಾದರೂ; ನಾವೆಲ್ಲ ಒಂದೇ ಎಂದು ಭಾವನೆ ಇರಲಿ ಎಂದು ಕಿವಿಮಾತು ಹೇಳಿದರು.

ಪರಮಪೂಜ್ಯ ಶ್ರೀ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳವರು ಭಕ್ತರ ಮನೆಗಳಲ್ಲಿ ಶಿವಯೋಗಾನುಷ್ಠಾನ ಮಾಡಿ, ಮಕ್ಕಳಲ್ಲಿ ಇಷ್ಟಲಿಂಗ ಪೂಜೆಯ ಸಂಸ್ಕಾರವನ್ನು ತಂದೆ ತಾಯಿಗಳು ತಿಳಿಸಿ ಕೊಡುವುದರ ಮೂಲಕ ಅವರಲ್ಲಿ ನಮ್ಮ ಶರಣ ಸಂಸ್ಕೃತಿ ಬೆಳೆಯುವಂತೆ ಮಾಡಬೇಕು ಎಂದು ತಮ್ಮ ಶಿವನುಡಿಗಳಲ್ಲಿ ತಿಳಿಸಿದರು. ಅವರು ಈ ಸಂದರ್ಭದಲ್ಲಿ ಗುರುವಿನ ಮಹತ್ವವನ್ನು ಪರಿಚಯ ಮಾಡಿಕೊಟ್ಟರು.

ಪರಮಪೂಜ್ಯ ಶ್ರೀಗಳವರು ಶ್ರೀ ಸಿದ್ಧಗಂಗಾ ಪ್ರೌಢಶಾಲೆಯಲ್ಲಿ ಮುಖ್ಯ ಶಿಕ್ಷಕರಾಗಿ ನಿವೃತ್ತರಾಗಿರುವ ಶ್ರೀ ಎಸ್.ಆರ್.ಸದಾಶಿವಯ್ಯ ಅವರ ಸುಪುತ್ರರೂ, ಶ್ರೀಮಠದ ಪರಮಭಕ್ತರೂ ಆದ ಶ್ರೀ ರೇಣುಕಾನಂದ ಸ್ವಾಮಿಯವರು ಅಮೇರಿಕಾದ ಟ್ರೇಸಿ ಕ್ಯಾಲಿಫೋರ್ನಿಯಾದಲ್ಲಿ ಕಟ್ಟಿಸಿರುವ ನೂತನ ಗೃಹಪ್ರವೇಶದ ಸಮಾರಂಭದಲ್ಲಿ ಭಾಗವಹಿಸಿ, ಶಿವಪೂಜೆ ನಡೆಸಿಕೊಟ್ಟು ಸಮಾರಂಭದಲ್ಲಿ ಭಾಗವಹಿಸಿದ್ದ ಭಕ್ತರಿಗೆ ಶರಣ ಸಂಸ್ಕೃತಿಯ ಬಗ್ಗೆ ಪರಿಚಯ ಮಾಡಿಕೊಟ್ಟು ಆಶೀರ್ವದಿಸಿದರು.







# ಅಮೇರಿಕಾದ ಭಕ್ತರ ಮನೆಯಲ್ಲಿ ಪರಮಪೂಜ್ಯ ಶ್ರೀ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳವರು



ಶ್ರೀ ಸಿದ್ಧಗಂಗಾ ವಿದ್ಯಾ ಸಂಸ್ಥೆಯಲ್ಲಿ ಪ್ರೌಢಶಾಲಾ ನಿವೃತ್ತ ಮುಖ್ಯೋಪಧ್ಯಾರಾಗಿ ಸೇವೆ ಸಲ್ಲಿಸಿರುವ ಶ್ರೀ ಸದಾಶಿವಯ್ಯನವರ ಅವರ ಸುಪುತ್ರರಾದ ಶ್ರೀ ರೇಣುಕಾನಂದ ಸ್ವಾಮಿಯವರು ನೂತನವಾಗಿ ನಿರ್ಮಾಸಿರುವ ಮನೆಯ ಗೃಹಪ್ರವೇಶದಲ್ಲಿ ಪರಮಪೂಜ್ಯ ಶ್ರೀ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳವರು



ಶ್ರೀ ರೇಣುಕಾನಂದ ಸ್ವಾಮಿಯವರು ಅಮೇರಿಕಾದ ಟ್ರೇಸ್ಸಿ ಕ್ಯಾಲಿಫೋರ್ನಿಯಾದಲ್ಲಿ ನೂತನವಾಗಿ ನಿರ್ಮಾಸಿರುವ ಮನೆಯ ಗೃಹಪ್ರವೇಶದಲ್ಲಿ ಪರಮಪೂಜ್ಯ ಶ್ರೀ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳವರು




ಪರಮಪೂಜ್ಯ ಶ್ರೀ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳವರಿಂದ ಜಗಜ್ಯೋತಿ ಬಸವೇಶ್ವರ ಹಾಗೂ ಪರಮಪೂಜ್ಯ ಡಾ. ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರ ಭಾವಚಿತ್ರಕ್ಕೆ ಪುಷ್ಪಾರ್ಚನೆ. ಈ ಸಂದರ್ಭದಲ್ಲಿ ಸಮಾರಂಭದ ಆಯೋಜಕರು ಉಪಸ್ಥಿತರಿದ್ದರು.



ಸಮಾರಂಭದ ಆಯೋಜಕರಿಂದ
ಪರಮಪೂಜ್ಯ ಶ್ರೀ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳವರಿಗೆ ಭಕ್ತಿ ಸಮರ್ಪಣೆ



ಶ್ರೀ ಹೆಚ್.ಎಂ.ಟಿ.ಪ್ರಕಾಶ್ ಅವರ ಕುಟುಂಬದವರೊಡನೆ
ಪರಮಪೂಜ್ಯ ಶ್ರೀ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು



ಭಕ್ತರ ಮನೆಯಲ್ಲಿ
ಪರಮಪೂಜ್ಯ ಶ್ರೀ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು



ಭಕ್ತರ ಮನೆಯಲ್ಲಿ ಪರಮಪೂಜ್ಯ ಶ್ರೀ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳವರಿಂದ ಶಿವಪೂಜೆ



ಅಮೇರಿಕಾದ ಡುಬ್ಲಿನ್‌ಲ್ಲಿ ಶ್ರೀ ಗುರುಪ್ರಸಾದ್ ಈಶ್ವರಯ್ಯ ಮತ್ತು ಶ್ರೀಮತಿ ಬಿ.ಟಿ.ರಂಜನಿ ಅವರ ನಿವಾಸದಲ್ಲಿ ಪರಮಪೂಜ್ಯ ಶ್ರೀ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳವರು



ಅಮೇರಿಕಾದ ಪ್ರಕೃತಿ ಸೌಂದರ್ಯದ ಮಡಿಲಲ್ಲಿ
ಪರಮಪೂಜ್ಯ ಶ್ರೀ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳವರು





ಭಕ್ತರ ನಿವಾಸದಲ್ಲಿ ಪರಮಪೂಜ್ಯ ಶ್ರೀ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳವರು

## ಕ್ಷೇತ್ರವಾರ್ತೆ

# ಶ್ರೀಮಠದಲ್ಲಿ ೨೦೨೫-೨೬ನೇ ಸಾಲಿನ ಮಕ್ಕಳ ದಾಖಲಾತಿ – ಒಂದು ವಿಹಂಗಮ ನೋಟ

ಪ್ರತಿವರ್ಷ ಮೇ ತಿಂಗಳು ಬಂತೆಂದರೆ ಮಠದಲ್ಲಿ ಜಾತ್ರೆಯ ವಾತಾವರಣ. ಬೀದರ್, ಗುಲ್ಬರ್ಗಾ, ಬಳ್ಳಾರಿ, ರಾಯಚೂರು, ಬೆಳಗಾವಿ, ಹಾಸನ, ಚಿಕ್ಕಮಗಳೂರು, ಮಂಡ್ಯ, ಕೊಡಗು, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಿಂದ ಮಕ್ಕಳೊಂದಿಗೆ ಪೋಷಕರು, ಟ್ರಂಕ್ ಸಮೇತ ಮಠಕ್ಕೆ ಬರುತ್ತಾರೆ. ಮಠದ ಆವರಣ ಮಕ್ಕಳು ಹಾಗೂ ಪೋಷಕರೊಂದಿಗೆ ತುಂಬಿರುತ್ತದೆ. ಇದೊಂದು ಮರೆಯಲಾಗದ ಅಪೂರ್ವ ದೃಶ್ಯ. ಪರಮಪೂಜ್ಯ ಡಾ. ಶ್ರೀ ಶ್ರೀ ಶಿವಕುಮಾರ ಮಹಾಶಿವಯೋಗಿಗಳವರು ಶಿಕ್ಷಣಕ್ಕೆ ಹೆಚ್ಚು ಮಹತ್ವ ಕೊಡುತ್ತಿದ್ದರು. ಪ್ರವೇಶ ಬಯಸಿ ಬರುವ ಯಾವ ಮಕ್ಕಳಿಗೂ ಪ್ರವೇಶವಿಲ್ಲವೆಂದು ಹಿಂದಕ್ಕೆ ಕಳುಹಿಸುತ್ತಿರಲಿಲ್ಲ. ಎಲ್ಲಾ ಜಾತಿ, ವರ್ಗದವರಿಗೂ ಅವಕಾಶ ನೀಡುತ್ತಿದ್ದರು. ಶ್ರೀ ಸಿದ್ಧಗಂಗಾ ಮಠವೆಂದರೆ ಒಂದು ಪುಟ್ಟ ಭಾರತವಿದ್ದಂತೆ. ಪರಮಪೂಜ್ಯ ಡಾ. ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರು ತಮ್ಮ ೮೯ ವರ್ಷಗಳ ಸುದೀರ್ಘ ಸೇವಾವಧಿಯಲ್ಲಿ ಬಸವಣ್ಣನವರ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಂಡು 'ಇವನಾರವ ಇವನಾರವ ಎನ್ನದೆ ಇವ ನಮ್ಮವ ಇವ ನಮ್ಮವ' ಎಂಬ ವಚನದ ಆಶಯವನ್ನು ಇಲ್ಲಿ ಸಾಕಾರಗೊಳಿಸಿದ್ದರು. ಪರಮಪೂಜ್ಯ ಶ್ರೀಗಳವರು ಕೆಲಸದ ಒತ್ತಡದ ನಡುವೆಯೂ ಬಿಡುವು ಮಾಡಿಕೊಂಡು ಪ್ರತಿಯೊಬ್ಬ ವಿದ್ಯಾರ್ಥಿಯ ಅರ್ಜಿಯನ್ನು ಕೂಲಂಕಷವಾಗಿ ಪರಿಶೀಲಿಸಿ ದಾಖಲಾಗೆ ಅನುಮತಿ ನೀಡುತ್ತಿದ್ದರು. ಸ್ವಾಮೀಜಿಯವರು ವಿದ್ಯಾರ್ಥಿ ಪರೀಕ್ಷೆಯಲ್ಲಿ ತೆಗೆದುಕೊಂಡ ಅಂಕಗಳನ್ನು ನೋಡುತ್ತಿರಲಿಲ್ಲ, ಮಾನವೀಯತೆಯಿಂದ ನೋಡುತ್ತಿದ್ದರು. ಪೋಷಕರಿಗೂ ಅಷ್ಟೇ, ತಮ್ಮ ಮಕ್ಕಳನ್ನು ಮಾತೃಸ್ವರೂಪಿಯಾದ ಪೂಜ್ಯರ ಮಡಿಲಿಗೆ ಹಾಕಿದರೆ ತಮ್ಮ ಮಕ್ಕಳ ಭವಿಷ್ಯ ಬಂಗಾರವಾಗುತ್ತದೆ ಎಂಬ ನಂಬಿಕೆ, ವಿಶ್ವಾಸ. ಪೋಷಕರ ಭಾವನೆಗಳಿಗೆ, ನಂಬಿಕೆಗೆ ಕಿಂಚಿತ್ತು ಲೋಪವಾಗದಂತೆ, ಪ್ರತಿಯೊಂದು ಮಕ್ಕಳನ್ನು ಅಕ್ಕರೆಯಿಂದ, ಪ್ರೀತಿಯಿಂದ, ಮಾತೃ ವಾತ್ಸಲ್ಯದಿಂದ













ನೋಡಿಕೊಳ್ಳುತ್ತಿದ್ದರು. ಪೂಜ್ಯರ ಸೇವಾವಧಿಯಲ್ಲಿ ಲಕ್ಷಾಂತರ ಗ್ರಾಮೀಣ ಪ್ರದೇಶದ ಶಿಕ್ಷಣದಿಂದ ವಂಚಿತರಾಗುತ್ತಿದ್ದ ದೀನ ದಲಿತ ಬಡಮಕ್ಕಳಿಗೆ ಆಶ್ರಯ ನೀಡಿ ಪಠ್ಯಗಳ ಶಿಕ್ಷಣದ ಜೊತೆಗೆ ಮಾನವೀಯ ಮೌಲ್ಯಗಳನ್ನೊಂಡ ನೈತಿಕ ಶಿಕ್ಷಣವನ್ನು ನೀಡುತ್ತಿದ್ದರು. ಅವರೆಲ್ಲರೂ ಸ್ವಾವಲಂಬಿಗಳಾಗಿ, ಸ್ವಾಭಿಮಾನದಿಂದ ಕರ್ನಾಟಕವಲ್ಲದೆ, ಹೊರ ರಾಜ್ಯಗಳಲ್ಲಿ ಹಾಗೂ ದೇಶ ವಿದೇಶಗಳಲ್ಲಿ ಬದುಕನ್ನು ಕಟ್ಟಿಕೊಂಡು ನೆಮ್ಮದಿಯಿಂದ ಜೀವನ ನಡೆಸುತ್ತಿದ್ದಾರೆ. ಅವರ ಮನ-ಮನೆಗಳಲ್ಲಿ ಶ್ರೀ ಸಿದ್ಧಗಂಗಾ ಶಿವಕುಮಾರ ಜ್ಯೋತಿ ಪ್ರಜ್ವಲಿಸುತ್ತಿದೆ.

ಈಗ ಶಿಕ್ಷಣ ಪಡೆಯಲು ಸಾಕಷ್ಟು ಅವಕಾಶಗಳಿವೆ, ಸೌಲಭ್ಯಗಳಿವೆ. ಆದರೂ ಪೋಷಕರು ತಮ್ಮ ಮಕ್ಕಳನ್ನು ಶ್ರೀಮಠಕ್ಕೆ ಸೇರಿಸಲು ಬರುತ್ತಿರುವವರ ಸಂಖ್ಯೆ ಕಡಿಮೆಯಾಗುತ್ತಿಲ್ಲ. ಇದರ ಹಿಂದಿನ ಅವರ ಆಶಯ ಸ್ಪಷ್ಟವಾಗಿದೆ. ತಮ್ಮ ಮಕ್ಕಳನ್ನು ಮಠಕ್ಕೆ ಸೇರಿಸಿದರೆ ಮಕ್ಕಳು ಶಿಕ್ಷಣದ ಜೊತೆಗೆ ಒಳ್ಳೆಯ ಸಂಸ್ಕಾರವಂತರಾಗಿ ರೂಪುಗೊಳ್ಳುತ್ತಾರೆ ಎಂಬ















ಅವರ ಮನೋಭಿಲಾಷೆಯಿಂದ ತಮ್ಮ ಮಕ್ಕಳನ್ನು ಸೇರಿಸಲು ಬಯಸುತ್ತಾರೆ. ತುಂಬಾ ವರ್ಷಗಳ ಹಿಂದೆ ಶ್ರೀಮಠ ತುಂಬಾ ಕಷ್ಟದಲ್ಲಿತ್ತು. ವರಮಾನವಿರಲಿಲ್ಲ. ಪರಮಪೂಜ್ಯ ಡಾ. ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರು ಜೋಳಿಗೆ ಹಿಡಿದು ಹಳ್ಳಿ ಹಳ್ಳಿಗಳಿಗೆ ಹೋಗಿ ಭಿಕ್ಷೆ ಬೇಡಿ, ಭಕ್ತರು ಪ್ರೀತಿಯಿಂದ, ಭಕ್ತಿಯಿಂದ ಕೊಟ್ಟ ದವಸ ಧಾನ್ಯಗಳನ್ನು ತಂದು ದಾಸೋಹ ವ್ಯವಸ್ಥೆ ಮಾಡುತ್ತಿದ್ದರು. ಮಠದ ಜಮೀನಿಂದ ಬರುವ ಆದಾಯ ಎರಡು ಮೂರು ತಿಂಗಳಿಗೆ ಮಾತ್ರ ಸಾಕಾಗುತ್ತಿತ್ತು. ಆದರೂ ಪೂಜ್ಯರು ತಮ್ಮ ಇತಿಮಿತಿಯಲ್ಲಿ ಮಕ್ಕಳಿಗೆ ತೊಂದರೆಯಾಗದಂತೆ ನೋಡಿಕೊಳ್ಳುತ್ತಿದ್ದರು.

ಪ್ರಸ್ತುತ ಪರಮಪೂಜ್ಯ ಡಾ. ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರ ಕರಮಕಮಲ ಸಂಜಾತರಾದ ಪರಮಪೂಜ್ಯ ಶ್ರೀ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳವರು ತಮ್ಮ ಗುರುಗಳು ಹಾಕಿಕೊಟ್ಟ ಮಾರ್ಗದಲ್ಲಿಯೇ ಮುಂದುವರಿಯುತ್ತಿದ್ದಾರೆ.

ಬಳ್ಳಾರಿ, ರಾಯಚೂರು, ಸಿಂಧನೂರು ಮುಂತಾದ ಭಾಗಗಳಿಂದ ಶ್ರೀಮಠದ ಹಿರಿಯ ವಿದ್ಯಾರ್ಥಿಗಳು, ಭಕ್ತರು ಅಕ್ಕಿ, ಸಕ್ಕರೆ, ಬೆಲ್ಲ, ಬೇಳೆ, ಮೆಣಸಿನಕಾಯಿ ಮುಂತಾದ ಪದಾರ್ಥಗಳನ್ನು ಲಾರಿಗಳ ತುಂಬಾ ತಂದು ಅರ್ಪಿಸಿ ಧನ್ಯತೆಯನ್ನು ಪಡೆಯುತ್ತಿದ್ದಾರೆ. ಶ್ರೀಕ್ಷೇತ್ರದ ಆರಾಧ್ಯದೈವ ಶ್ರೀ ಸಿದ್ಧಲಿಂಗೇಶ್ವರರು, ಶ್ರೀ ಸಿದ್ಧಗಂಗಾ ಗುರುಪರಂಪರೆಯ ಆಶೀರ್ವಾದದಿಂದ ಯಾವುದೇ ಸಮಸ್ಯೆಗಳಿಲ್ಲದೆ ಶ್ರೀಮಠ ಸೇವಾ ಕಾರ್ಯದಲ್ಲಿ ಮುನ್ನಡೆಯುತ್ತಿದೆ. ಪರಮಪೂಜ್ಯ ಡಾ. ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರಂತೆ ಪರಮಪೂಜ್ಯ ಶ್ರೀ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳವರು ಮಾತೃ ಹೃದಯಿಗಳು, ಜೀವ ದಯಾಪರರು. ಅವರ ಮಾರ್ಗದರ್ಶನದಂತೆ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಹಾಗೂ ದಾಸೋಹ ನಡೆಯುತ್ತಿದೆ. ಭಕ್ತರು ತಿಂಗಳಿಗೆ ೨-೩ ಬಾರಿಯಾದರೂ ಬಂದು ದಿನಕ್ಕೆ ತಗಲುವ ವೆಚ್ಚವನ್ನು ಭರಿಸಿ ಮಕ್ಕಳಿಗೆ ಸಿಹಿ ಊಟ ಮಾಡಿಸಿ, ಅವರು ತೃಪ್ತಿಯಿಂದ ಊಟ ಮಾಡುವುದನ್ನು ಕಂಡು ಸಂತೋಷಪಡುತ್ತಿದ್ದಾರೆ. "ಕೊಡುವವನು ಶ್ರೀ ಸಿದ್ಧಲಿಂಗೇಶ್ವರ ಇರುವಾಗ ನಮಗೇಕೆ ಚಿಂತೆ' ಎಂಬ ಪರಮಪೂಜ್ಯ ಡಾ. ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರ ನಂಬಿಕೆ ಇಲ್ಲಿ ಸಾಕಾರಗೊಳ್ಳುತ್ತಿದೆ.





ಲೇಖನ

# ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವವರು

– ಎಚ್.ಎಸ್.ಸಿದ್ಧಗಂಗಪ್ಪ *

'ಇಲ್ಲಿ' ಎಂದರೆ ಮರ್ತ್ಯಲೋಕ, 'ಅಲ್ಲಿ' ಎಂದರೆ ನಮಗೆ ಕಾಣದ, ಕಲ್ಪನೆಯ ದೇವಲೋಕ. ಬಸವಣ್ಣನವರ ದೃಷ್ಟಿಯಲ್ಲಿ ಇಲ್ಲಿ ಎಲ್ಲರಿಂದಲೂ ವಂದಿತರಾಗುವವ ಕೆಲಸವನ್ನು ಮಾಡಿದರೆ, ದೇವಲೋಕದಲ್ಲಿಯೂ ಸಲ್ಲುತ್ತೇವೆ ಎಂಬ ಆಶಯ. ನಮ್ಮ ಬದುಕೆಲ್ಲ ಸಮಾಜದ ನೂರಾರು ಸಮಸ್ಯೆಗಳ ಸುಳಿಯಲ್ಲಿ ಸಿಲುಕಿಕೊಂಡಿರುತ್ತದೆ. ಹಾಗಾಗಿ ನಾವು ಮೊದಲು ನಮ್ಮ ಬದುಕನ್ನು ಶುದ್ಧೀಕರಿಸಿಕೊಳ್ಳಬೇಕು. ಅಂದರೆ ಬದುಕನ್ನು ನಾಣ್ಯಗೊಳಿಸಬೇಕು ಎಂಬುದು ಶರಣರ ಆಶಯ. ಈ ಲೋಕವೇ ಕರ್ತಾರನ ಕಮ್ಮಟ. ಅದರಲ್ಲಿ ನಾನಾ ಬಗೆಯಲ್ಲಿ ಶುದ್ಧಿ ಪಡೆದ ಲೋಹ ನಾಣ್ಯವಾಗುತ್ತದೆ. ಅನಂತರ ಅದು ಚಲಾವಣೆಗೆ ಮಾನ್ಯವಾಗುತ್ತದೆ. ನಾಣ್ಯ ಎಂಬ ಮಾತಿಗೆ ಹಲವು ರೀತಿಯ ಅರ್ಥಗಳಿವೆ. ಇವನ ಬದುಕು ನಾಣ್ಯವಾಗಿದೆಯೇ? ಪ್ರಸಾರಕ್ಕೆ ಯೋಗ್ಯವಾಗಿದೆಯೇ? ಜನ ಇವನ ಬಗ್ಗೆ ವಿಶ್ವಾಸ, ನಂಬಿಕೆ ಹೊಂದಿದ್ದಾರೆಯೋ? ಸಮಾಜಕ್ಕೆ ಈತ ಉಪಯೋಗಿಯಾಗಿದ್ದಾನೆಯೇ! ಎಂದು ಪರೀಕ್ಷಿಸುತ್ತಾರೆ. ಹಾಗೆ ತನ್ನ ನಡೆ-ನುಡಿಯಿಂದ ಜನರಿಂದ 'ಸೈ' ಎನಿಸಿಕೊಂಡ ವ್ಯಕ್ತಿ ದೇವಲೋಕದಲ್ಲಿ ಅಂದರೆ ಶಿವಲೋಕದಲ್ಲಿಯೂ ಸಲ್ಲುತ್ತಾನೆ. ಅಂದರೆ ಬಸವಣ್ಣನವರು ಮನುಷ್ಯನ ಶೀಲ, ಭಕ್ತಿ, ಸಹನೆ, ವಾತ್ಸಲ್ಯ, ಕರುಣೆ, ಅಹಿಂಸಾ ಗುಣ ಮೊದಲಾದ ಆದರ್ಶ ಗುಣಗಳಿಂದ 'ಯೋಗ್ಯ' ವ್ಯಕ್ತಿಯೆಂದು ಅಂಗೀಕರಿಸುತ್ತಾರೆ. ಕನ್ನಡ ಕಾವ್ಯ ಪರಂಪರೆಗೂ ಈ ಭಾವನೆ ಅಂಗೀಕೃತವಾದ ಒಂದು ನಿಲುವೇ ಆಗಿದೆ. ಕವಿರಾಜ ಮಾರ್ಗಕಾರ 'ಪಾಲಿನೆಲೆ ನೆಗಳೆ ಬಾಳ್ವುದು ಬಾಳೆಂಬುದು ನಿಕ್ಕುವಂ' ಎಂದು ಹೇಳಿದ್ದಾನೆ. ನಾವು ಮಾಡಬೇಕಾದ ಕಾರ್ಯವನ್ನು ಕ್ರಮಬದ್ಧವಾಗಿ, ಅದು ತಪ್ಪದಂತೆ ನಡೆಯುವುದೇ ಬದುಕಿನ ಅರ್ಥ ಎಂಬುದು ಬಸವಾದಿ ಶರಣರ ಅಭಿಪ್ರಾಯವಾಗಿತ್ತು.

ಶರಣ ಗಣೇಶ ಮಸಣಯ್ಯ ಹೇಳಿರುವಂತೆ –

**ಒಳಗೆ ಶೋಧಿಸಿ, ಹೊರಗೆ ಧವಳಿಸಿ**
**ಗುಡಿ ತೋರಣವ ಕಟ್ಟಿದೆನಯ್ಯ**
**ಅಂತರಂಗದ ಜ್ಯೋತಿಯನಿಮರುಗೊಂಬೆನೆನ್ನ**
**ಮಹಾಲಿಂಗ ಗಣೇಶ್ವರನ !**

ಅವನ ದೃಷ್ಟಿಯಲ್ಲಿ ಒಳಗನ್ನು ಶೋಧಿಸಬೇಕಾದರೆ ನಮ್ಮ ಹೊರಗನ್ನೂ ಅಂದರೆ ನಮ್ಮ ಬಾಹ್ಯಾಚರಣೆಯನ್ನು ನಾವು ಧವಳಿಸಬೇಕು. ಅಂದರೆ ನಿರ್ಮಲವಾಗಿ ಬೆಳಗುವಂತೆ ಮಾಡಬೇಕು. ಹೀಗೆ ಒಳ್ಳೆಯ ಭಾವದಿಂದ ಗುಡಿ ತೋರಣವನ್ನು ಕಟ್ಟಿದರೆ ಅಂತರಂಗದ ಜ್ಯೋತಿಯನ್ನು ಅಂದರೆ ನಾವು ನಂಬಿದ, ಆರಾಧಿಸುವ ದೈವವನ್ನು ಬರಮಾಡಿಕೊಳ್ಳುವುದಕ್ಕೆ ನಮಗೆ ಅರ್ಹತೆ ಬರುತ್ತದೆ.

ನುಲಿಯ ಚಂದಯ್ಯ ತನ್ನ ಕಾಯಕದ ಪರಿಭಾಷೆಯಲ್ಲಿಯೇ ಲೌಕಿಕ ನಡತೆಯನ್ನು ಒಳ್ಳೆಯ ರೀತಿಯಲ್ಲಿ ಅಳವಡಿಸಿಕೊಳ್ಳಬೇಕಾದ ಕ್ರಮವನ್ನು ವಚನದ ಮೂಲಕ ಅಭಿವ್ಯಕ್ತಪಡಿಸಿದ್ದಾನೆ.

* ೧೬೧೭, ಮಾತೃಶ್ರೀ, ೮ನೇ ಬ್ಲಾಕ್, ಸ್ಫೂರ್ತಿಧಾಮದ ಎದುರು, ಸರ್ ಎಂ.ವಿ. ಮುಂದುವರೆದ ಬಡಾವಣೆ,
ಮುದ್ದಿನಪಾಳ್ಯ ಮುಖ್ಯರಸ್ತೆ, ಬೆಂಗಳೂರು-೯೧. ಮೊ: ೯೮೪೫೫ ೬೫೮೭೧

**ಸಂಸಾರವೆಂಬ ಸಾಗರದ ಮಧ್ಯದೊಳಗೆ**
**ಬೆಳೆದ ಹೊಡಕೆಯ ಹುಲ್ಲು ಕೊಯ್ದು**
**ಮತ್ತವೂ ಕಣ್ಣ ತೆಗೆದು, ಕಣ್ಣಿಯ ಮಾಡಿ**
**ಪರವೆಂಬ ಉಭಯದ ಗಂಟನಿಕ್ಕಿ ತುದಿಯಲ್ಲಿ**
**ಮಾಟಕೂಟವೆಂಬ ಮನದ ಕುಣಿಕೆಯಲ್ಲಿ**
**ಕಾಯಕವಾಗಿತ್ತು !**

ನುಲಿಯ ಚೆಂದಯ್ಯನು ಹೇಳಿರುವಂತೆ – ಸಾಗರದಂತೆ ವಿಶಾಲ ವ್ಯಾಪ್ತಿಯುಳ್ಳ ಈ ಭೂಮಿಯಲ್ಲಿ ಪ್ರಕೃತಿ ನೀಡುವ ಹೊಡಕೆಯ ಹುಲ್ಲನ್ನು ಅಂದರೆ ಮುಂಜಿ ಹುಲ್ಲನ್ನು ಕೊಯ್ದು ಅದರ ಕಣ್ಣಿನ ಅಂದರೆ ತೆನೆಯ ಭಾಗವನ್ನು ಕಿತ್ತು ಹಾಕಿ ನೆನಸಿ ಹಗ್ಗವಾಗಿ ಮಾಡಿ ಗಂಟು ಹಾಕಬೇಕು ಎನ್ನುತ್ತಾನೆ. ಅಂದರೆ ನಮ್ಮ ಅಂತರಂಗವನ್ನು ಹೀಗೆ ಹೊಸೆದು ಹಗ್ಗವನ್ನಾಗಿ ಮಾಡಿ ಇಹ–ಪರ ಎರಡಕ್ಕೂ ಗಂಟು ಹಾಕುವ, ಅಂದರೆ ಸಂಬಂಧ ಕಲ್ಪಿಸಬೇಕೆಂಬುದು ನುಲಿಯ ಚಂದಯ್ಯನ ಆಶಯ. ಈ ವಚನದಲ್ಲಿ ಮನುಷ್ಯನ ಇಹಲೋಕದಲ್ಲಿನ ಸಾಧನಗಳನ್ನು ದುಡಿಸಿಕೊಂಡು ಮುಂದಿನ ಹೆಜ್ಜೆಗಳನ್ನಿಡಬೇಕೆಂಬ ಎಚ್ಚರಿಕೆಯಿದೆ. ಜೀವನ ವಿರೋಧಿಯಲ್ಲದ ಕಾಯಕ ಶ್ರದ್ಧೆ ಮೆಚ್ಚುವಂಥದ್ದಾಗಿದೆ. ಆದರೆ ಅಲ್ಲಮನ ಅಭಿವ್ಯಕ್ತಿಯೇ ಬೇರೆ, ಜೀವಂತಿಕೆಯ ಬಗ್ಗೆ ಸ್ಪಂದಿಸದೆ 'ಪರ'ದ ಬಗ್ಗೆ ಮಾತನಾಡುವವರನ್ನು ಕಟುವಾಗಿಯೇ ಛೇಡಿಸಿದ್ದಾನೆ.

**"ಕೊಟ್ಟ ಕುದುರೆಯನೇರಲರಿಯದೆ**
**ಮತ್ತೊಂದ ಬಯಸುವವರು ಧೀರರೂ ಅಲ್ಲ,**
**ವೀರರೂ ಅಲ್ಲ."**

ಇಲ್ಲಿ ನಾವು ಮುಖ್ಯವಾಗಿ ಗಮನಿಸಬೇಕಾಗಿದ್ದು 'ಕೊಟ್ಟ ಕದುರೆ'ಯೇ ಬಸವಣ್ಣನವರು ಹೇಳುವ ಕಮ್ಮಟ. ಇಲ್ಲಿ ಸದಾ ಕ್ರಯಾಶೀಲರಾಗಿರಬೇಕು. ದಾಸೋಹದ ಸಂಗಣ್ಣ ಹೇಳುವಂತೆ 'ನಾ ನೀ ಎಂಬನ್ನಕ್ಕ ಕ್ರಿಯೆ ಮಾಡುತ್ತಿರಬೇಕು.' ಸಂಗಣ್ಣನೇ ಇನ್ನೊಂದು ಕಡೆ ಈ ಕ್ರಿಯೆಯು ಬಗೆಗೆ ಹೀಗೆ ಹೇಳಿದ್ದಾನೆ.

**ದೃಕ್ಕು ಸಕಲ ವನವಗಯಿಸುವನ್ನಕ್ಕ**
**ಶ್ರೋತ್ರ ಶಬ್ದವ ಭೇದಿಸುವನ್ನಕ್ಕ?**
**ಕ್ರೀ ಶೂನ್ಯವೆನಲೇತಕ್ಕೆ?**

ಎಂಬ ಮಾತು ಗಮನಾರ್ಹವಾದುದು.

ಈ ಲೋಕವನ್ನು 'ಕರ್ತಾರನ ಕಮ್ಮಟ' ಎಂದು ಬಸವಣ್ಣನವರು ಹೇಳಿದರೆ, ಅಲ್ಲಮಪ್ರಭು ಇದನ್ನು 'ರುದ್ರನಛತ್ರ' ಎಂಬ ಇನ್ನೊಂದು ಪ್ರತಿಮೆಯಲ್ಲಿ ವಿವರಿಸಿದ್ದಾನೆ.

**ಕೆರೆಯನುಂಡು ತೊರೆಯ ಹೊಗಳುವರು**
**ಅತ್ಯುತ್ಕಟದ ಪರಬ್ರಹ್ಮವನೆ ನುಡಿವರು**
**ಸಹಜ ಪಿನಾಕಿಯ ಬಲೆಯಲ್ಲಿ ಸಿಲುಕಿ**
**ಭವದ ಹರಿಯಲರಿಯರು**
**ರುದ್ರನ ಛತ್ರವನುಂಡು ಇಲ್ಲವೆಯ ನುಡಿವ**
**ಹಿರಿಯರಿಗೆ ಮಹದ ಮಾತೇಕೋ ಗುಹೇಶ್ವರಾ?**

ನಾವಿರುವುದು ಈ ಮರ್ತ್ಯದಲ್ಲಿ. ಇಲ್ಲಿನ ಭವವನ್ನು ಹರಿದುಕೊಂಡು ಹೋಗುವ ಶಕ್ತಿ ನಮಗಿಲ್ಲ. ಅತಿ ಉತ್ಕಟವಾದ ಪರಬ್ರಹ್ಮನ ವಿಚಾರ ವಾಸ್ತವವಾಗಿ ನಮಗೆ ಅರಿವಿಲ್ಲದಿದ್ದರೂ ಈ ಲೋಕವನ್ನು ಧಿಕ್ಕರಿಸಿ ಪರಬ್ರಹ್ಮದ ಬಗ್ಗೆ ಮಾತನಾಡುವ ಚಪಲ ನಮ್ಮದು. ಅಂದರೆ ಕೆರೆಯನ್ನು ಉಂಡು, ತೊರೆಯನ್ನು ಹೊಗಳುವ ವಕ್ರ ಬುದ್ಧಿಯವರು ನಾವು ಎಂದು ಅಲ್ಲಮಪ್ರಭು ಹಂಗಿಸುತ್ತಾನೆ. ಹೀಗೆ ಮಾಡುವುದು 'ಹೊಟ್ಟೆಯ ಮೇಲೆ ಕಟ್ಟೋಗರದ ಮೊಟ್ಟೆಯ ಕಟ್ಟಿದಂತೆ' ಎಂದು ಹಾಸ್ಯ ಮಾಡುತ್ತಾನೆ.

ಘಟ್ಟಿವಾಳಯ್ಯ ತನ್ನ ವಚನವೊಂದರಲ್ಲಿ –

**ಮೇಲನರಿತಲ್ಲಿ ಕೀಳಿಲ್ಲ**
**ಕೀಳನರಿತಲ್ಲಿ ಮೇಲಿಲ್ಲ**
**ಮೇಲು ಕೀಳೆಂಬ ಬೋಳು ಮಾಡಿ**
**ಧೂಳಾಗಬಲ್ಲದೆ ಹೇಳಿರಲ್ಲ, ಕೇಳಿರಲ್ಲ.**

ಎಂದು ಹೇಳಿದ್ದಾನೆ. ಸಮವೃತ್ತಿ ಇಲ್ಲದ ವ್ಯಕ್ತಿ ದ್ವಂದ್ವ ಭಾವವನ್ನೇ ಪೋಷಿಸಿಕೊಂಡು ಬಂದು ಕೊನೆಗೆ ಹೇಗೆ ಧೂಳಾಗುತ್ತಾನೆ ಎಂಬುದನ್ನು ಅರ್ಥಪೂರ್ಣವಾಗಿ ಈ ವಚನ ವಿವರಿಸುತ್ತದೆ. ಬಸವಣ್ಣನವರು ಹೇಳಿರುವಂತೆ 'ಇಲ್ಲಿ ಸಲ್ಲುವವರು' ಎಂದರೆ ಮೇಲು–ಕೀಳುಗಳು ದ್ವಂದ್ವವನ್ನು ಹರಿದು ಸರ್ವಜೀವನ ದಯಾಭಾವವನ್ನು ಉಳ್ಳವರು, ಕರುಳ ಕೇತಯ್ಯ ಎಂಬ ವಚನಕಾರ ಇಲ್ಲಿ ಸಲ್ಲುವಂತೆ ನಡೆದುಕೊಳ್ಳಬೇಕಾದವರಲ್ಲಿ ಇರಬೇಕಾದ ನಾಲ್ಕು ಮುಖ್ಯ 'ಶೀಲ'ಗಳನ್ನು ಹೇಳುತ್ತಾನೆ.







**ದ್ರವ್ಯ ಶೀಲ, ಧನ ಶೀಲ**
**ತನು ಶೀಲ, ಆತ್ಮ ಶೀಲ**
**ಬಾಯಕ್ಕಿಯ ಬೇಡುವವರೆಲ್ಲರು**
**ಬಡಪಾಯಿವಂತರ ನೋವ ಬಲ್ಲರೆ ?**
**ಹಿಡಿವ ವಿಹಂಗೆ ಹಸುವಿನ ನೋವ ಬಲ್ಲುದೆ?**
**ಇಂತೀ ದೆಸೆಯ ಕಂಡು ನಾನಂಜಿದೆ.**

ಬಾಯಕ್ಕೆ ಎಂದರೆ ರುಚಿರುಚಿಯಾದ ಭಕ್ಷ್ಯ ಭೋಜ್ಯಾದಿಗಳು. ಇವುಗಳನ್ನು ಹೇಗಾದರೂ ಪಡೆಯ ಬೇಕು ಎಂದು ಬಯಸುವ ದ್ರವ್ಯಲಂಪಟನು ಮಹಾ ಸ್ವಾರ್ಥಿಯಾಗುವುದರಿಂದ ಬಡಜನಗಳ ಸಂಕಟ, ನೋವು ಅವನಿಗೆ ತಟ್ಟುವುದೇ ಇಲ್ಲ. ಇದನ್ನು ಹದ್ದಿನ ಉದಾಹರಣೆಯಿಂದ ವಚನಕಾರ. ಸ್ಪಷ್ಟಪಡಿಸುತ್ತಾನೆ. ವಿಹಂಗ ಎಂದರೆ ಹದ್ದು, ಅದು ಅನಾಮತ್ತಾಗಿ ಮೇಲಿನಿಂದ ಎರಗಿ ತನ್ನ ಆಹಾರದ ಸಂಭ್ರಮದಲ್ಲಿ ಬಲಿಯಾದ ಪ್ರಾಣಿಯ ಸಂಕಟವನ್ನು ಆ ಹದ್ದು ಅರ್ಥ ಮಾಡಿಕೊಳ್ಳುವುದಿಲ್ಲ. ಲೋಕದ ಎಲ್ಲಾ ವಸ್ತುಗಳೂ ತನಗೆ ಮಾತ್ರ ದ್ರವ್ಯ ಎಂದುಕೊಳ್ಳುವ ವ್ಯಕ್ತಿಗೆ ದ್ರವ್ಯಶೀಲ ಇರುವುದಿಲ್ಲ. ಪ್ರಕೃತಿ ನೀಡುವ ವಸ್ತುಗಳಿಗೆ ಎಲ್ಲರೂ ಸಮಾನ ಹಕ್ಕುದಾರರು ಎಂದು ಭಾವಿಸುವವನೇ ದ್ರವ್ಯಶೀಲ.

ಜೇಡರದಾಸಿಮಯ್ಯ ಈ ಮತ್ಸರದ ಬದುಕನ್ನು ಚೆನ್ನಾಗಿಟ್ಟುಕೊಂಡು ಅದರಲ್ಲಿಯೇ ಸೊಗಸಿದೆ ಎಂದು ಭಾವಿಸಬೇಕು ಎಂದು ತನ್ನ ವಚನದಲ್ಲಿ ಅಭಿವ್ಯಕ್ತಿ ಪಡಿಸಿದ್ದಾನೆ.

**ಘಟವನೊಡೆದು ಬಯಲ ನೋಡಲದೇಕೆ?**
**ಘಟದೊಳಗಿಪ್ಪುದೆ ಬಯಲೆಂದರಿದರೆ ಸಾಲದೆ?**
**ಘಟವ ಹರಿದು ತಂತುವ ನೋಡಲೇಕೆ?**
**ಆ ಘಟವೆ ತಂತುವೆಂದರಿದರೆ ಸಾಲದೆ?**
**ಕಟಕವ ಮುರಿದು ಕಾಂಚನವ ನೋಡಲೇಕೆ?**
**ಆ ಕಟಕವೆ ಕಾಂಚನವೆಂದರಿದರೆ ಸಾಲದೆ?**
**ತನ್ನವಳಿದು ಘನವ ನೋಡಲೇಕೆ?**
**ತಾನೆ ಘನವವೆಂದರಿದರೆ ಸಾಲದೆ?**
**ಹೇಳಾ ರಾಮನಾಥ!**

ಈ ಬದುಕೇ ಇಹ-ಪರಗಳ ಸತ್ವದಿಂದ ಕೂಡಿದೆ. ಅದನ್ನು ಅರ್ಥ ಮಾಡಿಕೊಳ್ಳುವುದು ರೂಪ ಬೇಧದಿಂದ ನಮಗೆ ಕಷ್ಟವಾಗಿದೆ ಎಂಬುದು ದಾಸಿಮಯ್ಯನ ಅಭಿಪ್ರಾಯ. ಚಿನ್ನದ ಬಳೆಯಲ್ಲಿ ಚಿನ್ನ ಇರುತ್ತದೆ. ಹಾಗೆಯೇ ಈ ದೇಹದಲ್ಲಿಯೇ (ಘಟ) ಮೋಕ್ಷಸುಖವೂ ಇದೆ. ಇಹ-ಪರಗಳೆರಡೂ ಅಭಿನ್ನಗಳು, ಅನು-ಭಾವ ಸಂಬಂಧಗಳು ಎಂದು ದಾಸಿಮಯ್ಯ ಸ್ಪಷ್ಟವಾಗಿ ಹೇಳುತ್ತಾನೆ. ಈ ಅದ್ವೈತವನ್ನು ಕಾಣುವ ಒಳನೋಟ ಸಮ ಕಾಣಲು ಸಾಧ್ಯವಾಗದೆ ಇರುವುದರಿಂದ ನಮ್ಮ ಬಹಿರ್ ದೃಷ್ಟಿಗೆ ಎರಡೂ ಬೇರೆ ಬೇರೆ ಎಂಬ ಭಾವನೆ ಬೆಳೆದು ಬಂದಿದೆ. ಅನೇಕ ವಚನಕಾರರು ಈ ಭ್ರಾಂತಿಯನ್ನು ಕಳೆಯಲು ಪ್ರಯತ್ನಿಸಿದ್ದಾರೆ.

ಸಿಮ್ಮಲಿಗೆಯ ಚನ್ನರಾಮ ಅಂಕಿತವನ್ನಿಟ್ಟು ಕೊಂಡಿರುವ ಚಂದಿಮರಸ ವಚನದ ಮೂಲಕ ಹೀಗೆ ಅಭಿವ್ಯಕ್ತಪಡಿಸಿದ್ದಾನೆ.

**ಮಣ್ಣಕಳೆದು ಮಡಕೆಯಿಲ್ಲ**
**ಹೊನ್ನ ಕಳೆದು ತೊಡಿಗೆಯಿಲ್ಲ**
**ತನ್ನ ಕಳೆದು ಜಗವಿಲ್ಲ; ತಾನೇ ತನ್ನಿಂದನ್ಯವಿಲ್ಲ.**

ಮಡಕೆ ಮಾಡಲು ಮೂಲ ಸಾಧನವಾದದ್ದು ಮಾತೃಕೆ (ಮಣ್ಣು). ಒಡವೆಗೆ ಮೂಲವಾದದ್ದು ಚಿನ್ನ, ಹಾಗೆಯೇ ಮೂಲ ದ್ರವ್ಯವಾದ ಈ ಬದುಕು ಸತ್ವಯುತ ವಾಗಿದ್ದರೆ ಏನು ಬೇಕಾದರೂ ಪಡೆದುಕೊಳ್ಳಬಹುದು ಎಂಬುದು ಚಂದಿಮರಸನ ಅಭಿಪ್ರಾಯ ಈ ಇಹ-ಪರಗಳ ಸತ್ವವನ್ನು ರೂಢಿಸಿಕೊಳ್ಳುವ ಶಕ್ತಿ ನಮ್ಮಲ್ಲಿಯೇ ಇದೆ ಎಂದು ಚಂದಿಮರಸ ಒತ್ತಿ ಹೇಳಿದ್ದಾನೆ.

**ಕವಿ ಗಮಕಿ ವಾದಿ ವಾಗ್ಮಿಯೆಂಬವರ ಮಾತಿಂಗಿಲ್ಲ**
**ಶಾಸ್ತ್ರಿಕರ ಶಾಸ್ತ್ರಕ್ಕಿಲ್ಲ, ತಾರ್ಕಿಗಳ ತರ್ಕಕ್ಕಿಲ್ಲ**
**ಶಬ್ದಿಕರ ಶಬ್ದ ನೆರೆಯುವು ತೋರುವಡೆ**
**ವಿಷಯವಾಗಿರದು,**
**ಅರಿವೊಡೆ ಅತರ್ಕ್ಯ, ಅದು ನಿನ್ನಲ್ಲಿದೆ ಅದೆ**
**ಸಿಮ್ಮಲಿಗೆಯ ಚೆನ್ನರಾಮಾ !**

ಈ ಸುಖ, ಆನಂದ ಎಲ್ಲಿದೆ ಎಂದು ಹುಡುಕುವ ತಂಡವೊಂದಿದೆ. ಅವರೇ ಕವಿ, ಗಮಕಿ, ವಾಗ್ಮಿ, ಶಾಸ್ತ್ರಿಕ, ತರ್ಕಜ್ಞ ಮತ್ತು ಶಬ್ದಜ್ಞ, ಇವರು ವರ್ಣನೆಯಿಂದ, ಗೀತದಿಂದ, ವಾದ ವೈಭವದಿಂದ, ಸೊಗಸಾದ ಮಾತುಗಾರಿಕೆಯಿಂದ, ಶಾಸ್ತ್ರಜ್ಞಾನದಿಂದ, ತರ್ಕ

ಚಾಪಲ್ಯದಿಂದ ಮತ್ತು ಶಬ್ದ ಜಿಜ್ಞಾಸೆಯಿಂದ ಇದರ ಅರ್ಥ ಹುಡುಕಲು ಹೊರಡುತ್ತಾರೆ. ಆದರೆ ಇವರದೆಲ್ಲ ಭಾಗಶಃ ಪ್ರಯತ್ನವಾದುದರಿಂದ ಆ ಅರಿವು ಇವರುಗಳಿಗೆ ನಿಲುಕುವುದಿಲ್ಲ. ಏಕೆಂದರೆ ವಚನಕಾರ ಹೇಳಿರುವಂತೆ ಆ ಅರಿವು ನಮ್ಮಲ್ಲಿಯೇ ಇದೆ. ಆ ಅರಿವಿನ ಕಣ್ಣನ್ನು ತೆರೆಸುವುದು ಆತ್ಮಜ್ಞಾನದಿಂದ, ಸ್ವಪ್ರಯತ್ನದಿಂದ ಮಾತ್ರ ಸಾಧ್ಯ ಎನ್ನುವ ವಚನಕಾರ ನಾವು ಜ್ಞಾನಾರ್ಜನೆಗೆ ಆಶ್ರಯಿಸುವ ಪ್ರಾತಿನಿಧಿಕ ವಸ್ತುಗಳ ದೌರ್ಬಲ್ಯಗಳನ್ನು ಇಲ್ಲಿ ಪ್ರಾಸಂಗಿಕವಾಗಿ ಪರಿಚಯಿಸಿದ್ದಾನೆ.

ಗುಪ್ತ ಮಂಜಣ್ಣ ಹೇಳಿರುವಂತೆ –

**ಗೋವಿನ ಮರೆಯ ವಿಹಗನಂತಾಗಲಾಗದು**
**ತೋಹಿನ ಮರೆಯಲ್ಲಿದ್ದ ಶಬರನಂತಾಗಲಾಗದು**
**ಲಾಂಛನದ ಮರೆಯಲ್ಲಿದ್ದ ವೇಷಧಾರಿಯಂತಾಗಲಾಗದು**
**ಹೊರ ವೇಷಮಂ ತೊಟ್ಟು**
**ವ್ಯಾಪ್ತಿಯ ಮನುಜರಂತೆ ನಡೆದು**
**ಮತ್ತೆ ಅರಿವೇಕೆ ನಾರಾಯಣಪ್ರಿಯ ರಾಮನಾಥಾ.**

ದ್ರವ್ಯಶೀಲ ಇಲ್ಲದ ಸ್ವಾರ್ಥಿಗಳ ಭಾವನೆಗಳ ಮೆರವಣಿಗೆ ಈ ವಚನದಲ್ಲಿ ಗೋವಿನ ಮರೆಯ ವಿಹಗಗಳು ದನಕರುಗಳಂತಹ ಸಾಧು ಪ್ರಾಣಿಗಳ ಸುತ್ತ ಸುಳಿದು ತಮ್ಮ ಬೇಟೆಯನ್ನು ಹುಡುಕುತ್ತಿರುತ್ತವೆ. ಶಬರ (ಬೇಡ)ನೂ ಹಾಗೆಯೇ ತೋಪಿನಲ್ಲಿ ಮರಗಿಡಗಳ ಮರೆಯಲ್ಲಿ ಅಡಗಿದ್ದು, ಅಲ್ಲಿ ಸುಳಿಯುವ ಪ್ರಾಣಿ ಪಕ್ಷಿಗಳನ್ನು ಉಪಾಯವಾಗಿ ಹಿಡಿಯುತ್ತಾನೆ. ಜಂಗಮ ವೇಷ ಧರಿಸಿಯೋ, ಸಂಭಾವಿತನಂತೆನಿಸಿಯೋ 'ವ್ಯಾಪ್ತಿಯ' ಅಂದರೆ ಮಹತ್ವದ ವ್ಯಕ್ತಿಗಳಂತೆ ಸೋಗು ಹಾಕಿ ಇವರು ಮುಗ್ಧರ ಶೋಷಣೆ ಮಾಡುತ್ತಾರೆ. ಯಾವುದೇ ಜೀವದ್ರವ್ಯವನ್ನು ನೋಯಿಸಬಾರದು ಎಂಬ ದ್ರವ್ಯಶೀಲ ಇವರಲ್ಲಿ ಕಂಡುಬರುವುದಿಲ್ಲ.

**ಬಿತ್ತಿದ ಬೆಲೆ ಕಟ್ಟಿದ ಕೆರೆ**
**ಸಲಹಿದ ಶರೀರ ನಟ್ಟವೃಕ್ಷ**
**ತನಗಲ್ಲದೆ ಆವಕ್ಕೊಡಲುಂಟೆ?**
**ತಾ ಮಾಡುವ ಭಕ್ತಿ ತನಗಲ್ಲದೆ**
**ಬೇರೊಂದು ಗುಣವನರಸಲಿಲ್ಲ**
**ಆ ಪರಿಯ ನಿನ್ನ ನೀ ತಿಳಿ.**

ವಚನಕಾರ ಕೋಲಶಾಂತಯ್ಯ ಆತ್ಮಶೀಲದ ಸ್ವರೂಪವನ್ನು ವಚನದ ಮೂಲಕ ಅಭಿವ್ಯಕ್ತ ಗೊಳಿಸಿದ್ದಾನೆ. ನಾವು ಬೀಜ ಬಿತ್ತಿ ಬೆಳೆ ತೆಗೆಯುತ್ತೇವೆ. ಮರ ನೆಡುತ್ತೇವೆ, ಬೆಳೆ, ಕೆರೆ, ಪ್ರಾಣಿ, ಮರ, ಇವೆಲ್ಲ ಅವುಗಳನ್ನು ಸ್ವಾರ್ಥಕ್ಕಾಗಿ ಬಳಸಿಕೊಳ್ಳದೆ ಸಮಾಜಕ್ಕೆ ಕೊಟ್ಟು ಬಿಡುತ್ತವೆ. ಆ ರೀತಿಯಲ್ಲಿಯೇ ನಮ್ಮ ಬದುಕು ಪರೋಪಕಾರಕ್ಕೆ ಮೀಸಲಿಡಬೇಕು ಎಂದು ತಿಳಿಯುವುದೇ ಆತ್ಮಶೀಲ. ಹೀಗೆ ತಿಳಿಯದವರನ್ನು ಇದೇ ವಚನಕಾರನು ಆತ್ಮಗಳ್ಳರು ಎಂದು ಕರೆದಿದ್ದಾನೆ.

ಅರಿವಿನ ಮಾರಿತಂದೆ ಆತ್ಮಗುಣದ ಪರಿ ಯಾವುದು ಎಂಬುದನ್ನು ಕುರಿತು ತನ್ನ ವಚನ ಮೂಲಕ ಹೀಗೆ ಅಭಿವ್ಯಕ್ತಿಪಡಿಸಿದ್ದಾನೆ.

**ಆತ್ಮಗುಣದ ವಿವರದ ಪರಿಯೆಂತೆಂದೊಡೆ**
**ತರುವಿನ ಪರಿಭೇದದಂತೆ**
**ಮರ ಬಲಿದು ಋತುಕಾಲಕ್ಕೆ ಪಲ್ಲವದ ಮಧ್ಯದಲ್ಲಿ**
**ಹೂಮಿಡಿ ಬಲಿದು**
**ರಸ ನಿಂದು ಫಳವಾದಂತೆ**
**ಆತ್ಮ ವಿವೇಕ ಸ್ವಸ್ಥದಲ್ಲಿ ನಿಂದು ತನ್ನಿರವ ತಾ ವಿಚಾರಿಸಿ**
**ಮಹವನೊಡಗೂಡಿ ಮಲತ್ರಯ ದೂರವಾಗಿ**
**ಚಿಚ್ಛಕ್ತಿಯ ಹೃದಯದಲ್ಲಿ ಚಿದ್ಘನ ಒಲಿದು**
**ಸ್ವರೂಪವಾಗಿ ನಿಂದು**
**ಆತ್ಮ ಅಳಿವನರಿದು ಆಧ್ಯಾತ್ಮಯೋಗ ಸಂಬಂಧ.**

ಇಲ್ಲಿ ಅರಿವಿನ ಮಾರಿತಂದೆ ಆತ್ಮವನ್ನು ವೃಕ್ಷಕ್ಕೆ ಹೋಲಿಸಿರುವ ಬಗೆ ಆಪ್ಯಾಯಮಾನವಾಗಿದೆ. ಮಳೆಯ ನೀರನ್ನು ಹಾಗೆಯೇ ಮಣ್ಣಿನ ಸತ್ವವನ್ನು ಹೀರಿಕೊಂಡು ಸಸಿ ಚಿಗುರಿ, ಹೂಮಿಡಿಗಳನ್ನು ಬೆಳೆಸಿ ಅದರಲ್ಲಿ ಸ್ವಚ್ಛಭರಿತವಾದ ರಸ ತುಂಬಿಕೊಂಡು ಕೊನೆಗೆ ಹಣ್ಣುಗಳನ್ನು ತುಂಬಿದ ಮರ ಕಾಣಿಸುತ್ತದೆ. ಹಾಗೆಯೇ ಆತ್ಮ ವೃಕ್ಷವೂ ಕೂಡ ಹೀಗೆ ಒಣಗದಂತೆ ವ್ಯಕ್ತಿ ಸಮಚಿತ್ತವನ್ನು ಬೆಳೆಸಿಕೊಂಡು ಹೋಗುವ ವಿವೇಕ ಅವನಲ್ಲಿ ಆತ್ಮದ ಬೆಳವಣಿಗೆ ಇರಬೇಕು. ಮಹತ್ತಾರ ವಿಕಾಸದ ಉಗಮಗಳಿರಬೇಕು, ಅಣವಮಲ, ಮಾಯಾ ಮಲ ಹಾಗೂ ಕಾರ್ಮಿಕ ಮಲ ಎಂಬ ಮೂರು ಬಗೆಯ ಮಲಗಳನ್ನು ನಿವಾರಿಸಿಕೊಳ್ಳಬೇಕು. ಆಧ್ಯಾತ್ಮ ಯೋಗ ಸಂಬಂಧದಿಂದ ವ್ಯಕ್ತಿಯ ಚಿತ್‌ಶಕ್ತಿ ಬೆಳೆಯಬೇಕು. ಇದು

ಸಮಾಜದ ಬೆಳವಣಿಗೆಯ ಕ್ರಮ ಎಂಬುದು ವಚನಕಾರನ ಆಶಯ.

ಹಾಗೆಯೇ ಬಹಿರಂಗ ಶುದ್ಧಿಯಿಲ್ಲದ ಮಾತುಗಳು ಕೃತಿಮವೆನಿಸುತ್ತದೆ. ಅಂದರೆ ಬಣ್ಣವಿಟ್ಟು ನುಡಿದಲ್ಲಿ ಫಲವೇನು? ಎಂದು ಬಸವಣ್ಣನವರು ಪ್ರಶ್ನಿಸುತ್ತಾರೆ. 'ಬಣ್ಣರ ನುಡಿ' ಎಂದರೆ ವರ್ಣರಂಜಿತವಾದ ಪ್ರಶಂಸೆಯ ಮಾತುಗಳನ್ನು ಆಡುವುದು, 'ಚಿನ್ನಗೆಯ್ಯ ನಾಡುವವನಂತೆ' ಎಂದರೆ ಅಪ್ರಮಾಣಿಕ ಅಕ್ಕಸಾಲಿಯು ಇಂಥ ಮಾತುಗಳಲ್ಲಿ ಪಳಗಿರುತ್ತಾರೆ. ಬಣ್ಣದ ಮಾತು ಗಳನ್ನಾಡಿ ತಮ್ಮ ಬೇಳೆಯನ್ನು ಬೇಯಿಸಿಕೊಳ್ಳುವವರೇ ಈ ಸಮಾಜದಲ್ಲಿ ಜಾಸ್ತಿ. ಅವರು ಪ್ರಾಮಾಣಿಕವಾಗಿ ವರ್ತಿಸುವುದಿಲ್ಲ, ಇಂಥ ಆತ್ಮವಂಚನೆ ಪರವಂಚನೆಗಳು ಆತ್ಮಶೀಲಕ್ಕೆ ಕಳಂಕ ತರುತ್ತವೆ.

**ತನುಶೀಲ ಎಂದರೆ ನಡವಳಿಕೆಯ ವಿಧಾನಗಳು**
**ಸಮಚಿತ್ತದಿಂದ ನೇಮದ ಹಲಗೆಯ ಹಿಡಿದು**
**ಶಿವಚಿತ್ತವೆಂಬ ಕೂಡಲಗ ಕೊಂಡು**
**ಶರಣಾರ್ಥಿ ಎಂಬ ಶ್ರವ ಕಲಿತೊಡೆ**
**ಆಳುತನಕ್ಕೆ ದೆಸೆಯಪ್ಪ ನೋಡಾ**
**ಮಾರಂಕ ಜಂಗಮ ಮನೆಗೆ ಬಂದಲ್ಲಿ**
**ಇದಿರೆತ್ತಿ ನಡೆವುದು,**
**ಕೂಡಲಸಂಗಮದೇವನನೊಲಿಸುವಡಿದು ಚಿಹ್ನ !**

ಕೋಪತಾಪಗಳ ಸುಳಿಗಾಳಿಗೆ ಸಿಕ್ಕಿದ ಮನುಷ್ಯ ಧೈರ್ಯವಾಗಿ ಯೋಧನಂತೆ ಯುದ್ಧಕ್ಕೆ ಸಿದ್ಧನಾಗಬೇಕು. ಇಲ್ಲಿ ನಡೆಯುವ ಯುದ್ಧ ಮುಖಾಮುಖಿಯಾಗಿ ಯುದ್ಧಕ್ಕೆ ಹೊರಡುವವನಿಗೆ ಗುರಾಣಿ ಹಾಗೂ ಖಡ್ಗ ಎರಡೂ ಇರಬೇಕು. ಇವನೇ ಭಗವಂತನ ಭಕ್ತನಾದ ಶರಣ. ಎದುರಾಳಿಯನ್ನು ಮಣಿಸಲು ಹೋಗುತ್ತಿರುವು ದರಿಂದ ಇಲ್ಲಿ ಹಿಡಿಯಬೇಕಾದ ಆಯುಧಗಳೇ ಬೇರೆ. ಗುರಾಣಿ ಯಾವುದೆಂದರೆ ಶರಣನಾದವನ ಸಮಚಿತ್ತ : **"ದುಃಖೇಷು ಅನುದ್ವಿಗ್ನ ಮನಾ, ಸುಖೇಷು ವಿಗತಸ್ಪೃತಃ"** ಎಂದು ಗೀತೆಯೂ ಇದನ್ನೇ ಹೇಳುತ್ತದೆ. ಈ ಎಲ್ಲಾ ಆದರ್ಶಗಳನ್ನು, ಮಾನವೀಯ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಸತ್ಪಥದಲ್ಲಿ ನಡೆದರೆ ಇದ್ದಲ್ಲಿಯೇ ದೇವಲೋಕದ ಸುಖವನ್ನು ಕಾಣಬಹುದು.



ಏಪ್ರಿಲ್ ೨೫ ರಂದು, ವೀರಶೈವ ಲಿಂಗಾಯತ ಕ್ಷೇಮಾಭಿವೃದ್ಧಿ ವೇದಿಕೆ ವತಿಯಿಂದ ಬೆಂಗಳೂರಿನ ದಾಸರಹಳ್ಳಿಯಲ್ಲಿ ಆಯೋಜಿಸಲಾಗಿದ್ದ ಪರಮಪೂಜ್ಯ ಡಾ. ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರ ೧೧೯ನೇ ಜನ್ಮದಿನೋತ್ಸವ, ಶ್ರೀ ಬಸವ ಜಯಂತಿ, ಅಕ್ಕಮಹಾದೇವಿ ಜಯಂತಿ ಹಾಗೂ ಕಾಯಕಯೋಗಿ ಪ್ರಶಸ್ತಿ ಪ್ರದಾನ ಸಮಾರಂಭ ಶ್ರೀ ಸಿದ್ಧಗಂಗಾ ಮಠದ ಕಿರಿಯ ಶ್ರೀಗಳಾದ ಪೂಜ್ಯ ಶ್ರೀ ಶ್ರೀ ಶಿವಸಿದ್ಧೇಶ್ವರ ಸ್ವಾಮಿಗಳು ಹಾಗೂ ಬೆಳಗಾವಿ, ಅಥಣಿ ಮೋಟಗಿ ಮಠದ ಪೂಜ್ಯ ಶ್ರೀ ಶ್ರೀ ಪ್ರಭುಚನ್ನಬಸವ ಸ್ವಾಮಿಗಳವರ ದಿವ್ಯಸಾನ್ನಿಧ್ಯದಲ್ಲಿ ನಡೆಯಿತು. ಈ ಸಂದರ್ಭದಲ್ಲಿ ಮಾಜಿ ಮುಖ್ಯಮಂತ್ರಿ ಹಾಗೂ ಸಂಸದರಾದ ಶ್ರೀ ಜಗದೀಶ್ ಶೆಟ್ಟರ್, ಶಾಸಕರಾದ ಶ್ರೀ ಎಸ್.ಮುನಿರಾಜು, ಕರ್ನಾಟಕ ನಾಟಕ ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಕೆ.ವಿ.ನಾಗರಾಜಮೂರ್ತಿ ಹಾಗೂ ಗಣ್ಯರಾದ ಶ್ರೀ ಮರಿಸ್ವಾಮಿ, ಶ್ರೀ ಮನೋಹರ್ ಅಬ್ಬಿಗೆರೆ ಮೊದಲಾದವರು ಉಪಸ್ಥಿತರಿದ್ದರು.

## ಆರೋಗ್ಯ

# ಡಯಾಬಿಟೀಸ್ ಬಗ್ಗೆ ಎಚ್ಚರವಿರಲಿ

– ಡಾ. ಎಂ.ಎಸ್. ರಾಜಣ್ಣ *

ಡಯಾಬಿಟೀಸ್ ಎಂದರೆ ರಕ್ತದಲ್ಲಿ ಹೆಚ್ಚು ಪ್ರಮಾನದ ಸಕ್ಕರೆ ಅಂಶ ಇರುವ ಪರಿಸ್ಥಿತಿ ಎಂದು ತಿಳಿಯಬಹುದು. ಎಲ್ಲ ಅಂಗಾಂಗಗಳ ಕಾರ್ಯ ಚುಟವಟಿಕೆಗೆ ಸಕ್ಕರೆ ಅಂಶ ಬೇಕಾಗುತ್ತದೆ. ಆದರೆ ಸಕ್ಕರೆ ಅಂಶ ರಕ್ತದಲ್ಲಿ ಹೆಚ್ಚಾಗಿದ್ದರೆ ಅದರಿಂದ ಅನೇಕ ತೊಂದರೆಗಳು ಉಂಟಾಗುತ್ತದೆ.

ರಕ್ತದಲ್ಲಿ ಸಕ್ಕರೆ ಅಂಶ ಜೀವ ಕಣಗಳಲ್ಲಿ ಸರಿಯಾಗಿ ಉಪಯೋಗಿಸಲ್ಪಡಬೇಕಾದರೆ ಮೇದೋಜೀರಕಾಂಗ (ಪ್ಯಾನ್‌ಕ್ರಿಯಾಸ್) ತಯಾರಿಸುವ ಇನ್ಸುಲಿನ್ ಎಂಬ ಹಾರ್ಮೋನ್ ಅಗತ್ಯ. ಇನ್ಸುಲಿನ ಹಾರ್ಮೋನ್ ತಯಾರಿಕೆ ಇಲ್ಲದಿದ್ದರೆ, ತಯಾರಿಕೆ ಕಡಿಮೆ ಇದ್ದರೆ ಅಥವಾ ಲೋಪದಿಂದ ಕೂಡಿದ್ದರೆ ರಕ್ತದಲ್ಲಿರುವ ಸಕ್ಕರೆ ಅಂಶ ಸರಿಯಾಗಿ ಜೀವ ಕಣಗಳಲ್ಲಿ ಉಪಯೋಗವಾಗದೆ ರಕ್ತದಲ್ಲಿ ಸಕ್ಕರೆ ಅಂಶ ಹೆಚ್ಚಾಗಿ ಉಳಿಯುತ್ತದೆ.

ದಯಾಬಿಟೀಸ್ ತೊಂದರೆ ಕೇವಲ ಶ್ರೀಮಂತರಿಗೆ ಮೀಸಲಾಗಿಲ್ಲ. ಜೀವನ ರೀತಿಯಲ್ಲಿ ಬದಲಾವಣೆ, ನಗರಿಕರಣ, ಆಲಸ್ಯ ಜೀವನ, ಇದರಿಂದಾಗಿ ಹೆಚ್ಚು ಹೆಚ್ಚು ಡಯಾಬಿಟೀಸ್ ರೋಗಿಗಳು ಕಂಡು ಬರುತ್ತಿದ್ದಾರೆ. ಅಂಕಿ ಅಂಶಗಳ ಪ್ರಕಾರ ಈ ಶತಮಾನದ ಅಂತ್ಯದ ವೇಳೆಗೆ ನಮ್ಮ ದೇಶದಲ್ಲಿ ಸುಮಾರು ೪೦ ದಶಲಕ್ಷ ದಯಾಬಿಟೀಸ್ ರೋಗಿಗಳು ಇದ್ದು ಶೇಕಡ ೧೦ ರಷ್ಟು ಪಟ್ಟಣ ಪ್ರದೇಶದಲ್ಲಿಯೂ ಹಾಗೂ ಶೇಕಡ ೨-೫ ರಷ್ಟು ಹಳ್ಳಿಗಳಲ್ಲಿಯೂ ಈ ರೋಗಿಗಳು ಕಂಡುಬರುತ್ತಾರೆ.

### ಡಯಾಬಿಟೀಸ್ ರೋಗಿಗಳಲ್ಲಿ ಕಂಡುಬರುವ ತೊಂದರೆಗಳು

ಮೂತ್ರದಲ್ಲಿ ಸಕ್ಕರೆ ಅಂಶ ಆರೋಗ್ಯವಂತರ ದೇಹದಲ್ಲಿ ಇರುವುದಿಲ್ಲ. ಡಯಾಬಿಟೀಸ್ ರೋಗಿಗಳ ರಕ್ತದಲ್ಲಿ ಸಕ್ಕರೆ ಅಂಶ ಹೆಚ್ಚಾದಾಗ ಮೂತ್ರದಲ್ಲಿ ವಿಸರ್ಜನೆಯಾಗುವ ಸಕ್ಕರೆ ತನ್ನೊಂದಿಗೆ ನೀರನ್ನು ಹೆಚ್ಚು ಹೊರ ಹಾಕುತ್ತದೆ. ಆದ್ದರಿಂದ ರೋಗಿಗಳು ಹೆಚ್ಚು ಸಲ ಮೂತ್ರವಿಸರ್ಜನೆ ಮಾಡುತ್ತಾರೆ. ಹೆಚ್ಚು ನೀರು ವಿಸರ್ಜನೆಯಾಗುವುದರಿಂದ ಹೆಚ್ಚು ಬಾಯಾರಿಕೆಯಾಗುತ್ತದೆ. ಜೀವ ಕಣಗಳಿಗೆ ಸಕ್ಕರೆ ಅಂಶ ದೊರೆಯದೆ (ರಕ್ತದಲ್ಲಿ ಸಕ್ಕರೆ ಅಂಶ ಹೆಚ್ಚಿದ್ದರೂ ಸಹ) ಜೀವಕಣಗಳು ಸಕ್ಕರೆಗಾಗಿ ಹಾಹಾಕಾರ ಮಾಡುತ್ತದೆ. ಅಂದರೆ ಹಸಿವು ಹೆಚ್ಚಾಗುತ್ತದೆ. ಜೀವಕಣಗಳಿಗೆ ಸಕ್ಕರೆ ಸರಿಯಾಗಿ ದೊರೆಯದೆ ಪ್ರೋಟೀನ್ ಹಾಗೂ ಕೊಬ್ಬಿನ ಅಂಶವನ್ನು ಉಪಯೋಗಿಸಿಕೊಳ್ಳುವುದರಿಂದ ರೋಗಿಗಳು ಕೃಶವಾಗುತ್ತಾರೆ. ಸುಸ್ತು, ಸಂಕಟ, ಇತ್ಯಾದಿ ತೊಂದರೆಗಳನ್ನು ವ್ಯಕ್ತಪಡಿಸುತ್ತಾರೆ. ಜತೆಗೆ ರೋಗ ನಿರೋಧಕ ಶಕ್ತಿ ಕಡಿಮೆಯಾಗಿ ಪದೇ ಪದೇ ಸೋಂಕು ರೋಗಗಳಿಗೆ ತುತ್ತಾಗುತ್ತಾರೆ. ಗಾಯಗಳು ವಾಸಿಯಾಗಲು ತಡವಾಗುತ್ತದೆ.

ಡಯಾಬಿಟೀಸ್ ತೊಂದರೆ ಒಬ್ಬರಿಂದ ಒಬ್ಬರಿಗೆ ಹರಡುವ ಸಾಂಕ್ರಾಮಿಕ ಅಥವಾ ಅಂಟು ರೋಗವಲ್ಲ.

### ಡಯಾಬಿಟೀಸ್ ತೊಂದರೆ-ಯಾರಲ್ಲಿ ಹೆಚ್ಚು ?

ಮಧ್ಯಮ ವಯಸ್ಸಿನಲ್ಲಿ ಅಥವಾ ತಡವಾಗಿ ಗುರುತಿಸಲ್ಪಡುವ ರೋಗಿಗಳಲ್ಲಿ ಅನುವಂಶೀಯತೆ ಪ್ರಮುಖ ಪಾತ್ರವಹಿಸುತ್ತದೆ. ತಂದೆ ತಾಯಿಯರಲ್ಲಿ ಡಯಾಬಿಟೀಸ್ ರೋಗ ಕಂಡು ಬಂದಿದ್ದು, ಜತೆಗೆ ಬೊಜ್ಜು ಹೆಚ್ಚಾಗಿರುವವರು ಇವರಲ್ಲಿ ಡಯಾಬಿಟೀಸ್ ತೊಂದರೆ ಹೆಚ್ಚಾಗಿ ಕಂಡುಬರುತ್ತದೆ. ಹೆಚ್ಚು ಒತ್ತಡ, ಸಂಕಷ್ಟ ಅಪಘಾತ, ಹೆಚ್ಚು ತೂಕವುಳ್ಳ ಮಕ್ಕಳಿಗೆ ಜನ್ಮ ನೀಡುತ್ತಿರುವ ತಾಯಂದಿರಲ್ಲಿ ಮತ್ತು ಪದೇ ಪದೇ ವಿವಿಧ ರೋಗಗಳಿಗೆ ತುತ್ತಾಗುತ್ತಿರುವವರಲ್ಲಿ ಡಯಾಬಿಟೀಸ್ ರೋಗ ಹೆಚ್ಚಾಗಿ ಕಂಡುಬರುತ್ತದೆ.

---


* ಸೌಜನ್ಯ ಕ್ಲಿನಿಕ್, # 393ಎಚ್,2ನೇ ಕ್ರಾಸ್, 9-ಎಫ್ ಮುಖ್ಯರಸ್ತೆ, ಹೊಸಹಳ್ಳಿ, ವಿಜಯನಗರ, ಬೆಂಗಳೂರು-560 040. ಮೊ: 94491 44308







**ವಿವಿಧ ಬಗೆಯ ಡಯಾಬಿಟೀಸ್ ರೋಗಗಳು**

೧. ಇನ್ಸುಲಿನ್ ಆಶ್ರಿತರು

೨. ಇನ್ಸುಲಿನ್ ಆಶ್ರಿತರಲ್ಲದವರು

೩. ಗರ್ಭಿಣಿ ಸಮಯದಲ್ಲಿ ಡಯಾಬಿಟೀಸ್ ರೋಗ ಗುರುತಿಸಲ್ಪಟ್ಟವರು

೪. ಅಪೌಷ್ಟಿಕತೆಯಿಂದ ಡಯಾಬಿಟೀಸ್ ಉಂಟಾಗಿರುವುದು

**೧. ಇನ್ಸುಲಿನ್ ಆಶ್ರಿತರು** – ಸಾಮಾನ್ಯವಾಗಿ ೨೦ ವರ್ಷ ವಯಸ್ಸಿಗೆ ಮೊದಲು ಗುರುತಿಸಲ್ಪಟ್ಟು ಜೀವನ ಪೂರ್ತಿ ಇನ್ಸುಲಿನ್ ಅವಲಂಬಿಸುವವರು. ಇನ್ಸುಲಿನ್ ದೊರೆಯದಿದ್ದಲ್ಲಿ ಪ್ರಾಣಾಪಾಯ ಸಂಭವಿಸುವುದುಂಟು.

**೨. ಇನ್ಸುಲಿನ್ ಆಶ್ರಿರತಲ್ಲದವರು** – ಈ ಬಗೆಯ ಡಯಾಬಿಟೀಸ್ ರೋಗಿಗಳು ನಮ್ಮ ದೇಶದಲ್ಲಿ ಹೆಚ್ಚಾಗಿ ಕಂಡುಬರುತ್ತಾರೆ. ಸಾಮಾನ್ಯವಾಗಿ ೩೦ ವರ್ಷ ವಯಸ್ಸಿಗೆ ಮೇಲ್ಪಟ್ಟವರಲ್ಲಿ ಇದು ಕಂಡುಬರುತ್ತದೆ. ದೇಹದ ತೂಕ ಹೆಚ್ಚಾಗಿದ್ದು ಇನ್ಸುಲಿನ್ ಕಡಿಮೆ ಅಥವಾ ಇನ್ಸುಲಿನ್ ಸರಿಯಾಗಿ ಕೆಲಸ ನಿರ್ವಹಿಸುವುದಿಲ್ಲ. ನಿಯಮಿತ ಆಹಾರ, ವ್ಯಾಯಾಮ, ಮಾತ್ರೆಗಳು ಮತ್ತು ಕೆಲವೊಮ್ಮೆ ಇನ್ಸುಲಿನ್ ಇವುಗಳಿಂದ ತೊಂದರೆಯನ್ನು ಹತೋಟಿಯಲ್ಲಿಟ್ಟುಕೊಳ್ಳಬಹುದು.

**ಡಯಾಬಿಟೀಸ್ ರೋಗವನ್ನು ಗುಣಪಡಿಸಬಹುದೆ ?**

ಇಲ್ಲ ಗುಣಪಡಿಸಲು ಸಾಧ್ಯವಿಲ್ಲದಿದ್ದರೂ, ರೋಗವನ್ನು ಹತೋಟಿಯಲ್ಲಿಟ್ಟುಕೊಂಡು ರೋಗಿ ಸಂಪೂರ್ಣ ತೃಪ್ತಿಕರ ಜೀವನ ನಡೆಸಬಹುದು.

**ಡಯಾಬಿಟೀಸ್ ರೋಗವನ್ನು ಪತ್ತೆ ಹಚ್ಚುವುದು ಹೇಗೆ ?**

ಕೇವಲ ಮೂತ್ರ ಪರೀಕ್ಷೆಯಿಂದ ಡಯಾಬಿಟೀಸ್ ರೋಗವನ್ನು ಪತ್ತೆ ಹೆಚ್ಚುವುದು ಸಾಧ್ಯವಿಲ್ಲ.

ರಕ್ತಪರೀಕ್ಷೆ :– ಆಹಾರಕ್ಕೆ ಮೊದಲು ಮತ್ತು ಆಹಾರ ಅಥವಾ ಗ್ಲೂಕೋಸ್ ನಂತರ, ಪರೀಕ್ಷಾ ಕೇಂದ್ರದಲ್ಲಿ ಪರೀಕ್ಷಿಸಿ ಡಯಾಬಿಟೀಸ್ ರೋಗಿಗಳನ್ನು ಗುರುತಿಸುತ್ತಾರೆ.

**ಡಯಾಬಿಟೀಸ್ ರೋಗದಿಂದ ಉಂಟಾಗುವ ದುಷ್ಪರಿಣಾಮಗಳು ?**

ಕಣ್ಣು, ರಕ್ತನಾಳ, ಹೃದಯ, ಮೂತ್ರಪಿಂಡ, ನರಮಂಡಲ ಇತ್ಯಾದಿ ದೇಹದ ವಿವಿಧ ಅಂಗಾಂಗಗಳ ಮೇಲೆ ಡಯಾಬಿಟೀಸ್ ರೋಗದಿಂದ ದುಷ್ಪರಿಣಾಮಗಳು ಉಂಟಾಗಬಹುದು.

**ಡಯಾಬಿಟೀಸ್ ತೊಂದರೆ ಹತೋಟಿ ಹೇಗೆ ?**

ಮಿತವಾದ ಆಹಾರ ಸೇವನೆ, ವ್ಯಾಯಾಮ, ಮಾತ್ರೆಗಳು, ಇನ್ಸುಲಿನ್–ಇಂಜಕ್ಷನ್ ಇವುಗಳಿಂದ ಡಯಾಬಿಟೀಸ್ ತೊಂದರೆಯನ್ನು ಹತೋಟಿಯಲ್ಲಿಟ್ಟುಕೊಳ್ಳಬಹುದು.

**ಅತ್ಯುತ್ತಮ ರಕ್ತದ ಸಕ್ಕರೆ ಪ್ರಮಾಣ :** ಬೆಳಿಗ್ಗೆ ಖಾಲಿ ಹೊಟ್ಟೆಯಲ್ಲಿ ೮೦ ರಿಂದ ೧೨೦ ಮಿ.ಗ್ರಾಂ., ಆಹಾರ ಸೇವಿಸಿ ೨ ಘಂಟೆಯ ನಂತರ ೧೨೦ ರಿಂದ ೧೮೦ ಮಿ.ಗ್ರಾಂ. ಇರಬೇಕು.

**ಆಹಾರದ ಬಗ್ಗೆ ತಪ್ಪು ಕಲ್ಪನೆ :** ಡಯಾಬಿಟೀಸ್ ತೊಂದರೆ ಇರುವವರು ಅನ್ನ, ಆಲೂಗಡ್ಡೆ, ಪಿಷ್ಟ ಪದಾರ್ಥಗಳನ್ನು ಸೇವಿಸಬಾರದೆಂಬ ತಪ್ಪು ಕಲ್ಪನೆ ಇದೆ. ಆದರೆ ಸಕ್ಕರೆ, ಬೆಲ್ಲ ಹಾಗೂ ಜೇನುತುಪ್ಪ ಇವುಗಳನ್ನು ಸೇವಿಸಬಾರದು. ಆಹಾರದಲ್ಲಿ ಶರ್ಕರಪಿಷ್ಟ, ನಾರಿನ ಅಂಶ ಹೆಚ್ಚಾಗಿರಬೇಕು. (ಅಂದರೆ ಸೊಪ್ಪು ಹಸಿರು ತರಕಾರಿಗಳು) ಕೊಬ್ಬಿನ ಅಂಶ ಕಡಿಮೆ ಇರಬೇಕು. ಒಂದೇ ಸಲ ಹೆಚ್ಚು ಆಹಾರ ಸೇವಿಸುವ ಬದಲು ೩–೪ ಗಂಟೆಗಳಿಗೊಮ್ಮೆ ಸ್ವಲ್ಪ ಆಹಾರ ಸೇವಿಸುವುದು ಒಳ್ಳೆಯದು.

ಡಯಾಬಿಟೀಸ್ ರೋಗಿಗಳು ಉಪವಾಸ ಮಾಡುವುದರಿಂದ ಅನುಕೂಲಕ್ಕಿಂತ ಹೆಚ್ಚಾಗಿ ತೊಂದರೆ ಉಂಟಾಗಬಹುದು.

ಬೆಳಿಗ್ಗೆ, ಸಂಜೆ ಬಿರುಸಿನ ನಡಿಗೆ, ಇದು ಉತ್ತಮ ವ್ಯಾಯಾಮ.

ಡಯೋನಿಲ್, ಯೂಗ್ಲೋಕೋನ್ ಮುಂತಾದ ದಪ್ಪ ಮಾತ್ರೆಗಳನ್ನು ಆಹಾರಕ್ಕೆ ಮೊದಲು ತೆಗೆದುಕೊಳ್ಳಬೇಕು. ಒಬಿಮೆಟ್, ಗ್ಲೈಕೋಮೆಟ್ ಮುಂತಾದ ದಪ್ಪ ಮಾತ್ರೆಗಳನ್ನು ಆಹಾರದ ನಂತರ ತೆಗೆದುಕೊಳ್ಳಬೇಕು.

ರಕ್ತದಲ್ಲಿ ಸಕ್ಕರೆ ಪ್ರಮಾಣ ಕಡಿಮೆಯಾದಲ್ಲಿ ಹೊಟ್ಟೆ ಹಸಿವು, ಸುಸ್ತು, ಸಂಕಟ, ಬೆವರುವುದು, ತಲೆನೋವು, ಕಣ್ಣು ಕತ್ತಲಾಗುವುದು, ಮಂಪರು, ಜ್ಞಾನ ತಪ್ಪುವುದು ಮುಂತಾದ ತೊಂದರೆಗಳುಂಟಾಗುತ್ತದೆ. ಈ ರೀತಿಯ ಅನುಭವ ಉಂಟಾದರೆ ಪ್ರಾರಂಭದಲ್ಲೇ ಸಕ್ಕರೆ, ಹಣ್ಣಿನ ರಸ

ಇತ್ಯಾದಿ ಸೇವಿಸಿದರೆ ತೊಂದರೆಯ ನಿವಾರಣೆ ಕೂಡಲೇ ಉಂಟಾಗುತ್ತದೆ. ಎಲ್ಲ ಡಯಾಬಿಟೀಸ್ ರೋಗಿಗಳಿಗೂ ಚಿಕಿತ್ಸೆ ಒಂದೇ ಆಗಿರುವುದಿಲ್ಲ. ರೋಗಿಗಳು, ಬಂಧು–ಮಿತ್ರರ ಸಲಹೆಗೆ ಕಿವಿಗೊಡದೆ ವೈದ್ಯರ ಸಲಹೆ ಪಡೆಯಿರಿ. ಸಣ್ಣಪುಟ್ಟ ಗಾಯಗಳಾದರೆ ಉದಾಸೀನ ಮಾಡದೆ ಕೂಡಲೇ ವೈದ್ಯರ ಸಲಹೆ ಪಡೆಯಿರಿ.

ಡಯಾಬಿಟೀಸ್ ರೋಗಿಗಳಿಗೆ ಮೊದಲ ಆರು ವರ್ಷಗಳಲ್ಲಿ ರಕ್ತದಲ್ಲಿನ ಸಕ್ಕರೆ ಅಂಶ ಹೆಚ್ಚದಂತೆ ಎಚ್ಚರಿಕೆ ವಹಿಸುವುದು ಒಳ್ಳೆಯದು. ಇಲ್ಲದಿದ್ದರೆ ಉಂಟಾಗುವ ತೊಂದರೆಗಳನ್ನು ನಿಯಂತ್ರಿಸಲು ಕಷ್ಟವಾಗುತ್ತದೆ.

ಕಾಲು, ಪಾದಗಳನ್ನು ಎಚ್ಚರಿಕೆಯಿಂದ ಶುಭ್ರವಾಗಿ ಇಟ್ಟುಕೊಳ್ಳಬೇಕು. ಸೋಂಕು ಉಂಟಾದರೆ ನಂತರ ಕಾಲಿನ ಭಾಗಗಳು ಕೊಳೆತು ಹೋಗುವ ಸಂಭವ ಸಹ ಉಂಟು. ತಿಂಗಳಿಗೊಮ್ಮೆ ರಕ್ತದಲ್ಲಿರುವ ಸಕ್ಕರೆ ಅಂಶ ಪರೀಕ್ಷೆ. ಮೂರು ತಿಂಗಳಿಗೊಮ್ಮೆ ರಕ್ತದಲ್ಲಿನ ಕೊಬ್ಬಿನ ಅಂಶ (Lipid Profile) ಪರೀಕ್ಷೆ. ವರ್ಷಕೊಮ್ಮೆ ಕಣ್ಣಿನ ಪರೀಕ್ಷೆ, ದಂತ ವೈದ್ಯರ ಸಲಹೆ ಪಡೆಯಿರಿ.

ಮೂರು ತಿಂಗಳಿಗೊಮ್ಮೆ ಗ್ಲೈಕೋಸೈಲೇಟಿಡ್ ಹೀಮೋಗ್ಲೋಬಿನ್ ಪರೀಕ್ಷೆ ಮಾಡಿಸಿದರೆ, ಮೂರು ತಿಂಗಳ ಅವಧಿಯಲ್ಲಿ ರಕ್ತದಲ್ಲಿನ ಸಕ್ಕರೆ ಪ್ರಮಾಣ ನಿಯಮಿತವಾಗಿರುವುದರ ಬಗ್ಗೆ ತಿಳಿಯುತ್ತದೆ. ಈ ಪರೀಕ್ಷೆಯ ಸೌಲಭ್ಯ ಬೆಂಗಳೂರಿನ ಕೆಲವು ಪ್ರಯೋಗ ಶಾಲೆಯಲ್ಲಿ ಲಭ್ಯವಿದೆ.

ಮೈಕ್ರೋ ಆಲ್ಬುಮಿನ್ಯೂರಿಯ ಪರೀಕ್ಷೆಯಿಂದ ರೋಗಿಗಳಲ್ಲಿ ಮೂತ್ರಪಿಂಡಕ್ಕೆ ಆಗಿರುವ ಹಾನಿಯನ್ನು ಬಹಳ ಮುಂಚಿತವಾಗಿ ಗುರುತಿಸಬಹುದು. ಈ ಪರೀಕ್ಷೆಯ ಸೌಲಭ್ಯ ಬೆಂಗಳೂರಿನ ಕೆಲವು ಪ್ರಯೋಗ ಶಾಲೆಯಲ್ಲಿ ಲಭ್ಯವಿದೆ. ಧೂಮಪಾನದಿಂದ ರಕ್ತನಾಳಗಳಿಗೆ ಉಂಟಾಗುವ ಹಾನಿ ಡಯಾಬಿಟೀಸ್ ರೋಗಿಗಳಲ್ಲಿ ತೀವ್ರಗತಿಯಲ್ಲಿ ಮುಂದುವರೆಯುತ್ತದೆ. ಆದ್ದರಿಂದ ಧೂಮಪಾನ ಮಾಡಬಾರದು.

ಪ್ರಾರಂಭದಿಂದಲೇ ಡಯಾಬಿಟೀಸ್ ತೊಂದರೆಯನ್ನು ಗುರುತಿಸಿ ಸರಿಯಾದ ಚಿಕಿತ್ಸೆ ನಿಯಮಿತವಾದ ಆಹಾರ, ವ್ಯಾಯಾಮ ವೈದ್ಯಕೀಯ ಸಲಹೆ, ಇವುಗಳಿಂದ ಡಯಾಬಿಟೀಸ್ ತೊಂದರೆಯನ್ನು ಪರಿಣಾಮಕಾರಿಯಾಗಿ ಹತೋಟಿಯಲ್ಲಿಟ್ಟುಕೊಂಡರೆ, ಪೂರ್ಣ ಹಾಗೂ ತೃಪ್ತಿಕರ ಜೀವನವನ್ನು ನಡೆಸಲು ಸಾಧ್ಯ.



ಮೇ ೧೦ ರಂದು, ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಗೋಡೆಕೆರೆ ಗ್ರಾಮದಲ್ಲಿ ಆಯೋಜಿಸಲಾಗಿದ್ದ ಶ್ರೀಮದ್ ರಂಭಾಪುರಿ ವೀರಸಿಂಹಾಸನಾಧೀಶ್ವರ ಪೂಜ್ಯ ಶ್ರೀ ಶ್ರೀ ಮೃತ್ಯುಂಜಯ ದೇಶಿಕೇಂದ್ರ ಮಹಾಸ್ವಾಮಿಗಳವರ ಗುರುವಂದನ ಕಾರ್ಯಕ್ರಮದಲ್ಲಿ ಶ್ರೀ ಸುತ್ತೂರು ಜಗದ್ಗುರು ಪರಮಪೂಜ್ಯ ಶ್ರೀ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು, ಶ್ರೀ ಸಿದ್ಧಗಂಗಾ ಮಠದ ಕಿರಿಯ ಶ್ರೀಗಳಾದ ಪೂಜ್ಯ ಶ್ರೀ ಶ್ರೀ ಶಿವಸಿದ್ಧೇಶ್ವರ ಸ್ವಾಮಿಗಳವರ ದಿವ್ಯಸಾನ್ನಿಧ್ಯದಲ್ಲಿ ಹರಗುರುಗಳ ಉಪಸ್ಥಿತಿಯಲ್ಲಿ ಸಮಾರಂಭ ನಡೆಯಿತು. ಈ ಸಂದರ್ಭದಲ್ಲಿ ಚಿಕ್ಕನಾಯಕನಹಳ್ಳಿ ಶಾಸಕರಾದ ಶ್ರೀ ಸಿ.ಬಿ.ಸುರೇಶ್‌ಬಾಬು, ತುಮಕೂರು ಗ್ರಾಮಾಂತರ ಶಾಸಕರಾದ ಶ್ರೀ ಬಿ.ಸುರೇಶ್‌ಗೌಡ, ತುಮಕೂರು ನಗರದ ಶಾಸಕರಾದ ಶ್ರೀ ಜಿ.ಬಿ.ಜ್ಯೋತಿಗಣೇಶ್, ತುಮಕೂರು ಬಿಜೆಪಿ ಜಿಲ್ಲಾಧ್ಯಕ್ಷರಾದ ಶ್ರೀ ಹೆಬ್ಬಾಕ ರವಿಶಂಕರ್ ಸೇರಿದಂತೆ ಗಣ್ಯರು ಮತ್ತು ಭಕ್ತಾದಿಗಳು ಉಪಸ್ಥಿತರಿದ್ದರು.







## ಸಾಂದರ್ಭಿಕ

# ಪ್ರಕೃತಿಪೂಜೆ – ವೃಕ್ಷಾರಾಧನೆ

– ತದ್ದಲಸೆ ವಿಘ್ನೇಶ್ವರ ಶರ್ಮಾ *

ಪ್ರತಿಯೊಬ್ಬನಿಗೂ ಅವನದೇ ಆದ ಜೀವನ ಸಂಹಿತೆ ಅಂದರೆ ಧರ್ಮವಿದೆ. ಧರ್ಮವನ್ನು ಆಧರಿಸಿ ಅನುಷ್ಠಾನಗೊಳಿಸಿದರೆ ಅದು ನಮ್ಮನ್ನು ರಕ್ಷಿಸುತ್ತದೆ. "ಧರ್ಮೋ ರಕ್ಷತಿ ರಕ್ಷಿತಃ"ನಾಗುತ್ತಾನೆ. ನಮ್ಮಲ್ಲಿ ಧರ್ಮ ರಕ್ಷಣೆ ಇರಬೇಕು. ನಮಗಾಗಿ ಧರ್ಮ, ಅದಕ್ಕಾಗಿ ನಾವೆಲ್ಲ ಧರ್ಮವನ್ನು ಉಳಿಸಿಕೊಳ್ಳದಿದ್ದರೆ ಅದಕ್ಕೇನೂ ತೊಂದರೆಯಿಲ್ಲ. ಆದರೆ ಅನಾದರ, ನಿರಪೇಕ್ಷತೆಯಿಂದ ನಾವೇ ತೊಂದರೆ ಅನುಭವಿಸಬೇಕು.

ಹಾಗೇ ಪ್ರಕೃತಿ-ಪರಿಸರಗಳದ್ದೂ ಆಗಿದೆ. ಅವು ನಮಗಾಗಿಯೇ ಇದ್ದದ್ದು, ನಾವು ಅವುಗಳಿಂದ ಭಿನ್ನರಾಗಿ ಉಳಿಯುವಂತಿಲ್ಲ. ಹಾಗೆ ಉಳಿದರೆ ಖಿನ್ನರಾಗಬೇಕಾಗುತ್ತದೆ. ಪ್ರತೀ ಹೆಜ್ಜೆ-ಹೆಜ್ಜೆಗೂ ಅದರ ಸಂಪರ್ಕ, ಸಹಕಾರ ಇರಬೇಕು. ನಾವು ಹುಟ್ಟುವ ಪೂರ್ವದಲ್ಲೇ ಅವು ಮುಂದಾಗಿ ಬಂದಿವೆ. ಯಾಕೆ ಎಂಬುದನ್ನು ತಿಳಿಯಬೇಕು. ನಮಗಾಗಿಯೇ ಅವು, ಮಾನವನ ಸ್ವಾಸ್ಥ್ಯ-ಉತ್ಕರ್ಷದ ದೃಷ್ಟಿ ಅವಕ್ಕೆ. ಇದನ್ನು ಅರ್ಥೈಸಿಕೊಳ್ಳದಿದ್ದರೆ ಅವಕ್ಕೇನೂ ನಷ್ಟವಿಲ್ಲ. ರೋಗಿಯಾದವನಿಗೆ ಔಷಧಿ, ತೆಗೆದುಕೊಳ್ಳದಿದ್ದರೆ ಔಷಧಕ್ಕೇನೂ ಹಾನಿಯಿಲ್ಲ, ತೊಂದರೆ ಆಗುವುದು ನಮಗೆ.

ಈ ಸೃಷ್ಟಿಯಲ್ಲಿ ಪ್ರಥಮತಃ ಕಾಣಿಸಿದ್ದು ಆಕಾಶ. ಅದರಿಂದ ವಾಯು, ನಂತರ, ಅಗ್ನಿ ಇದರಿಂದ ಜಲ, ಆಮೇಲೆ ನೆಲ, ಪೃಥ್ವಿ, ಆಮೇಲೆ ಔಷಧಿ-ವನಸ್ಪತಿಗಳೂ ಅನ್ನ, ಆಹಾರ, ನಂತರ ಪುರುಷರು, ಪ್ರಪಂಚ-ಹೀಗೆ ಇವು ವಿಕಾಸಗೊಂಡು, ಆಗಮಿಸಿವೆಯೆಂದು ತೈತ್ತರೀಯ ಉಪನಿಷತ್ತು ತಿಳಿಸುತ್ತದೆ. ಅಂದರೆ ಪ್ರಕೃತಿಯಿಂದಲೇ ಹೀಗೆಲ್ಲಾ ಸೃಷ್ಟಿಯಾಗಿ ಮಾನವನು ಬರುವ ಪೂರ್ವದಲ್ಲೇ ಇವೆಲ್ಲ ಸಿದ್ಧಗೊಂಡದ್ದು. ಇವುಗಳ ಮೂಲದಿಂದಲೇ ಬೃಹತ್ತಾಗಿ ವಿಕಾಸಗೊಂಡದ್ದು. ಅಂದಾಗ ಈ ಪ್ರಕೃತಿ ಪರಿಸರಗಳೆಲ್ಲ ಮಾನವನ ರಕ್ಷಣೆ-ಪೋಷಣೆಗಾಗಿ ಎಂಬುದು ಸತ್ಯ. ಈಗಾಗಿ ಈ ಪ್ರಕೃತಿ ಪರಿಸರಗಳೇ ನಮ್ಮ ಸಂಗಾತಿಗಳು. ಅವುಗಳ ಸಂಬಂಧಗಳೂ ಅವಿಭಾಜ್ಯ.

ಈ ಪ್ರಾಕೃತಿಕ ಸಂಬಂಧ ನಮಗೂ ಅದಕ್ಕೂ ಅನ್ಯೋನ್ಯ ಆಶ್ರಯ ಆಶ್ರಿತ. ನಾವು ಬದುಕುವುದಕ್ಕೆ ಅವು ಉದಾರವಾಗಿ ಸಹಕರಿಸುತ್ತವೆ. ಅವುಗಳ ಪ್ರಯೋಜನ ಪಡೆಯುತ್ತಿರುತ್ತೇವೆ. ನಾವು ಇಲ್ಲಿ ಅವನ್ನು ಪ್ರೀತಿಸಿ ಬೆಳೆಸಿದರೆ ಸಾಕು. ಅವು ನಮಗೆ ಸದಾ ರಕ್ಷಕನಂತೆಯೇ ಇರುತ್ತದೆ. ಮಣ್ಣು, ನೀರು, ಗಾಳಿ, ಶಾಖ, ಆಕಾಶ ಈ ತತ್ತ್ವಗಳನ್ನು ಬಿಟ್ಟು ಪ್ರಪಂಚವೇ ಇಲ್ಲ. ಇವುಗಳ ಪಂಚೀಕರಣದಿಂದಲೇ ಪ್ರಪಂಚವಾದದ್ದು. ನೆಲ ನಮಗೆ ನೆಲೆ ನೀಡಿ ಆಶ್ರಯದಾತ, ಮಣ್ಣು ಬೆಳೆ, ಬೇಸಾಯಕ್ಕೆ ಅವಶ್ಯಬೇಕು. ಜಲ-ಗಾಳಿ-ಶಾಖಗಳು ಇಲ್ಲದಿದ್ದರೆ ಒಂದು ಕ್ಷಣವೂ ಬದುಕಲಾರೆವು. ಇವೆಲ್ಲಾ ಪ್ರಾಕೃತಿಕ ಕೊಡುಗೆ. ಅವುಗಳ ಅನುಗ್ರಹ ಇರಬೇಕಾದದ್ದು. ಇದ್ದರೆ ಮಾತ್ರ ನಮ್ಮ ಬದುಕು.

ಇಷ್ಟೊಂದು ಅನುಗ್ರಹ ಅನುಕೂಲಕರವಾಗಿದ್ದರೂ ಸಹ ಅವು ನೀಡುವ ಪ್ರಯೋಜನದ ದೃಷ್ಟಿಯಿಂದ ನಾವು ಅವುಗಳ ಬಗ್ಗೆ ಇರಿಸಿಕೊಂಡ ಕಾಳಜೀ ಆಸಕ್ತಿ ತೀರ ಕಡಿಮೆ. ಬೆಳೆಸುವುದಿರಲಿ, ಹಾಳು ಮಾಡದೇ ಇದ್ದರೂ ಅದು ಉಪಕೃತವೆಂದೇ ತಿಳಿಯುತ್ತದೆ. ನಮ್ಮಲ್ಲಿ ವೃಕ್ಷಗಳನ್ನು ನೆಟ್ಟು ಬೆಳೆಸುವವರು ತೀರ ಕಡಿಮೆ. ಪ್ರಕೃತಿಯೇ ಅದಕ್ಕೆ ನೆಲ-ನೀರು-ಬೆಳಕು ನೀಡಿ ಬೆಳೆಸುತ್ತಿರುತ್ತದೆ. ಅದು ವಿಶಾಲವಾಗಿ ಬೆಳೆಸು ಕಾಯಿ-ಎಲೆ-ಹಣ್ಣುಗಳನ್ನೆಲ್ಲಾ ನಮಗೆ ಅನಿರ್ಬಂಧಿತವಾಗಿ ಪಡೆಯಲು ಅವಕಾಶ ನೀಡುತ್ತದೆ. ಮನೆಯ ಸುತ್ತ ಮುತ್ತಲಿನ ಜಾಗದಲ್ಲಿ ಬೆಟ್ಟ, ಕಾಡುಗಳಲ್ಲಿ ಸೊಂಪಾಗಿ ಬೆಳೆದು ಹಸಿರಾಗಿ ಕಂಗೊಳಿಸಿ ತಂಪೆರಚಿ ನಮ್ಮ ಉಸಿರಿಗೆ ಬಲನೀಡಿ ಆರೋಗ್ಯಕ್ಕೆ ಅನುಕೂಲ ಕಲ್ಪಿಸಿದರೂ ಸಹ ಈ ವೃಕ್ಷ ಪ್ರೀತಿ ಯಾಕೆ ಬೆಳೆಯುವುದಿಲ್ಲವೇ ತಿಳಿಯದು. ಅಶ್ವತ್ಥ-ಅತ್ತಿ-ಆಲ ಮುಂತಾದ ವೃಕ್ಷಗಳಿಗೆ ದೇವತಾ ಭಾವವನ್ನು ನೀಡಿದ್ದೂ ಇದೆ. ಅಶ್ವತ್ಥ ವೃಕ್ಷಕ್ಕೆ ಕಟ್ಟೆ ಕಟ್ಟಿ ಉಪನಯನ ಮಾಡಿ ನಿತ್ಯ ಪ್ರದಕ್ಷಿಣೆ ಮಾಡಿದರೆ ಹಲವು ರೋಗಗಳಿಗೂ, ಗ್ರಹಭಾಧೆಗೂ ಪರಿಹಾರವೆಂದು ತಿಳಿಸಲಾಗಿದೆ. ಸಂತಾನವಿಲ್ಲದವರು ಈ ಬಗೆಯ ಪ್ರಯೋಜನ ಪಡೆದ ನಿದರ್ಶನಗಳಿವೆ. ತನ್ನನ್ನು ಕಡಿಯಲು ಬರುವವನಿಗೂ ನೆರಳು ಒದಗಿಸಿ ತಂಪು ತರುವ ಉದಾರ ಮನಸ್ಸು ಅವುಗಳದ್ದು. ನಾವು ಬಿಡುವ ನಿಷಿದ್ಧ ಉಸಿರಾಟದ ಗಾಳಿಯನ್ನು ತಾನು

---

* ಅಂಚೆ : ಹುಣ್ಣೇಕೊಪ್ಪ, ಶಿರಸಿ, ಉತ್ತರ ಕನ್ನಡ







ಹೀರಿಕೊಂಡು ಶುದ್ಧ ಗಾಳಿ ನೀಡಿ ಸತ್ಕರಿಸುವ ಪ್ರವೃತ್ತಿ ಅದರದು. ಆದರೂ ಮನುಷ್ಯ ಕರುಣೆ ತೋರಿಸದೇ ಕಡಿದು ಹಾಕುವುದು ಎಷ್ಟು ನಿಕೃಷ್ಟ-ದುಷ್ಟ ಕಾರ್ಯವೆಂದು ತಿಳಿಯುವುದೇ ಇಲ್ಲ.

ಮಹಾಭಾರತ ಯುದ್ಧಾ ನಂತರ ಶರಶೆಯ್ಯೆಯಲ್ಲಿ ಮಲಗಿದ ಭೀಷ್ಮರ ಹತ್ತಿರ ಧರ್ಮರಾಜ ರಾಜ್ಯಭಾರದ ವಿಚಾರ ಕೇಳುತ್ತಾನೆ. ರಾಜನಾದವನು ಏನೇನು ಮಾಡಬೇಕು, ಪ್ರಜೆಗಳಿಗೆ ಯಾವ ಯಾವ ವ್ಯವಸ್ಥೆ ಕಲ್ಪಿಸಿಕೊಡಬೇಕೆಂದು ತಿಳಿಯಬಯಸುತ್ತಾನೆ. ಆಗ ಭೀಷ್ಮ ಹೀಗೆ ಉಪದೇಶಿಸುತ್ತಾನೆ:

**ಪುಷ್ಪೈಃ ಸುರಗಣಾಃ ವೃಕ್ಷಾಃ**
**ಫಲೈ ಶ್ವಾಪಿ ತಥಾ ಪಿತ್ರೂನ್**
**ಛಾಯಯಾ ಚೌತಿಥಿಂ ತಾತ**
**ಪೂಜಯಂತೀ ಮಹೋ ರುಹಃ ।**

ಬೆಳೆಯುವ ವೃಕ್ಷಗಳು ಹೂಗಳಿಂದ ದೇವತೆಗಳನ್ನು, ಫಲಗಳಿಂದ ಪಿತೃಗಳನ್ನು, ನೆರಳಿನಿಂದ ಅತಿಥಿಗಳನ್ನು ಸತ್ಕರಿಸುತ್ತಾನೆ. ಹೀಗಾಗಿ ವೃಕ್ಷಗಳು ಗೃಹಸ್ಥ ಧರ್ಮಕ್ಕೆ ಸಮಾನವಾದವುಗಳೆಂದು ತಿಳಿಯಬೇಕು.

**ತಸ್ಮಾತ್ತಡಾಗೇ ಸದ್ವೃಕ್ಷಾರೋಪ್ಯಾಃ ಶ್ರೀಯೋರ್ಥಿನಾ**
**ಸದಾ ಪುತ್ರವತೌ ಪರಿಪಾಲ್ಯಾಶ್ಚ**
**ಪುತ್ರಾಸ್ತೇ ಧರ್ಮಾತಃ ಸ್ಮೃತಾಃ ।**

ಹೀಗೆ ಸರೋವರ, ನೀರುಕಾಲುವೆ ದಡಗಳಲ್ಲಿ, ವೃಕ್ಷಗಳನ್ನು ನೆಡುವುದು, ಬೆಳೆಸುವುದನ್ನು ನಮ್ಮ ಪ್ರಾಚೀನರು ಅನುಭವದಿಂದ ತಿಳಿದು ಹೇಳಿದ್ದು. ಈ ವೃಕ್ಷಗಳ ಪೂಜಾ ಆರಾಧನಾ ಕ್ರಮವೂ ಇದೆ. ಪೃಥ್ವಿಯನ್ನು ಪೂಜಿಸುವುದು. ಜಲದೇವತೆಯನ್ನು ಅರ್ಚಿಸುವುದು, ಅಗ್ನಿಯನ್ನು ನಿತ್ಯವೂ ಆರಾಧಿಸುವುದು, ಇವೆಲ್ಲಾ ನಮ್ಮ ಧರ್ಮಸೂತ್ರಗಳಲ್ಲೇ ಸೇರಿವೆ. ಪ್ರಕೃತಿ ಪೂಜೆಯೂ ಉಂಟು. ನಮ್ಮ ರುದ್ರಾಧ್ಯಯದಲ್ಲಿ **"ನಮೋ ವೃಕ್ಷೇಭ್ಯಃ"** ಎಂದು ವೃಕ್ಷರೂಪೇ ರುದ್ರನಿಗೆ ನಮಸ್ಕಾರ ಹೇಳಿದೆ. ಇವುಗಳ ಪ್ರಯೋಜನ ಉಪಯುಕ್ತತೆ ತಿಳಿಸದೇ ಪ್ರಕೃತಿಯನ್ನು ಅದರ ಅಂತರ್ಯದಲ್ಲಿದ್ದ ಸುಪ್ತ ಸಂಪತ್ತನ್ನೂ ಅರಿತು ಮನುಕುಲದ ಈ ಆತ್ಮೀಯ ಸಂಗಾತಿಯ ಪ್ರಭಾವವನ್ನು ಪಡೆದುಕೊಳ್ಳಲೆಂದೇ ಅದಕ್ಕೊಂದು ಪೂಜ್ಯತೆ, ಗೌರವ ತಂದದ್ದಾಗಿದೆ. **"ವೃಕ್ಷೋ ರಕ್ಷತಿ ರಕ್ಷಿತಃ"** ಎಂದೂ ಹೇಳಲಾಗಿದೆ. ಈ ವೃಕ್ಷ ಕಡಿದವನು ಭಿಕ್ಷೆ ಬೇಡಬೇಕಾಗುತ್ತದೆ. ಹಸಿರು ಅಳಿದು ಭೂಮಿ ಬರಡಾದ ಮೇಲೆ ಆತ ಅಲ್ಲಿ ಏನನ್ನು ಬೆಳೆದು ತಿನ್ನುತ್ತಾನೆ. ನೀರಿನ ಅಭಾವವೂ ಆಗಿ ಬಿಸಿಲಿನ ತಾಪದಿಂದ ಕಂಗೆಡುವ ಪರಿಸ್ಥಿತಿ ಪ್ರಸಂಗವೂ ಬರಬಹುದಾದ ಅಪಾಯವಿದೆ.

ಹಿಂದೆ ಕೆಲವು ಪ್ರದೇಶಗಳನ್ನು ಒಳಗೊಂಡು ವೃಕ್ಷ ಸಮೂಹವಿದ್ದ ದೇವರ ವನದಲ್ಲಿ ವರ್ಷದ ಒಂದೆರಡು ಬಾರಿ ವನಭೋಜನದ ವ್ಯವಸ್ಥೆ ಇರುತ್ತಿತ್ತು. ಆಗ ಆ ಪ್ರದೇಶದ ಜನರೆಲ್ಲಾ ಸೇರಿ ಅದಕ್ಕೆ ಸಂಬಂಧಿಸಿದ ದೇವರ ಚಿರಮೂರ್ತಿಯನ್ನು ಒಯ್ದು ಪೂಜಿಸಿ ನೈವೇದ್ಯಕ್ಕಾಗಿ ಋತುಮಾನಕ್ಕೆ ಸಂಬಂಧಿಸಿದ ಖಾದ್ಯಗಳನ್ನೂ ಮಾಡಿ ಅರ್ಪಿಸಿ ಎಲ್ಲರೂ ಒಟ್ಟಿಗೆ ಸೇರಿ ಸಹಭೋಜನ ಮಾಡುವ ಸಂಪ್ರದಾಯವಿತ್ತು. ಇದು ಮೈಗೂ, ಮನಸ್ಸಿಗೂ ಹೆಚ್ಚಿನ ಸ್ವಾಸ್ಥಕ್ಕಾಗಿ ಇಂಥ ಹಲವು ಆಚರಣೆಗಳಿಂದ ಪ್ರಕೃತಿ ಪರಿಸರಗಳನ್ನು ಪ್ರೀತಿಸಲೆಂದೇ ಇದು ಬಂದದ್ದು. ಇಂದು ಅವು ಕೆಲವು ಕಡೆ ಆಚರಣೆಯಿದ್ದರೂ ಕಾಟಾಚಾರಕ್ಕಾಗಿ ಆಗಿ ಬಿಟ್ಟಿದೆ. ಆಚರಣೆ ಮಾತ್ರ ಉಳಿದು ಉದ್ದೇಶ ಮರೆಯಾಗಿ ಬಿಟ್ಟಿದೆ.

ಈ ಪ್ರಕೃತಿ, ಪರಿಸರಗಳಿಂದಲೇ ನಮ್ಮ ಸಂಸ್ಕೃತಿಯು ಬೆಳೆಯುತ್ತಾ ಬಂದಿರುವುದು. ಅದರ ಚೆಲುವು, ನಿಲುವುಗಳಲ್ಲಿ ಶುಚಿ-ರುಚಿಯ ಸಂತೋಷದ ಸಂಸ್ಕಾರ ಸಿಗುತ್ತದೆ. ಈ ಪ್ರಕೃತಿ ಹೀಗೇ ಇರಬೇಕೆಂದು ನಾವು ಹೇಳುವಂತಿಲ್ಲ. ಅದೇ ತನ್ನ ಚಿತ್ರಣ, ಸೌಂದರ್ಯವನ್ನು ರೂಪಿಸಿಕೊಳ್ಳುತ್ತದೆ. ಒಂದೊಂದು ಕಡೆ ಒಂದೊಂದು ವಿಧ. ಮೋಡಗಳ ಚಿತ್ತಾರದಂತೆ, ಪ್ರಕೃತಿಯೇ ಕುಂಚ ಹಿಡಿದು ಬಣ್ಣ ತುಂಬಿದಂತೆ, ವೃಕ್ಷ ರಾಶಿಯಲ್ಲೂ ಎಷ್ಟೊಂದು ಬಣ್ಣವೈವಿಧ್ಯ. ಭೂಮಿಯ ಮಣ್ಣು, ನೀರು ಒಂದೇ ಆದರೂ ವನ್ಯ ವೃಕ್ಷಗಳ ಮೂಲ ಸಂಸ್ಕಾರದಂತೆ ಎಷ್ಟೊಂದು ವರ್ಣಮಯವಾಗಿ ಕಾಣಸಿಗುತ್ತದೆ? ಈ ಬಣ್ಣ ಎಲ್ಲಿಂದ ಬಂತು? ಹೂವಿನಲ್ಲಿ ಮಕರಂದ ಪರಿಮಳವನ್ನು ಯಾರು ತಂದು ತುಂಬಿದರೋ? ಇವನ್ನೆಲ್ಲಾ ಆಲೋಚಿಸಿದರೆ ಆ ಪ್ರಕೃತಿಯ ಬಗ್ಗೆ ಗೌರವ ಮೂಡುವುದಿಲ್ಲವೇ? ವಿಜಯ ದಶಮಿಯಂದು ಶಮೀವೃಕ್ಷ ಪೂಜಿಸುವುದಂತೂ ಪ್ರಾಚೀನ ಪರಂಪರೆ. ಶನಿಗ್ರಹದ ಪೀಡಾ ಅನುಗ್ರಹಕ್ಕಾಗಿಯೂ ಶಮೀವೃಕ್ಷಕ್ಕೆ ಕಟ್ಟೆ ಕಟ್ಟಿ ಅರ್ಚಿಸುವ ಕ್ರಮವನ್ನೂ ಶಾಸ್ತ್ರಗಳಲ್ಲಿ ಹೇಳಿದೆ. ಹಾಗಾಗಿ ಅದನ್ನೇ ದೇವರು ಅಂತಲೂ ತಿಳಿದರು.







ಒಂದರಂತೆ ಇನ್ನೊಂದಿಲ್ಲ. ಅದರಂತೆ ಮತ್ತೊಂದಿಲ್ಲ. ಇವುಗಳದ್ದೇ ವಿರಾಟ ಪ್ರಪಂಚ ಅಂದಾಗ ಅದಕ್ಕೂ ಒಬ್ಬ ಕರ್ತಾರ ಇರಲೇಬೇಕಲ್ಲವೆ ?

ಮಾರ್ಕಾಂಡೇಯ ಮಹರ್ಷಿ ಭವಿಷ್ಯವನ್ನು ನಿರೀಕ್ಷಿಸಿದವನು. ಆತ "ಯಾವದ್ಭೂಮಂಡಲಂಧತ್ತೇ ಸಶೈಲ ವನಕಾನನಂ ತಾವತ್ತಿಷ್ಠತಿ ಮೇದಿನ್ಯಾಂ ಸಂತತಿಃ ಪುತ್ರ ಪೌತ್ರಿಗೇ" ಅಂದರೆ ಈ ಭೂಮಂಡಲದಲ್ಲಿ ಎಲ್ಲಿಯವರೆಗೆ ವನ ಕಾನನಗಳು ಸುಸ್ಥಿರವಾಗಿ ಇರುತ್ತದೆಯೋ ಅಲ್ಲಿಯವರೆಗೂ ನಮ್ಮ ಸಂತತಿಯವರು ಸುಖವಾಗಿ ಇರಬಹುದು ಎಂಬುದು ಅದರ ಸಾರಾಂಶ.

ಮದುವೆಯಾದ ವಧುವು ತನ್ನ ಮನೆಗೆ ಹೋಗುವಾಗ ವಂಶವೃಕ್ಷದ ಸಂಕೇತವಾಗಿ ತೆಂಗಿನ ಗಿಡ, ಇನ್ನಿತರ ಹೂವು ಹಣ್ಣಿನ ಗಿಡ ಒಯ್ಯಬೇಕೆಂಬುದು ಶಾಸ್ತ್ರದ ಆದೇಶ. ಅನಿವಾರ್ಯ ಪ್ರಸಂಗದಲ್ಲಿ ಮರ ಕಡಿಯಲೇಬೇಕಾದಾಗ ಒಂದು ಗಿಡಕ್ಕೆ ಮೂರು ಗಿಡಗಳನ್ನು ನೆಟ್ಟು ಬೆಳೆಸಲೇಬೇಕೆಂಬುದಾಗಿ ಹೇಳುತ್ತಾರೆ. ಗಿಡ ಕಡಿದಾಗ ಪರಿಸರದ ಮೇಲೆ ಆಗುವ ನಷ್ಟವನ್ನು ತುಂಬಿಕೊಡಬೇಕೆಂಬುದು ಇದರ ಅಂತರಾರ್ಥ. ಈ ವೃಕ್ಷಗಳಲ್ಲಿರುವ ಜೀವ ಚೈತನ್ಯವನ್ನು ಹರಣ ಮಾಡುವ ಅಧಿಕಾರ ಮಾನವನಿಗೆ ಇಲ್ಲ. ಅವು ನಮ್ಮ ರಕ್ಷಣೆಗಾಗಿಯೇ ಇದ್ದುದ್ದನ್ನು ನಾವೇ ಕಡಿದರೆ ನಮಗೆ ನಾವೇ ಕೃತಘ್ನರಾಗುತ್ತೇವೆ. ಭವಿಷ್ಯವನ್ನೇ ಹಾಳು ಮಾಡಿ ಕೊಂಡಂತೆ ಆಗುತ್ತದೆ. ಪ್ರಕೃತಿಯೇ ಅದನ್ನು ಬೆಳೆಸಿದ್ದು. ಅವನ್ನು ತರಿದು, ಕಡಿದೂ ಹಾಕುವುದೇ ವಿಕೃತಿ, ಹಾಗೆ ಮಾಡಿದರೆ ನಮ್ಮ ಸಂಸ್ಕೃತಿಯನ್ನೇ ತುಳಿದಂತೆ ಆಗುತ್ತದೆ. ವೃಕ್ಷಗಳನ್ನು ಸೃಷ್ಟಿಸಿ ಬೆಳೆಸುವುದು ಪ್ರಕೃತಿಯ ಧರ್ಮ. ಅದನ್ನು ರಕ್ಷಿಸಿ ಪೋಷಿಸುವುದು ನಮ್ಮ ಸಂಸ್ಕೃತಿಯ ಧರ್ಮ.

## ಶ್ರೀವಾಣಿ

- ಇಲ್ಲಿ ಯಾರು ಶಾಶ್ವತರಲ್ಲ. ನಾಲ್ಕು ದಿನ ಇದ್ದು ಹೋಗುವವರೇ. ಇರುವಷ್ಟು ದಿನ ಪರೋಪಕಾರಿ ಯಾಗಿರಬೇಕು.
- ಮಾತು ಜ್ಯೋತಿರ್ಲಿಂಗ, ನುಡಿದರೆ ಮುತ್ತಿನ ಹಾರದಂತೆ ಲಾವಣ್ಯದಿಂದ ಕೂಡಿರಬೇಕು. ಮಾಣಿಕ್ಯ ದೀಪ್ತಿಯಂತೆ ಅದರ ಹೊಳಪು ತುಂಬಿರಬೇಕು. ಸ್ಫಟಿಕದ ಸಲಾಕೆಯಂತೆ ಪ್ರಕಾಶಮಯವಾಗಿರಬೇಕು.

## 'ಸಿದ್ಧಗಂಗಾ' ಮಾಸಪತ್ರಿಕೆ ಆಜೀವ ಸದಸ್ಯರಲ್ಲಿ ಮನವಿ

ಶ್ರೀಮಠದ ಮುಖವಾಣಿ ಸಿದ್ಧಗಂಗಾ ಮಾಸಪತ್ರಿಕೆಗೆ ಆಜೀವ ಸದಸ್ಯರಾಗಿರುವುದು ಸಂತೋಷ. ಇದರಿಂದ **'ಸಿದ್ಧಗಂಗಾ'** ನಿರಂತರವಾಗಿ ನಿಮ್ಮ ಮನ-ಮನೆ ಬೆಳಗುತ್ತಲಿದೆ. ತಮಗೆ ಮಠದ ಪರವಾಗಿ ಧನ್ಯವಾದಗಳು.

ಕಾಗದ, ಮುದ್ರಣ, ಅಂಚೆ ವೆಚ್ಚ ಇನ್ನಿತರೆ ವೆಚ್ಚಗಳು ದುಬಾರಿಯಾಗಿದ್ದು, ಪತ್ರಿಕೆ ಮುನ್ನಡೆಸಲು ಕಷ್ಟವಾಗುತ್ತದೆ ಎಂಬುದನ್ನು ತಮ್ಮ ಗಮನಕ್ಕೆ ತರುತ್ತಲೇ ಬರುತ್ತಿದ್ದೇವೆ.

ಪ್ರಾರಂಭಕ್ಕೆ ೫೦೦/- ರೂ, ೧೦೦೦/-ರೂ ಆಜೀವ ಸದಸ್ಯರಾಗಲು ಚಂದಾ ಸಂದಾಯ ಮಾಡಿದ್ದಿರಿ. ಇದರಿಂದ ಬ್ಯಾಂಕ್ ಠೇವಣಿಯಿಂದ ಬರುವ ಬಡ್ಡಿ ಕೇವಲ ೫೦/- ರೂ, ೧೦೦/- ಮಾತ್ರ. ಇಷ್ಟು ಕನಿಷ್ಠ ಹಣದಿಂದ ಪತ್ರಿಕೆ ಮುದ್ರಣ ತೊಡಕಾಗಿ ನಷ್ಟವಾಗುತ್ತಿದೆ. ಪ್ರಯುಕ್ತ ಈ ಆರ್ಥಿಕ ಕೊರತೆಯನ್ನು ದಯವಿಟ್ಟು ಅರ್ಥಮಾಡಿ ಕೊಳ್ಳುವಿರೆಂದು ಭಾವಿಸಿದ್ದೇವೆ.

**ಪ್ರಸ್ತುತ ದಶವಾರ್ಷಿಕ ಚಂದಾ, ೨೦೨೫ ವರ್ಷದಿಂದ ೨೫೦೦/- ರೂ ನಿಗದಿ ಮಾಡಿದೆ. ಈ ಮೊತ್ತಕ್ಕೆ ಹೊಂದುವಂತೆ ಹಿಂದೆ ೫೦೦/- ರೂ ಸಂದಾಯ ಮಾಡಿರುವವರು ಬಾಕಿ ೨೦೦೦/- ರೂ ಸಂದಾಯ ಮಾಡಬೇಕು. ೧೦೦೦/- ರೂ ಸಂದಾಯ ಮಾಡಿರುವವರು ಬಾಕಿ ೧೫೦೦/- ಸಂದಾಯ ಮಾಡಲು ಕೋರಿದೆ.**

ದಯಮಾಡಿ ತಮಗೆ ಅನ್ವಯಿಸುವ ಬಾಕಿ ಚಂದಾ ಮೊತ್ತವನ್ನು **ಸಿದ್ಧಗಂಗಾ ಮಾಸಪತ್ರಿಕೆ** ಹೆಸರಿನಲ್ಲಿ **ನಗದು/ಚೆಕ್/ಡಿ.ಡಿ.** ಮೂಲಕ ತಪ್ಪದೆ ಪತ್ರಿಕೆ ಆಜೀವ ಸದಸ್ಯತ್ವದ (LM) ಸಂಖ್ಯೆ ನಮೂದಿಸಿ ದೂರವಾಣಿ/ ಮೊಬೈಲ್ ನಂಬರ್‌ನೊಂದಿಗೆ ಈ ಕೆಳಗಿನ ವಿಳಾಸಕ್ಕೆ ಕಳುಹಿಸಿ ಕೊಡುವುದರ ಮೂಲಕ **'ಸಿದ್ಧಗಂಗಾ'** ಮುನ್ನಡೆಗೆ ಸಹಕರಿಸಬೇಕಾಗಿ ಕಳಕಳಿಯಿಂದ ಪ್ರಾರ್ಥಿಸು ತ್ತೇವೆ. ವಿಳಾಸ ಬದಲಾವಣೆಯಾಗಿದ್ದರೆ ದಯವಿಟ್ಟು ಬದಲಾದ ವಿಳಾಸ ಹಾಗೂ ತಮ್ಮ ದೂರವಾಣಿ ಸಂಖ್ಯೆ ಯನ್ನು ತಮ್ಮ (LM) ಸಂಖ್ಯೆಯೊಂದಿಗೆ ಕಾರ್ಡಿನಲ್ಲಿ ಬರೆದು ಕಳುಹಿಸಿಕೊಟ್ಟರೆ ಪತ್ರಿಕೆ ತಮಗೆ ತಲುಪಲು ಅನುಕೂಲವಾಗುತ್ತದೆ.

**ಪ್ರಕಾಶಕರು,**
**'ಸಿದ್ಧಗಂಗಾ'** ಮಾಸಪತ್ರಿಕೆ,
**ಶ್ರೀ ಸಿದ್ಧಗಂಗಾ ಮಠ, ತುಮಕೂರು ಜಿಲ್ಲೆ-೫೭೨ ೧೦೪.**
**ದೂರವಾಣಿ : ೦೮೧೬-೨೨೮೨೩೨೨**

ವರದಿ

# ಹನ್ನೆರಡನೆ ಶತಮಾನ ಬೆಳಕಿನ ಯುಗವಾಗಿದೆ

**– ಪೂಜ್ಯ ಶ್ರೀ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು**



"ನಾವು ಯಾವ ದೃಷ್ಟಿಯಿಂದ ನೋಡಿದರು, ಹನ್ನೆರಡನೆ ಶತಮಾನ ಬೆಳಕಿನ ಯುಗವಾಗಿದೆ. ಉತ್ತಮ ಸಮಾಜ ನಿರ್ಮಾಣ ಮಾಡಲು ಬಸವಣ್ಣನವರ ತತ್ತ್ವ, ಆದರ್ಶಗಳು ಅನುಕರಣೀಯವಾದವು" ಎಂದು ಪರಮಪೂಜ್ಯ ಶ್ರೀ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳವರು ತಮ್ಮ ಶಿವನುಡಿಗಳಲ್ಲಿ ತಿಳಿಸಿದರು.

ಪರಮಪೂಜ್ಯ ಶ್ರೀಗಳವರು ಮೇ ೨೧ ರಂದು, ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲ್ಲೂಕಿನ ರಾವಂದೂರು ಗ್ರಾಮದಲ್ಲಿ ಬಸವ ಬಳಗ, ಬಸವ ಕೇಂದ್ರ ಶ್ರೀ ಮುರುಘ ಮಠದ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಿದ್ದ ವಿಶ್ವಗುರು ಶ್ರೀ ಬಸವಣ್ಣನವರ ೮೯೩ನೇ ಜಯಂತ್ಯೋತ್ಸವ ಕಾರ್ಯಕ್ರಮದ ದಿವ್ಯಸಾನ್ನಿಧ್ಯ ವಹಿಸಿ ಮಾತನಾಡಿದರು.

ಪೂಜ್ಯ ಶ್ರೀಗಳವರು "ಸಾಮಾಜಿಕವಾಗಿ, ಧಾರ್ಮಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಹಾಗೂ ಸಾಹಿತ್ಯಿಕವಾಗಿ ೧೨ನೇ ಶತಮಾನದಲ್ಲಿ ಬಸವಾದಿ ಶರಣರು ತಮ್ಮ ನಡೆ-ನುಡಿ, ಆದರ್ಶಗಳ ಮೂಲಕ ಜನರಲ್ಲಿ ಅರಿವನ್ನುಂಟು ಮಾಡಿದರು. ಇಂದಿನ ಜನಸಾಮಾನ್ಯರಿಗೆ ಬಸವಣ್ಣನವರ ಆದರ್ಶಗಳ ಬಗ್ಗೆ ಅರಿವು ಉಂಟುಮಾಡುವುದರ ಮೂಲಕ ಅವರ ತತ್ತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವಂತೆ ಪ್ರೇರಣೆ ನೀಡಬೇಕು. ಇದರಿಂದ ಉತ್ತಮ ಸಮಾಜ ನಿರ್ಮಾಣವಾಗಲು ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ಮಹಿಳೆಯರ ಪಾತ್ರ ಬಹಳ ಮುಖ್ಯವಾಗಿದೆ. ಏಕೆಂದರೆ ಮಕ್ಕಳಲ್ಲಿ ಒಳ್ಳೆಯ ಸಂಸ್ಕಾರವನ್ನು ಕಲಿಸಲು ತಾಯಂದಿರ ಪಾತ್ರ ವಿಶೇಷವಾಗಿದೆ. ಪ್ರಸ್ತುತ ಪರಿಸ್ಥಿತಿಯಲ್ಲಿ ಉತ್ತಮ ಸಮಾಜ ನಿರ್ಮಾಣವಾಗಲು ಬಸವಣ್ಣನವರ ತತ್ತ್ವಗಳ ಆಚರಣೆ ಬಹಳ ಮುಖ್ಯವಾದುದು" ಎಂದು ಹೇಳಿದರು.

ಸಮಾರಂಭದಲ್ಲಿ ಉಪಸ್ಥಿತರಿದ್ದ ಪಾಂಡವಪುರದ ಬೇಬಿ ಮಠದ ಪೂಜ್ಯ ಶ್ರೀ ಶ್ರೀ ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮೀಜಿಯವರು ಮಾತನಾಡಿ "ಬೇರೆ ದೇಶದ ಜನರನ್ನು ನಾವು ಮಂಗನಿಂದ ಮಾನವ ಎಂದು ಕರೆಯುತ್ತೇವೆ. ಆದರೆ ಭಾರತೀಯರು ಋಷಿ ಮುನಿಗಳು, ಸಾಧು ಸಂತರು ಹಾಗೂ ಶಿವಶರಣರ ಅನುಯಾಯಿಗಳಾಗಿ ಸಾಗಿದ್ದೇವೆ" ಎಂದು ಹೇಳಿದರು.

ಗೌಡಕೆರೆ ಮಠದ ಪೂಜ್ಯ ಶ್ರೀ ಶ್ರೀ ನಟರಾಜ ಸ್ವಾಮಿಗಳು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ದಾವಂದೂರು ಶ್ರೀ ಮುರುಘಾಮಠದ ಪೂಜ್ಯ ಶ್ರೀ ಶ್ರೀ ಮೋಕ್ಷವರ ಸ್ವಾಮೀಜಿಯವರು ಆಶೀರ್ವಚನ ನೀಡಿದರು. ಈ ಸಂದರ್ಭದಲ್ಲಿ ರಾವಂದೂರು ಗ್ರಾಮದ ಶ್ರೀ ಆರ್.ಎಸ್.ಪ್ರಭು ಲಂಡನ್ ಕಾನ್ಸಿಸ್ ನಗರದ ಸರ್ಕಾರದ ಗವರ್ನರನ್ನು ಮನವಲಿಸಿ ಏಪ್ರಿಲ್ ೨೦ ರಂದು, ಬಸವ ದಿನ ಎಂದು ಘೋಷಣೆ ಮಾಡುವಲ್ಲಿ ಗ್ರಾಮದ ಯುವಕರ ಶ್ರಮ ಅಪಾರವಾದುದು ಎಂದು ಅಭಿನಂದಿಸಿದರು. ಕೆಂಪೇಗೌಡ ಪ್ರಶಸ್ತಿ ವಿಜೇತ, ಪತ್ರಕರ್ತ ಶ್ರೀ ಪ್ರವೀಣ್ ಅವರನ್ನು ಹಾಗೂ ಕಾರ್ಯಕ್ರಮ ಯಶಸ್ವಿಯಾಗಲು ಶ್ರಮಿಸಿದ ದಾನಿಗಳು ಹಾಗೂ ಯುವಕರನ್ನು ಅಭಿನಂದಿಸಲಾಯಿತು.

ಸಮಾರಂಭದಲ್ಲಿ ವಿವಿಧ ಮಠಗಳ ಹರಗುರು ಚರಮೂರ್ತಿಗಳು, ಗ್ರಾಮದ ಮುಖಂಡರು ಹಾಗೂ ಗಣ್ಯರು ಉಪಸ್ಥಿತರಿದ್ದರು.

ವರದಿ

# ವಿದ್ಯಾರ್ಥಿಗಳ ಬಾಳನ್ನು ಬೆಳಗಿಸಿದವರು ಪರಮಪೂಜ್ಯ ಡಾ. ಶ್ರೀ ಶ್ರೀ ಶಿವಕುಮಾರ ಮಹಾಶಿವಯೋಗಿಗಳು



ಸಿದ್ಧಗಂಗಾ ಮಠದ ಪೂಜ್ಯಶ್ರೀ ಶಿವಕುಮಾರ ಮಹಾಶಿವಯೋಗಿಗಳು ತಮ್ಮ ಜೀವನದುದ್ದಕ್ಕೂ ಬಡ ವಿದ್ಯಾರ್ಥಿಗಳ ಬಾಳನ್ನು ಬೆಳಗುವ ಮೂಲಕ ಪ್ರತಿಯೊಬ್ಬರಲ್ಲಿ ಮಾನವೀಯ ಮೌಲ್ಯಗಳನ್ನು ಬಿತ್ತಿದ್ದಾರೆ ಎಂದು ಶ್ರೀ ಮಠದ ಉತ್ತರಾಧಿಕಾರಿಗಳಾದ ಪೂಜ್ಯ ಶ್ರೀ ಶ್ರೀ ಶಿವಸಿದ್ಧೇಶ್ವರ ಸ್ವಾಮಿಗಳು ಹೇಳಿದರು. ಅವರು ಇತ್ತೀಚಿಗೆ ಗುಲ್ಬರ್ಗಾ ಜಿಲ್ಲೆ, ಚಿಂಚೋಳಿಯಲ್ಲಿ ಆಯೋಜಿಸಿದ್ದ ಪರಮಪೂಜ್ಯ ಡಾ. ಶ್ರೀ ಶ್ರೀ ಶಿವಕುಮಾರ ಮಹಾಶಿವಯೋಗಿಗಳ 119ನೇ ಜನ್ಮದಿನೋತ್ಸವ ಹಾಗೂ ಗುರುವಂದನಾ ಸಮಾರಂಭವನ್ನು ಉದ್ಘಾಟಿಸಿ, ಅಶೀರ್ವಚನ ನೀಡಿದರು.

ಪೂಜ್ಯ ಶ್ರೀ ಶ್ರೀ ಶಿವಸಿದ್ಧೇಶ್ವರ ಸ್ವಾಮಿಗಳು ತಮ್ಮ ಮಂಗಳ ನುಡಿಯಲ್ಲಿ "ಗುರುಗಳಾದ ಪೂಜ್ಯಶ್ರೀ ಉದ್ದಾನ ಶಿವಯೋಗಿಗಳು ಕೊಟ್ಟ ಜೋಳಿಗೆಯನ್ನು ಗೂಟಕ್ಕೆ ನೇತು ಹಾಕದೇ ಇಡೀ ನಾಡಿದ್ಯಂತ ಸುತ್ತಾಡಿ, ಲಕ್ಷಾಂತರ ಬಡ ವಿದ್ಯಾರ್ಥಿಗಳ ಬದುಕನ್ನು ಹಸನು ಮಾಡಿದ್ದಾರೆ. ಶ್ರೀಗಳು ನೀಡಿದ ಸಂದೇಶಗಳನ್ನು ಭಕ್ತರೆಲ್ಲರೂ ಪಾಲನೆ ಮಾಡಬೇಕು. ಸಿದ್ಧಗಂಗಾ ಮಠಕ್ಕೆ ಹಳೆಯ ವಿದ್ಯಾರ್ಥಿಗಳು ಬೆನ್ನೆಲುಬಾಗಿದ್ದಾರೆ ಎಂಬುದಕ್ಕೆ ಈ ಸಮಾರಂಭದಲ್ಲಿ ಪಾಲ್ಗೊಂಡಿರುವ ಭಕ್ತರು, ಅಭಿಮಾನಿಗಳು ಹಾಗೂ ಹಿರಿಯ ವಿದ್ಯಾರ್ಥಿಗಳು ಸಾಕ್ಷಿಯಾಗಿದ್ದಾರೆ" ಎಂದು ನುಡಿದರು.

ಈ ಸಂದರ್ಭದಲ್ಲಿ ಉಪಸ್ಥಿತರಿದ್ದ ಪೂಜ್ಯ ಶ್ರೀ ಶ್ರೀ ಕರುಣೇಶ್ವರ ಮಹಾಸ್ವಾಮಿಗಳು ಹಾಗೂ ಚಂದನಕೇರಾದ ಪೂಜ್ಯ ಶ್ರೀ ಶ್ರೀ ಅಭಿನವ ರಾಚೋಟೇಶ್ವರ ಸ್ವಾಮಿಗಳು ಭಕ್ತರನ್ನುದ್ದೇಶಿಸಿ ಮಾತನಾಡಿದರು. ಕಲಬುರಗಿ ಡಿಸಿಸಿ ಬ್ಯಾಂಕ ನಿರ್ದೇಶಕ ಶ್ರೀ ಗೌತಮ ವೈಜನಾಥ ಪಾಟೀಲ, ನಿಡಗುಂದಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಶ್ರೀ ಮುಕುಂದ ದೇಶಪಾಂಡೆ, ಅಖಿಲ ಭಾರತ ವೀರಶೈವ ಲಿಂಗಾಯತ ಸೇಡಂ ತಾಲ್ಲೂಕಾಧ್ಯಕ್ಷ ಶ್ರೀ ರಾಜಶೇಖರ ನೀಲಂಗೆ, ಶ್ರೀ ಜಗನ್ನಾಥ ರೆಡ್ಡಿ ಹಂದರಕಿ ಸೇರಿದಂತೆ ಅನೇಕರು ಭಾಗವಹಿಸಿದ್ದರು. ಈರಗಪಲ್ಲಿ, ಖರ್ಚಖೇಡ, ಕೊಂಡಂಪಳ್ಳಿ, ಕುಪನೂರ ಸೇರಿದಂತೆ ಸುತ್ತ ಮುತ್ತಲಿನ ಗ್ರಾಮದ ಭಕ್ತಾಧಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡು ಆಶೀರ್ವಾದ ಪಡೆದುಕೊಂಡರು.

ಶ್ರೀ ರಾಜಶೇಖರ ಶ್ರೀಗಿರಿಯವರು ಸ್ವಾಗತಿಸಿದರು. ಸಹ ಶಿಕ್ಷಕ ಶ್ರೀ ಸದಾನಂದ ಅವರು ಕಾರ್ಯಕ್ರಮ ನಿರೂಪಿಸಿದರೆ, ಕೊನೆಯಲ್ಲಿ ಶ್ರೀ ಗೌತಮ ಅವರು ಶರಣು ಸಮರ್ಪಣೆ ಮಾಡಿದರು.

## ಕ್ಷೇತ್ರವಾರ್ತೆ

# ಶಿವತತ್ತ್ವ ಚಿಂತನಾಗೋಷ್ಠಿ-೩೪

ಮೇ ೦೧ ರಂದು, 'ಶಿವತತ್ತ್ವ ಚಿಂತನಾಗೋಷ್ಠಿ'ಯ ೩೪ನೇ ಕಾರ್ಯಕ್ರಮವನ್ನು ಶ್ರೀ ಹಳೇಮಠದಲ್ಲಿ ನಡೆಸಲಾಯಿತು. ಇದರ ಅಂಗವಾಗಿ ಶಿವಶರಣರ ವಿಚಾರಧಾರೆಗಳನ್ನು ಕುರಿತ ಉಪನ್ಯಾಸ ಸರಣಿಯನ್ನು ಮುಂದುವರೆಸಲಾಯಿತು.



ಪರಮಪೂಜ್ಯ ಶ್ರೀ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳವರ ದಿವ್ಯಾಶೀರ್ವಾದದೊಂದಿಗೆ ಕಿರಿಯ ಶ್ರೀಗಳಾದ ಪೂಜ್ಯ ಶ್ರೀ ಶ್ರೀ ಶಿವಸಿದ್ದೇಶ್ವರ ಸ್ವಾಮಿಗಳವರು ಹಾಗೂ ವಿವಿಧ ಮಠಗಳ ಹರಗುರು ಚರಮೂರ್ತಿಗಳು ದೀಪ ಬೆಳಗಿಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಈ ಚಿಂತನಾ ಗೋಷ್ಠಿಯಲ್ಲಿ "ಗುರು ಕಾರುಣ್ಯಸ್ಥಲ" ಎಂಬ ವಿಷಯವನ್ನು ಕುರಿತು ವೀರಶೈವ ವಿದ್ವತ್‌ಸೌಧ, ಜಂಗಮವಾಡಿ ಮಠ, ಕಾಶಿ, ಉತ್ತರ ಪ್ರದೇಶದ ವೇದಾಂತಾಚಾರ್ಯ ಶ್ರೀ ಟಿ.ಎಂ.ಅಖಿಲೇಶ್ ಅವರು ಚಿಂತನೆಯನ್ನು ನಡೆಸಿಕೊಟ್ಟರು. "ಜೀವನನ್ನು ಶಿವನನ್ನಾಗಿಸುವಲ್ಲಿ ಗುರುಕಾರುಣ್ಯವೇ ಮೂಲ. ಗುರುಕಾರುಣ್ಯ ಎಂಬುದನ್ನು ಭೌತಿಕದ ಅನುಕೂಲಗಳೆಂದು ಭಾವಿಸದೇ ಮುಕ್ತಿ ಮಾರ್ಗಕ್ಕೆ ಕಾರಣವಾದ ವಸ್ತು ಎಂದು ಭಾವಿಸಬೇಕು. ಅನೇಕ ಜನ್ಮಗಳಲ್ಲಿ ಮಾಡಿದ ಪುಣ್ಯದ ಫಲವಾಗಿ ದೇಹದಲ್ಲಿ ಶಿವಚೈತನ್ಯ ಜಾಗೃತವಾಗುತ್ತದೆ. ಅಂತಹವರು ಲೌಕಿಕದ ವ್ಯವಹಾರದಿಂದ ವಿಮುಖರಾದಾಗ ಅವರಿಗೆ ಗುರುಕಾರುಣ್ಯ ಲಭ್ಯವಾಗುತ್ತದೆ, ಶಿವಪಥವನರಿವೊಡೆ ಗುರುಪಥವೇ ಮೊದಲು" ಎಂದು ತಿಳಿಸಿದರು.

ಪೂಜ್ಯ ಶ್ರೀ ಶ್ರೀ ಶಿವಸಿದ್ದೇಶ್ವರ ಸ್ವಾಮಿಗಳವರು ತಮ್ಮ ತಿಂಗಳ ಬೆಳಕಿನ ನುಡಿಯಲ್ಲಿ, **'ವ್ಯಕ್ತಿ ವಿಕಸನ ಮತ್ತು ರಾಷ್ಟ್ರ ವಿಕಸನ'** ಎನ್ನುವ ವಿಷಯವನ್ನು ಕುರಿತು ಮಾತನಾಡುತ್ತಾ, **'ವ್ಯಕ್ತಿಯ ಬುದ್ಧಿ ಭಾವಗಳು ರಾಷ್ಟ್ರದ ಹಿತದೊಂದಿಗೆ ಸಮ್ಮಿಳಿತಗೊಂಡು ವಿಕಾಸವಾಗಬೇಕು'** ಎಂದು ತಿಳಿಸಿದರು.

ತುಮಕೂರು ಬಸವಕೇಂದ್ರದ ಶ್ರೀಮತಿ ಕುಸುಮ ಜಯದೇವ್‌ರವರು ಪ್ರಾರ್ಥನೆ ಸಲ್ಲಿಸಿದರು. ಗುಮ್ಮಸಂದ್ರದ ರುದ್ರಮುನೀಶ್ವರ ಮಠದ ಕಿರಿಯ ಶ್ರೀಗಳಾದ ಪೂಜ್ಯ ಶ್ರೀ ಶ್ರೀ ಓಂಕಾರಸ್ವಾಮಿಗಳು ಸ್ವಾಗತಿಸಿದರು. ವಿಜಿಪುರ ಬಸವಕಲ್ಯಾಣ ಮಠದ ಕಿರಿಯ ಶ್ರೀಗಳಾದ ಪೂಜ್ಯ ಶ್ರೀ ಶ್ರೀ ಸದಾಶಿವಸ್ವಾಮಿಗಳು ವಚನಾರ್ಥಚಿಂತನೆ ನಡೆಸಿಕೊಟ್ಟರು. ನಂಜನಗೂಡು ಶರಣ ಸಂಗಮ ಮಠದ ಕಿರಿಯ ಶ್ರೀಗಳಾದ ಪೂಜ್ಯಶ್ರೀ ಶಿವಕುಮಾರಸ್ವಾಮಿಗಳು ಶರಣುಸಮರ್ಪಣೆ ಮಾಡಿದರು. ಮುಖ್ಯಶಿಕ್ಷಕರಾದ ಎಸ್.ಪಿ.ಸಿದ್ಧಲಿಂಗಸ್ವಾಮಿ ರವರು ಕಾರ್ಯಕ್ರಮ ನಿರೂಪಿಸಿದರು.

ಹಿರಿಯ ವಿದ್ವಾಂಸರಾದ ಶ್ರೀ ಕೋರಂಬ ಅವರು, ತುಮಕೂರು ಜಿಲ್ಲಾ ಶರಣಸಾಹಿತ್ಯ ಪರಿಷತ್ತು, ತುಮಕೂರು ತಾಲ್ಲೂಕು ಶರಣ ಸಾಹಿತ್ಯ ಪರಿಷತ್ತು, ಜಿಲ್ಲಾ ಮಹಿಳಾ ಬಸವಕೇಂದ್ರ, ಕದಳಿವೇದಿಕೆ ತುಮಕೂರು ಈ ಸಂಸ್ಥೆಗಳ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು, ತುಮಕೂರು ನಗರದ ಶರಣ ಶರಣೆಯರು, ಶ್ರೀಮಠದ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ವರದಿ: ಎಸ್.ಪಿ.ಸಿದ್ಧಲಿಂಗಸ್ವಾಮಿ

ಸ್ಥಾಪನೆ : 1995

ಶುಭಾಶಯಗಳೊಂದಿಗೆ
ಭಾರತೀಯ ರಿಸರ್ವ್ ಬ್ಯಾಂಕ್ ಲೈಸೆನ್ಸ್ ಪುರಸ್ಕೃತ

ದೂರವಾಣಿ : 2277267
ಫ್ಯಾಕ್ಸ್ : 2277267

# ಸಿದ್ಧಗಂಗಾ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿ.,

ಬಿ.ಹೆಚ್.ರಸ್ತೆ, ತುಮಕೂರು-572 102

## ಪ್ರಗತಿ ನೋಟ (31.03.2025ರಲ್ಲಿದ್ದಂತೆ) ಮತ್ತು ಠೇವಣಿಗಳು (ಲಕ್ಷರೂ.ಗಳಲ್ಲಿ)

| | | | |
|---|---|---|---|
| ಸದಸ್ಯರ ಸಂಖ್ಯೆ | 4228 | ಸಾಲಗಳು | 15010.80 |
| ಪಾವತಿಯಾದ ಷೇರು ಬಂಡವಾಳ | 729.80 | ಹೂಡಿಕೆಗಳು | 9223.42 |
| ಆಪದ್ಧನ ಮತ್ತು ನಿಧಿಗಳು | 4980.66 | ದುಡಿಯುವ ಬಂಡವಾಳ | 26116.68 |
| ಠೇವಣಿಗಳು | 20406.21 | ನಿವ್ವಳ ಲಾಭ (ತೆರಿಗೆ ನಂತರ) | 307.34 |

## ಠೇವಣಿ ಮೇಲಿನ ಬಡ್ಡಿ ದರಗಳು

| | | | |
|---|---|---|---|
| 46 ದಿವಸಗಳಿಂದ 90 ದಿವಸಗಳವರೆಗೆ | - ಶೇ. 4% | 181 ದಿವಸಗಳಿಂದ 365 ದಿವಸಗಳವರೆಗೆ | - ಶೇ. 6% |
| 91 ದಿವಸಗಳಿಂದ 180 ದಿವಸಗಳವರೆಗೆ | - ಶೇ. 5% | 1 ವರ್ಷ ಮೇಲ್ಪಟ್ಟು | - ಶೇ. 7.5% |

ಹಿರಿಯ ನಾಗರಿಕರಿಗೆ,
ಒಂದು ವರ್ಷ ಮೇಲ್ಪಟ್ಟ ಠೇವಣಿಗಳ ಮೇಲೆ 1/2 % ಅಧಿಕ ಬಡ್ಡಿ ದರವನ್ನು ಅವರ ಠೇವಣಿಗಳ ಮೇಲೆ ನೀಡಲಾಗುವುದು.
ಐದು ಲಕ್ಷದ ವರೆಗಿನ ಠೇವಣಿಗಳ ಮೇಲೆ ವಿಮಾ ರಕ್ಷಣೆ ಇದೆ.(ಡಿ.ಐ.ಸಿ.ಜಿ.ಸಿ)
ಜಂಟಿ ಸಾಲ, ಗೃಹ ನಿರ್ಮಾಣ ಸಾಲ, ಆಸ್ತಿ ಅಡಮಾನ ಸಾಲ, ಹೊಸ/ಹಳೆಯ ವಾಹನಾಧಾರ ಸಾಲ, ಯಂತ್ರೋಪಕರಣ ಸಾಲ, ವಸ್ತು ಬಳಕೆದಾರ ಸಾಲ, ಮೀರೆಳೆತ, ವೇತನಾಧಾರ, ಚಿನ್ನಾಭರಣ ಸಾಲಗಳಿಗೆ ಬಡ್ಡಿ ದರ ಶೇ.11 ರಿಂದ 14.

## ಶಾಖೆಗಳು :

ಸಿದ್ದಗಂಗಾ ಅರ್ಬನ್ ಕೋ-ಆಪರೇಟೀವ್ ಬ್ಯಾಂಕ್ ಲಿ.,
ಸಿದ್ದಗಂಗಾ ಕಾಲೇಜ್ ಕ್ಯಾಂಪಸ್, ಗಾಂಧಿನಗರ
ಬಿ.ಹೆಚ್,ರಸ್ತೆ, ತುಮಕೂರು-572 101
ಫೋನ್ : 0816-2277273

ಸಿದ್ಧಗಂಗಾ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿ.,
ಕೆ.ಎಸ್.ಆರ್.ಟಿ.ಸಿ. ಬಸ್ ಸ್ಟಾಂಡ್ ರಸ್ತೆ,
ಒಕ್ಕಲಿಗರ ಸಮುದಾಯ ಭವನದ ಎದುರು
ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ.
ಫೋನ್ : 080-29900052

ಸಿದ್ಧಗಂಗಾ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿ.,
ಹಾಸ್ಪಿಟಲ್ ರಸ್ತೆ, ದಾಬಸಪೇಟೆ (ಸೋಂಪುರ)
ನೆಲಮಂಗಲ ತಾ॥, ಬೆಂಗಳೂರು ಗ್ರಾಮಾಂತರ ಜಿಲ್ಲೆ
ಫೋನ್ : 080-27735409

ಸಿದ್ಧಗಂಗಾ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿ.,
ವಿಜಯನಗರ ಶಾಖೆ. 27/1, 3ನೇ ಮುಖ್ಯರಸ್ತೆ, 3ನೇ ಅಡ್ಡರಸ್ತೆ,
ವಿಜಯನಗರ, ಬೆಂಗಳೂರು- 560 040
ಫೋನ್ : 080-23301270

ಶ್ರೀ ಟಿ.ಕೆ. ನಂಜುಂಡಪ್ಪ
ಅಧ್ಯಕ್ಷರು

ಶ್ರೀ ಕೆ.ಎಸ್. ಶಂಕರಯ್ಯ
ಉಪಾಧ್ಯಕ್ಷರು

ನಿರ್ದೇಶಕರು

| | | |
|---|---|---|
| ಶ್ರೀ ಮಹೇಶಪ್ಪ | ಶ್ರೀ ಬಿ.ಎಸ್. ರುದ್ರೇಶಯ್ಯ | ಶ್ರೀ ಎಸ್. ವಿಶ್ವನಾಥ್, CA |
| ಡಾ॥ ಆರ್.ಸಿ. ಪುಟ್ಟಬುದ್ದಿ | ಶ್ರೀ ಟಿ.ಎಮ್. ಸ್ವಾಮಿ | ಡಾ॥ ಶಿವಕುಮಾರಯ್ಯ |
| ಶ್ರೀಮತಿ ಮಂಜುಳಾ ಪ್ರಸಾದ್ | ಶ್ರೀ ರಾಮಯ್ಯ | ಡಾ॥ ರೇಣುಕಾ ಲತಾ. ಎಸ್. |
| ಡಾ. ಎಸ್. ಪರಮೇಶ್ | ಶ್ರೀ ಚಿಕ್ಕಯ್ಯ. ಆರ್. | ಶ್ರೀ ಕೆ.ಎಮ್. ಸ್ವಾಮಿ |

ವ್ಯವಸ್ಥಾಪನಾ ಮಂಡಳಿ : ಶ್ರೀ ಬಿ.ಎಸ್. ರುದ್ರೇಶಯ್ಯ, ಅಧ್ಯಕ್ಷರು
ನಿರ್ದೇಶಕರು : ಶ್ರೀ ಎಸ್.ವಿಶ್ವನಾಥ್ CA, ಶ್ರೀ ಎಸ್. ವಿಶ್ವನಾಥಯ್ಯ,
ಪ್ರೊ.ಪಿ.ಪರಮಶಿವಯ್ಯ, ಶ್ರೀ ಸಿ.ಆರ್. ರಮೇಶ್,

ಹೆಚ್.ಕೆ. ಶಿವಪ್ರಕಾಶ್
ಮುಖ್ಯಕಾರ್ಯನಿರ್ವಹಣಾಧಿಕಾರಿಗಳು

"Siddaganga" Monthly - Postal Reg. No. L2/RNP/385/TMR/2024-26
Posted at RMS, Tumkur-572 102

RNI No. 17139/69




# ಸಿದ್ದಗಂಗಾ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ



ಡಾ. ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮೀಜಿ ಆಸ್ಪತ್ರೆ

## ಆರೋಗ್ಯ ದಾಸೋಹದಡಿಯಲ್ಲಿ

**ಉಚಿತ***

- ದಾಖಲಾತಿ
- ವೈದ್ಯರ ಸಂದರ್ಶನ
- ಹಾಸಿಗೆ
- ಅಹಾರ

* ಔಷಧಿ, ರೇಡಿಯಾಲಜಿ ಹಾಗೂ ಲ್ಯಾಬ್ ಸೇವೆಗಳನ್ನು ಹೊರತುಪಡಿಸಿ




**ರಿಯಾಯಿತಿ ದರದಲ್ಲಿನ ಸೇವೆಗಳು**

- ಹೆರಿಗೆ ಸೇವೆಗಳು
- ಶಸ್ತ್ರಚಿಕಿತ್ಸೆ
- ಐಸಿಯು
- ಸೂಪರ್ ಸ್ಪೆಷಾಲಿಟಿ ಸೇವೆಗಳು

0816-2602222 | smcri.edu.in | Siddagangamedicalcollege | siddaganga_hospital

ಡಾ|| ಶಿವಕುಮಾರಸ್ವಾಮೀಜಿ ರಸ್ತೆ, (ಬಿ.ಹೆಚ್. ರಸ್ತೆ), ತುಮಕೂರು


To

If undelivered please return to :
Editor
Siddaganga Monthly Magazine
Siddaganga Math
Tumkur-572 104

Cover printed at : Geetanjali Graphics, B-71, KSSIDC Indl. Area, 6th Block, Rajajinagar, Bengaluru-10, Ph : 23404232

email ID : geetanjaligraphics@gmail.com